ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದಗಳೊಂದಿಗೆ





# ಯೋಗೇಶ್ವರ ಸಂದೇಶಗಳು


ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್

ಕನ್ನಡ ಅನುವಾದ :

ಸುಮಲತ ಜಿ.ಎಸ್. ರಾಜು






ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದದೊಂದಿಗೆ

# ಯೋಗೀಶ್ವರರ ಸಂದೇಶಗಳು

ತಟವರ್ತಿ ವೀರರಾಘವರಾವು

ಕನ್ನಡ ಅನುವಾದ : **ಸುಮಲತ ಜಿ.ಎಸ್. ರಾಜು**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ರಾಮನಗರ ಬೆಂಗಳೂರು

**Yogeswarara Sandesagalu**
Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.
**M.: 9449695503, 8050082689**

| | | |
|---|---|---|
| ಮೊದಲನೇ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 40/– |
| ಪುಟಗಳು | : | iii+46= 49 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :
**ಪೂರ್ಣಾ ಗ್ರಾಫಿಕ್ಸ್,**
ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್. ಎನ್. ಶ್ರೀನಿವಾಸ** ಮತ್ತು

**ಎಸ್. ಎನ್. ವಿಜಯಲಕ್ಷ್ಮಿ ಸಂಸ್ಥಾಪಕರು,** ಶ್ರೀರಾಮಧಾಮ ಧ್ಯಾನಕೇಂದ್ರ

# ಯೋಗೀಶ್ವರರ ಸಂದೇಶಗಳು

ಯೋಗೀಶ್ವರರು ಎಂದರೆ ಸಾಮಾನ್ಯವಾದವವರಲ್ಲ, ಯೋಗಿಗಳಲ್ಲಿ ಶ್ರೇಷ್ಠರು. ಬುದ್ಧ ಅವರನ್ನು ಉತ್ತಮ ಪುರುಷ ಎಂದು ಕರೆದನು. ಶ್ರೀ ಕೃಷ್ಣ ಅವರನ್ನು ವಿದ್ವಾಂಸರು ಎಂದು ಕರೆದನು. ಪತ್ರೀಜಿ ಅವರನ್ನು ಯೋಗೀಶ್ವರರು ಎಂದು ಕರೆದರು. ಮತ್ತು ಅವರೆಲ್ಲರೂ ಸೃಷ್ಟಿಯಲ್ಲಿ ಶ್ರೇಷ್ಠ ಸ್ಥಾನಕ್ಕೆ ಏರಿದರು. ಅವರ ಗುರಿ ಏನೆಂದರೆ? ಪ್ರತಿಯೊಬ್ಬರೂ ಆ ಮಟ್ಟವನ್ನು ತಲುಪಬೇಕು ಎಂಬುದೇ ಅವರ ಗುರಿ. ಆದ್ದರಿಂದ ಆ ಮಟ್ಟವನ್ನು ತಲುಪಲು ಏನು ಮಾಡಬೇಕೆಂದು ಅವರು ಸಾಮಾನ್ಯ ಜನರಿಗೆ ಬೋಧಿಸಿದರು.

ಅವುಗಳ ಬಗ್ಗೆಯೇ ಈಗ ನಾವು ತಿಳಿದುಕೊಳ್ಳುತ್ತಿದ್ದೇವೆ. ಪತ್ರಿಯವರು ಭೂಮಿಗೆ ಬಂದ ಕಾರಣವೂ ಅದೇ. ಎಲ್ಲರಲ್ಲಿನ ಅಜ್ಞಾನವನ್ನು ತೊಲಗಿಸಿ ಜ್ಞಾನವಂತರನ್ನಾಗಿ ಮಾಡುವುದಕ್ಕಾಗಿಯೇ. ಅವರು ಬದುಕಿದ್ದಷ್ಟು ಸಮಯ ಅವಿಶ್ರಾಂತವಾಗಿ ಕೆಲಸ ಮಾಡಿದರು. ಆದ್ದರಿಂದ ಆ ಸಂದೇಶಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಆಚರಣೆಗೆ ತರುವವರಿಗೆ ಯಾವುದೇ ರೀತಿಯ ಹಿಂತಿರುಗುವ ಅವಕಾಶವಿಲ್ಲ.

ಅವರು ಸಹ ಯೋಗಿಗಳಂತೆ ಶ್ರೇಷ್ಠರಾಗುತ್ತಾರೆ. ಅದಕ್ಕಾಗಿಯೇ ನಾವು ತುಂಬಾ ಅಧ್ಯಯನ ಮಾಡುತ್ತಿದ್ದೇವೆ ಮತ್ತು ತಿಳಿಯುತ್ತಿದ್ದೇವೆ. ಪತ್ರೀಜಿ ಒಂದು ಸಂದರ್ಭದಲ್ಲಿ ಹೇಳಿದರು ಈಗ ನಾನು ನಿಮಗೆ ಹೊಸದೇನನ್ನು ಹೇಳುತ್ತಿಲ್ಲ. ಅನೇಕ ಯೋಗಿಗಳು ಮತ್ತು ವಿದ್ವಾಂಸರು ಈಗಾಗಲೇ ಹೇಳಿದ್ದನ್ನು ನಾನು ನಿಮಗೆ ಹೇಳುತ್ತಿದ್ದೇನೆ. ಅದರ ಆಧಾರದ ಮೇಲೆ ಅವರೆಲ್ಲರೂ ಹೇಳಿದ್ದು ಎಷ್ಟು ಶ್ರೇಷ್ಠ ಎಂದು ಅರ್ಥ ಮಾಡಿಕೊಳ್ಳಿ.

ಆದ್ದರಿಂದ ಅವುಗಳನ್ನು ನಾವು ಸುಲಭವಾಗಿ ತೆಗೆದು ಹಾಕಬಾರದು. ಅವುಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಏಕೆಂದರೆ ಅವರು ದೇಹಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಿಲ್ಲ, ಕಾರಣ ದೇಹ ಆಶಾಶ್ವತ, ಕೆಲವು ದಿನಗಳು ಇರುತ್ತದೆ ನಂತರ ಬೂದಿಯಾಗುತ್ತದೆ ಅಂದರೆ ನಶಿಸಿ ಹೋಗುತ್ತದೆ, ಆದರೆ ಆತ್ಮ ಶಾಶ್ವತ, ಆದ್ದರಿಂದ ಅವರು ಏನೇ ಹೇಳಿದರೂ ಆತ್ಮದ ಬಗ್ಗೆಯೇ, ಆತ್ಮಕ್ಕಾಗಿಯೇ ಹೇಳುತ್ತಾರೆ.

ಮಹಾನ್ ವ್ಯಕ್ತಿಗಳು ದೇಹದ ಬಗ್ಗೆ ಹೇಳಿದ್ದಾರೆ ಎಂದುಕೊಂಡರೆ ನೀವು ತುಂಬಾ ಅಜ್ಞಾನಿಗಳು ಎಂದುಕೊಳ್ಳಬೇಕು. ಅವರು ದೇಹದ ಬಗ್ಗೆ ಹೇಳುವುದಿಲ್ಲ, ದೇಹದ ಪ್ರಯೋಜನಗಳ ಬಗ್ಗೆ ಹೇಳುವುದಿಲ್ಲ, ಆತ್ಮದ ಬಗ್ಗೆ ಹೇಳುತ್ತಾರೆ, ಆತ್ಮದ ಪ್ರಯೋಜನಗಳ ಬಗ್ಗೆಯೇ ಹೇಳುತ್ತಾರೆ, ಆತ್ಮದ ಉನ್ನತಿಗಾಗಿಯೇ ಹೇಳುತ್ತಾರೆ. ಆದ್ದರಿಂದ ನಮಗೆ ಮಹಾನ್ ವ್ಯಕ್ತಿಗಳು ಹೇಳುವುದರಲ್ಲಿ ಬಾಹ್ಯ ಅರ್ಥ ತಿಳಿಯುತ್ತದೆಯೇ ಹೊರತು,

ಅಂತರಾರ್ಥ ತಿಳಿಯುವುದಿಲ್ಲ. ನಾವು ಅದನ್ನು ತಿಳಿದುಕೊಳ್ಳಬೇಕು ಉಪನಿಷತ್ತುಗಳಲ್ಲಿ ವೇದವ್ಯಾಸರು ಹೇಳಿರುವಂತಹ ವಿಷಯವನ್ನು ಈ ದಿನ ತಿಳಿದುಕೊಳ್ಳೋಣ. ಅದೇನಂದರೆ

**"ಪರೋಪಕಾರ ಪುಣ್ಯ, ಪರಪೀಡನೆ ಪಾಪ"**

ಇದರರ್ಥ ಪರಲೋಕದಲ್ಲಿರುವ ಆತ್ಮಕ್ಕೆ ಉಪಕಾರ ಮಾಡುವುದು ಪುಣ್ಯ, ಪರಲೋಕದಲ್ಲಿರುವ ಆತ್ಮಕ್ಕೆ ಕೆಡುಕು ಮಾಡುವುದು ಪಾಪ. ಅಂದರೆ ಆತ್ಮಕ್ಕೆ ಒಳಿತು ಮಾಡುವುದು ಪುಣ್ಯ, ಆತ್ಮಕ್ಕೆ ಅಪಕಾರ ಮಾಡುವುದು ಪಾಪ ಎಂದು ತಿಳಿದುಕೊಳ್ಳಬೇಕು.

ಪರೋಪಕಾರವನ್ನು ಸಾಮಾನ್ಯವಾಗಿ ಇತರರಿಗೆ ಉಪಕಾರವನ್ನು ಮಾಡುವುದು ಎಂದು ಅರ್ಥೈಸಲಾಗುತ್ತದೆ. ನಾವು ಯಾವುದೇ ಕೆಲಸ ಮಾಡಿದರು ಅದು ಆತ್ಮಕ್ಕೆ ಪ್ರಯೋಜನಕಾರಿಯೇ? ಅಥವಾ ದೇಹಕ್ಕೆ ಪ್ರಯೋಜನಕಾರಿಯೇ? ಎಂದು ಯೋಚಿಸಬೇಕು ಎಂದು ನಾವು ಹೇಳುತ್ತೇವೆ .ಏಕೆಂದರೆ ಈ ದೇಹವು ಆತ್ಮದ ಪ್ರಯೋಜನಕ್ಕಾಗಿಯೇ ಇದೆ.

ಆದ್ದರಿಂದ ಈ ದೇಹದಿಂದ ಆತ್ಮಕ್ಕೆ ಪ್ರಯೋಜನವನ್ನು ಉಂಟು ಮಾಡುವ, ಲಾಭವನ್ನುಂಟು ಮಾಡುವ ಕೆಲಸಗಳೇ ಪುಣ್ಯ. ಆ ಪುಣ್ಯವೇ ಮಾನವನನ್ನು ಮೋಕ್ಷದತ್ತ ಕೊಂಡೊಯ್ಯಬಲ್ಲದು ಆತ್ಮಕ್ಕೆ ಹಾನಿಯನ್ನು ಉಂಟು ಮಾಡುವ, ಅಪಕಾರವನ್ನುಂಟು ಮಾಡುವ ಕೆಲಸಗಳನ್ನು ಮಾಡಿದರೆ, ಆತ್ಮವೂ ಉನ್ನತ ಲೋಕಗಳಲ್ಲಿ ಅಲ್ಲದೇ ಅಧೋಲೋಕಗಳಲ್ಲಿ (ಕೆಳಗಿನ ಲೋಕಗಳು) ಉಳಿಯಬೇಕಾಗುತ್ತದೆ. ಪರಲೋಕಗಳಿಂದ ಇಲ್ಲಿಗೆ ಬಂದದ್ದು ಆತ್ಮದ ಲಾಭಕ್ಕಾಗಿಯೇ ಹೊರತು ನಷ್ಟವನ್ನುಂಟು ಮಾಡುವುದಕ್ಕಾಗಿ ಅಲ್ಲ ಅಲ್ಲವೇ?

ಪತ್ರೀಜಿಯವರು ಒಂದು ವಿಷಯವನ್ನು ಹೇಳಿದ್ದಾರೆ. ಅದೇನೆಂದರೆ ಇತರರಿಗೆ ನಷ್ಟವನ್ನುಂಟು ಮಾಡಿದರೆ ನೋವನ್ನುಂಟು ಮಾಡಿದರೆ, ದುಃಖವನ್ನುಂಟು ಮಾಡಿದರೆ, ಅದನ್ನು ಪಾಪ ಎಂದಿದ್ದಾರೆ. ಅದೇ ರೀತಿ ಇತರರಿಗೆ ಲಾಭವನ್ನುಂಟು ಮಾಡಿದರೆ, ಇತರರಿಗೆ ಸೇವೆಯನ್ನು ಮಾಡಿದರೆ, ಅದನ್ನು ಪುಣ್ಯ ಎಂದಿದ್ದಾರೆ. ಇವೆರಡು ಅಂದರೆ ಪಾಪ ,ಪುಣ್ಯ ಎಂದು ಅನೇಕ ಜನರಿಗೆ ತಿಳಿದಿದೆ. ಆದರೆ ನಿನಗೆ ನೀನು ಉಪಕಾರ ಮಾಡಿಕೊಂಡರೆ  ಅದನ್ನು ಮೋಕ್ಷ ಎಂದಿದ್ದಾರೆ. ನಿನಗೆ ಅಂದರೆ? ಆತ್ಮ.

ಆತ್ಮಕ್ಕೆ ಒಳ್ಳೆಯದನ್ನು ಮಾಡಿದಾಗ ಮಾತ್ರ ಮೋಕ್ಷ ಬರುತ್ತದೆ ಎಂಬುದನ್ನು ನಾವು ಮರೆಯಬಾರದು. ಆತ್ಮಕ್ಕೆ ಯಾವುದು ಪ್ರಯೋಜನ? ಅಂದರೆ ಆತ್ಮದ ಸೇವೆಯ ಬಗ್ಗೆ ನಾವು ಮಾತನಾಡುತ್ತಿದ್ದೇವೆ. ಆದ್ದರಿಂದ ಪಾಪವೂ ಅಲ್ಲ, ಪುಣ್ಯವೂ ಅಲ್ಲ ಆತ್ಮದ

ಸೇವೆಗಳನ್ನು ಮಾಡಬೇಕು ಎಂದು ತಿಳಿದುಕೊಳ್ಳಬೇಕು. ಆತ್ಮಕ್ಕೆ ಪ್ರಯೋಜನವಾಗುವ ಸೇವೆಗಳನ್ನು ಮಾತ್ರ ಮಾಡಬೇಕು ಎಂದು ಪತ್ರಿಯವರು ಹೇಳುತ್ತಿದ್ದರು.

ಏಕೆಂದರೆ ನಾನು ಪತ್ರಿಯವರನ್ನು ಭೇಟಿಯಾದ ನಂತರ ನನಗೆ ಅರ್ಥವಾಯಿತು. ಮೊದಲು ನನಗೆ ಇಷ್ಟೊಂದು ತಿಳುವಳಿಕೆ ಇರಲಿಲ್ಲ. ಮೊದಲ ಬಾರಿಗೆ ಪತ್ರೀಜಿ ಭೀಮಾವರಂಗೆ ಬಂದಾಗ ನಾನು ಮಾಡುತ್ತಿದ್ದ ಕೆಲವು ಸೇವೆಗಳನ್ನು ಅವರಿಗೆ ತೋರಿಸಿದೆ. ವೆಂಕಟೇಶ್ವರ ಸ್ವಾಮಿ ದೇವಸ್ಥಾನವನ್ನು ನಿರ್ಮಿಸುವುದು ಮತ್ತು ಹೋಮಿಯೋಪತಿ ಚಿಕಿತ್ಸಾಲಯವನ್ನು ನಡೆಸುವುದು, ಮಹಿಳೆಯರಿಗೆ ಉಚಿತವಾಗಿ ರಾಜ್ಯಲಕ್ಷ್ಮಿ ಮೇಡಂ ಅವರಿಂದ ತರಬೇತಿ ಕೇಂದ್ರವನ್ನು ಸ್ಥಾಪಿಸುವುದು ಇನ್ನೂ ಅನೇಕ ಸೇವೆಗಳನ್ನು ಮಾಡುತ್ತಿದ್ದೆವು.

ಅದಕ್ಕಿಂತ ಮುಂಚೆ ಇನ್ನೊಬ್ಬ ಗುರುಗಳು ಬಂದು ಆ ಸೇವೆಗಳನ್ನು ನೋಡಿ ಬಹಳ ಸಂತೋಷಪಟ್ಟರು. ಪ್ರಜೆಗಳ ಬಂಧುಗಳು ಎಂಬ ಬಿರುದು ನೀಡಿ ನಮ್ಮನ್ನು ಸತ್ಕರಿಸಿದರು. ನನಗೆ ಬಹಳ ಸಂತೋಷವಾಯಿತು, ಆದರೆ ಪತ್ರೀಜಿ ಇವುಗಳನ್ನೆಲ್ಲಾ ನೋಡಿ ಸಹ ಏನು ಮಾತನಾಡಲಿಲ್ಲ. ಅವರು ತಮ್ಮ ಮುಖವನ್ನು ಹೇಗೆ ಬದಲಾಯಿಸಿಕೊಂಡರು ಎಂದರೆ ಇವು ಎಂತಹ ಕೆಲಸಗಳು ಎಂಬಂತೆ ಇತ್ತು ಅವರ ಮುಖ.

ನನಗೆ ಆಶ್ಚರ್ಯವಾಯಿತು ಇಂತಹ ಉನ್ನತವಾದ ಕೆಲಸಗಳನ್ನು ಮಾಡುತ್ತಿದ್ದರೆ, ಅವರು ಅಷ್ಟೊಂದು ಹೊಗಳಿದರೆ, ಇವರು ಒಂದು ಮಾತು ಸಹ ಆಡಲಿಲ್ಲ ಎಂದು ಭಾವಿಸಿದೆ. ನನಗೇನೂ ಅರ್ಥವಾಗಲಿಲ್ಲ. ಆದರೆ ನಂತರ ಅರ್ಥವಾಯಿತು. ಅವರು ಭೀಮಾವರಂಗೆ ಬರುವ ಮೊದಲು ವಿಜಯವಾಡಕ್ಕೆ ಬಂದಿದ್ದರು ಎಂದು ತಿಳಿದು ನಾನು ವಿಜಯವಾಡ ರಾಘವರಾವ್ ರವರ ಮನೆಗೆ ಹೋದೆ. ಅಲ್ಲಿ ಅವರು ಏನು ಮಾಡಿದರೆಂದರೆ ಒಂದು ಕಾನ್ಸೆಪ್ಟ್ ಹೇಳಿದರು. ವಿಶೇಷವಾಗಿ ನನಗಾಗಿಯೇ ಹೇಳಿದರು ಎಂದು ನಾನು ಭಾವಿಸಿದೆ. ಅವರು ನನಗಾಗಿಯೇ ಆ ಕಾನ್ಸೆಪ್ಟ್ ಹೇಳಿದರು.

ಅವರು ಹೇಳಿದ್ದು ಏನೆಂದರೆ ಜಗತ್ತಿನಲ್ಲಿ ಎಲ್ಲರೂ 'ಮಾನವ ಸೇವೆಯೇ ಮಾಧವ ಸೇವೆ' ಎಂದು ಭಾವಿಸುತ್ತಾರೆ. ಅಲ್ಲ ಅಲ್ಲ 'ಮಾಧವ ಸೇವೆಯೇ ಮಾನವ ಸೇವೆ' ಎಂದು ಹೇಳಿದ್ದಾರೆ. ಅವರು ಹೇಳುವ ಎಲ್ಲವೂ ವಿರುದ್ಧವಾಗಿಯೇ ಕಾಣುತ್ತವೆ. ಕಾರಣವೆಂದರೆ ಪ್ರತಿಯೊಬ್ಬರು ತಾವು ಕೇವಲ ದೇಹ ಎಂಬ ಕಲ್ಪನೆಯನ್ನು ಹೊಂದಿರುತ್ತಾರೆ.

ಮಾಧವ ಸೇವೆ ಎಂದರೆ ಆತ್ಮದ ಸೇವೆ. ಆತ್ಮವೇ ಮಾಧವ. ಆತ್ಮದ ಸೇವೆಯೇ ನಿಜವಾದ ಸೇವೆ ಎಂದು ಅವರು ಹೇಳಿದ್ದಾರೆ. ಮಾಧವ ಸೇವೆಯೇ ಮಾನವ ಸೇವೆ

ಎಂಬ ಪತ್ರೀಜಿ ಬರೆದಿರುವ ಪುಸ್ತಕವೂ ಇದೆ. ಅದಕ್ಕಾಗಿಯೇ ನಾನು ಉಚಿತ ಹೋಮಿಯೋಪತಿ ಆಸ್ಪತ್ರೆಯನ್ನು ಮುಚ್ಚಿದೆ. ಮಹಿಳೆಯರಿಗಾಗಿ ಮೇಡಂ ನಡೆಸುತ್ತಿದ್ದ ಉಚಿತ ತರಬೇತಿ ಕೇಂದ್ರವನ್ನು ಮುಚ್ಚಿದೆ. ನಾವು ತಂಪಾಗಿರುವ ನೀರನ್ನು ಪೂರೈಸುತ್ತಿದ್ದೆವು. ಹೀಗೆ ನಾನು ಎಲ್ಲವನ್ನು ನಿಲ್ಲಿಸಿದೆ.

ಕಾರಣವೇನೆಂದರೆ ಇವೆಲ್ಲಾ ಇತರರ ದೇಹಕ್ಕೆ ಲಾಭವನ್ನು ನೀಡುತ್ತವೆ. ಈ ದೈಹಿಕ ಸೇವೆಗಳಿಂದ ದೇಹವು ಪ್ರಯೋಜನ ಪಡೆಯುತ್ತದೆ, ಆದರೆ ದೇಹವು ಅಶಾಶ್ವತವಾಗಿದೆ. ಆದ್ದರಿಂದ ಫಲಿತಾಂಶವೂ ತಾತ್ಕಾಲಿಕವಾಗಿರುತ್ತದೆ.

ಆದರೆ ನಾನು ಆತ್ಮ. ಶಾಶ್ವತ ಆತ್ಮಕ್ಕೆ ಆಗುವ ಪ್ರಯೋಜನ ಶಾಶ್ವತ. ಆತ್ಮಕ್ಕೆ ಆಗುವ ಪ್ರಯೋಜನದಿಂದಾಗಿ ಆತ್ಮವು ಉನ್ನತ ಸ್ಥಿತಿಯನ್ನು ಪಡೆಯುತ್ತದೆ. ಅದು ಶಾಶ್ವತವಾಗಿ ಉಳಿಯುತ್ತದೆ ಎಂದು ಅರ್ಥವಾಯಿತು.

ಆಗ ನಾವು ಭೀಮವರಂನಲ್ಲಿ ಮೂರು ದಿನಗಳ ತರಗತಿಗಳನ್ನು ಆಯೋಜಿಸಲು ಪ್ರಾರಂಭಿಸಿದೆವು. ಎಲ್ಲಾ ಹಳ್ಳಿಗಳಲ್ಲಿ ಈ ಧ್ಯಾನವನ್ನು ಕಲಿಸಲು ಮತ್ತು ಇದೇ ರೀತಿಯ ಕಾರ್ಯಕ್ರಮಗಳನ್ನು ಮಾಡಲು ಪ್ರಾರಂಭಿಸಿದೆವು. ಅದಕ್ಕಾಗಿಯೇ ನಾನು ಆತ್ಮಜ್ಞಾನ ಬೋಧಿಸುವುದಕ್ಕೆ ಮೊದಲ ಆದ್ಯತೆಯನ್ನು ನೀಡುತ್ತೇನೆ.

ಆತ್ಮವು ಶ್ರೇಷ್ಠವಾಗಿರುವುದರಿಂದ ಎಲ್ಲಕ್ಕಿಂತ ಶ್ರೇಷ್ಠ ಸೇವೆ ಎಂದರೆ ಆತ್ಮಜ್ಞಾನವನ್ನು ಕಲಿಸುವುದು, ಎಲ್ಲರನ್ನೂ ಜ್ಞಾನಿಗಳನ್ನಾಗಿ ಮಾಡುವುದು ಮತ್ತು ಎಲ್ಲರೊಳಗಿನ ಅಜ್ಞಾನವನ್ನು ಹೋಗಲಾಡಿಸುವುದು. ಇದಕ್ಕಿಂತ ದೊಡ್ಡ ಸೇವೆ ಇನ್ನೊಂದಿಲ್ಲ ಮತ್ತು ಈ ಸೇವೆಯನ್ನು ಮಾಡುವವರು ಪತ್ರೀಜಿಯಂತೆ ಮಹಾನ್ ಜ್ಞಾನಿಗಳಾಗುತ್ತಾರೆ.

ನಾನು ಕೆಲವು ಹಿಮಾಲಯ ಯೋಗಿಗಳ ಅನುಭವಗಳನ್ನು ಸಹ ಓದಿದ್ದೇನೆ. ಹಿಮಾಲಯದಲ್ಲಿ ಪ್ರಕೃತಿ ಅವರಿಗೆ ತುಂಬಾ ಬೆಂಬಲ ನೀಡುತ್ತದೆ. ಪ್ರಕೃತಿ ಅವರ ಬಗ್ಗೆ ಏಕೆ ಆಸಕ್ತಿ ಮತ್ತು ಪ್ರೀತಿ ಹೊಂದಿದೆ? ಅದು ಅವರ ಬಗ್ಗೆ ಏಕೆ ಹೆಚ್ಚು ಗಮನಹರಿಸುತ್ತದೆ ಎಂದು ನಾನು ಭಾವಿಸುತ್ತಿದ್ದೆ. ಆದರೆ ನಂತರ ಪ್ರಕೃತಿ ಅವರಿಗೆ ಬೆಂಬಲ ನೀಡುತ್ತದೆ ಏಕೆಂದರೆ ಭವಿಷ್ಯದಲ್ಲಿ ಅವರು ತಮ್ಮ ಜೀವನದಲ್ಲಿ ಗಳಿಸಿದ ಜ್ಞಾನವನ್ನು ಎಲ್ಲರಿಗೂ ಕಲಿಸುತ್ತಾರೆ ಎಂಬ ಉದ್ದೇಶದಿಂದ ಎಂದು ನನಗೆ ತಿಳಿಯುತ್ತದೆ.

ಆದ್ದರಿಂದ ಸತ್ಯವನ್ನು ಅಂದರೆ ಆತ್ಮವನ್ನು ತ್ಯಜಿಸಬೇಡಿ, ಆತ್ಮಜ್ಞಾನವನ್ನು ಸಂಪಾದಿಸಿ, ಎಲ್ಲರಿಗೂ ಆತ್ಮಜ್ಞಾನವನ್ನು ಕಲಿಸಿ, ಆಗ ನಿಮಗೂ ಪ್ರಕೃತಿಯ ಬೆಂಬಲ ಸಿಗುತ್ತದೆ.

ಅಜ್ಞಾನದಲ್ಲಿರುವ ವ್ಯಕ್ತಿಯು ಮಾಡಬಾರದ್ದನ್ನು ಮಾಡಿ ಇತರರಿಗೆ ಹಾನಿ ಮಾಡುತ್ತಾನೆ. ಏಕೆಂದರೆ ಲೋಕದಲ್ಲಿರುವ ಪ್ರತಿಯೊಬ್ಬರೂ ಅಜ್ಞಾನದಲ್ಲಿದ್ದಾರೆ ಮತ್ತು ಅವರು ಅಜ್ಞಾನದಿಂದ ಮಾಡುವ ಕೆಲಸಗಳಿಂದಾಗಿ ಲೋಕದಲ್ಲಿ ಯಾರೂ ಸಂತೋಷ ಮತ್ತು ಶಾಂತಿಯುತವಾಗಿರುವುದಿಲ್ಲ. ಈ ಪರಿಸ್ಥಿತಿಯನ್ನು ಬದಲಾಯಿಸಲು ನಾವು ಎಲ್ಲರನ್ನೂ ಜ್ಞಾನಿಗಳನ್ನಾಗಿ ಮಾಡಲು ಪ್ರಯತ್ನಿಸಬೇಕು.

ಅದಕ್ಕಾಗಿಯೇ ನಾನು "ಪ್ರಕೃತಿಗೆ ವಿರುದ್ಧವಾಗಿ ವರ್ತಿಸಬೇಡಿ ನೀವು ಸ್ವಲ್ಪ ಸ್ವಾರ್ಥಿಗಳಾದರೂ ಅಥವಾ ಅಧರ್ಮದ ರೀತಿಯಲ್ಲಿ ವರ್ತಿಸಿದರೂ  ಸಹ ನಿಮಗೆ ಪ್ರಕೃತಿಯ ಸಹಕಾರ ಸಿಗುವುದಿಲ್ಲ" ಎಂದು ಹೇಳುತ್ತಲೇ ಇರುತ್ತೇನೆ.

ಒಮ್ಮೆ ನಾನು ಪತ್ರಿಯವರ ಮನೆಗೆ ಹೋದಾಗ ಅವರು ಏನು ಹೇಳಿದರೆಂದರೆ? ನಾವು ಈ ಜ್ಞಾನವನ್ನು ಹಂಚುವಾಗ ಆ ಮಾಸ್ಟರ್ಸ್ ಸಂದರ್ಭಕ್ಕನುಗುಣವಾಗಿ ಹೇಳಬೇಕಾದದ್ದನ್ನು ನಮ್ಮ ಧ್ವನಿಯಲ್ಲಿ ಹೇಳುತ್ತಾರೆ, ನಂತರ ಅವರು ಹೊರಟು ಹೋಗುತ್ತಾರೆ.

ಅದನ್ನು ನೋಡುವವರು ನಾವು ಹೇಳುತ್ತಿದ್ದೇವೆ ಎಂದು ಭಾವಿಸುತ್ತಾರೆ. ಆದರೆ ಯಾರೋ ಮಹಾನ್ ಗುರುಗಳು ಅದನ್ನು ಹೇಳಿ ಹೊರಟು ಹೋಗುತ್ತಾರೆ. ಅದಕ್ಕಾಗಿಯೇ ರಮಣ ಮಹರ್ಷಿಗಳು ಹೇಳುತ್ತಾರೆ, ನಿಮ್ಮಿಂದ ಬರುವ ಹೊಸ ವಿಷಯವನ್ನು ಬರೆಯಿರಿ ಕಾರಣವೆಂದರೆ ನೀವು ಹೇಳಿದ್ದನ್ನು ನಿಮಗೆ ನೆನಪಿರುವುವುದಿಲ್ಲ ಕಾರಣ ಅದನ್ನು ಹೇಳಿದ್ದು ನೀವಲ್ಲವಾದ್ದರಿಂದ

ಆದ್ದರಿಂದ ಪರಲೋಕದಲ್ಲಿರುವ ಆತ್ಮಕ್ಕೆ ಮಾಡುವ ಉಪಕಾರವೇ ಪುಣ್ಯ. ಆ ಪುಣ್ಯವೇ ಮೋಕ್ಷಕ್ಕೆ ಕಾರಣವಾಗುತ್ತದೆ. ಆದ್ದರಿಂದ ನಾವು ಮಾಡುವ ಆತ್ಮದ ಸೇವೆಗಳೇ ಪುಣ್ಯವೆಂಬ ವಿಷಯ ತಿಳಿದುಕೊಳ್ಳಿ.

ಅದೇ ರೀತಿ ಆತ್ಮಕ್ಕೆ ಹಾನಿ ಉಂಟು ಮಾಡುವ ಕೆಲಸಗಳು ಅಂದರೆ ಜೀವ ಹಿಂಸೆ ಮಾಡುವುದು, ಮೋಸ ಮಾಡುವುದು, ಮೋಸದ ಮಾತುಗಳ ಮೂಲಕ ಇತರರಿಗೆ ಆರ್ಥಿಕವಾಗಿ ಹಾನಿ ಮಾಡುವುದು ಮತ್ತು ಸುಳ್ಳು ಮಾತುಗಳ ಮೂಲಕ ಅವರಿಂದ ಹಣ ಗಳಿಸಲು ಪ್ರಯತ್ನಿಸುವುದು ಇವೆಲ್ಲವೂ ಆತ್ಮಕ್ಕೆ ಹಾನಿ ಮಾಡುತ್ತವೆ. ಆಸ್ಟ್ರಲ್ ಮಾಸ್ಟರ್ಸ್ ಅವುಗಳನ್ನು ಒಪ್ಪುವುದಿಲ್ಲ. ಏಕೆಂದರೆ ಅವೆಲ್ಲವೂ ಪಾಪಗಳಾಗಿವೆ.

ಅದಕ್ಕಾಗಿಯೇ ಅಂತರಾತ್ಮವು ಶೋಭೆಗೊಂಡಿದೆ ಎಂದೆ ಅದರರ್ಥ ಆತ್ಮ ನಷ್ಟ ಮಾಡಿದಂತೆಯೇ ಎಂದು ನೆನಪಿಡಿ. ಅಂತರಾತ್ಮವೂ ಆನಂದಿಸಿದೆ ಎಂದರೆ ಅದು ಆತ್ಮಕ್ಕೆ

ಪ್ರಯೋಜನವಾದಂತೆ. ಆದ್ದರಿಂದ ಯಾವ ಕೆಲಸಗಳನ್ನು ಮಾಡುತ್ತಿರುವಾಗ ನಿಮಗೆ ತಿಳಿಯದ ಆನಂದ ಉಂಟಾಗುತ್ತಿರುತ್ತದೆಯೋ ಅಂತಹ ಕೆಲಸಗಳನ್ನೇ ಮಾಡಬೇಕು. ಯಾವ ಕೆಲಸಗಳನ್ನು ಮಾಡುತ್ತಿರುವಾಗ ನಿಮ್ಮೊಳಗೆ ನೋವು ಉಂಟಾಗುತ್ತದೆಯೋ ಆ ಕೆಲಸಗಳನ್ನು ಮಾಡಬಾರದೆಂದು ನೆನಪಿನಲ್ಲಿಡಬೇಕು. ಆದ್ದರಿಂದ ಅಂತರಾತ್ಮವನ್ನು ಅನುಸರಿಸುವವರಿಗೆ ಯಾವುದೇ ಸೋಲಿರುವುದಿಲ್ಲ ಎಂದು ಅರ್ಥ ಮಾಡಿಕೊಳ್ಳಬೇಕು.

ಅದಕ್ಕಾಗಿಯೇ ಶಂಕರಾಚಾರ್ಯರು ಹೇಳಿರುವುದನ್ನು ಪತ್ರಿಯವರು ಹೇಳುತ್ತಲೇ ಇರುತ್ತಾರೆ. "**ತ್ರಿಜಗತಿ ಸಜ್ಜನ ಸಂಗತಿ ರೇಖಾ, ಭವತಿ ಭವಾರ್ಜುನ ತರುಣೀ ನೌಕಾ**" ಎಂದು ಅಂದರೆ ಈ ಮೂರು ಲೋಕಗಳಲ್ಲಿ ಸಜ್ಜನ ಸಾಂಗತ್ಯಕ್ಕಿಂತ ಉತ್ತಮವಾದದ್ದು ಯಾವುದೂ ಇಲ್ಲ. ಅಂದರೆ ಸತ್ಯದ ಬಗ್ಗೆ ಮಾತನಾಡಬಲ್ಲವರ ಸಹವಾಸಕ್ಕಿಂತ ಉತ್ತಮವಾದದ್ದು ಯಾವುದೂ ಇಲ್ಲ.

ಯಾರಾದರೂ ಈ ದುಃಖ ಸಾಗರದಿಂದ ಹೊರಬರಲು ಒಳ್ಳೆಯ ಜನರ ಸಹವಾಸ ಮಾಡಬೇಕು . ಅಂದರೆ ಸತ್ಯದ ಬಗ್ಗೆ ಮಾತನಾಡಬಲ್ಲವರ ಸಹವಾಸ ಅಂದರೆ ಆತ್ಮದ ಬಗ್ಗೆ, ಆತ್ಮಜ್ಞಾನದ ಬಗ್ಗೆ, ಆತ್ಮದ ಸೇವೆಯ ಬಗ್ಗೆ, ಆತ್ಮದ ಪ್ರಯೋಜನದ ಬಗ್ಗೆ ನಿರಂತರವಾಗಿ ಮಾತನಾಡುವವರು ಸಜ್ಜನರು. ಆ ಕೆಲಸವನ್ನೇ ನಾವು ಪ್ರತಿದಿನ ಮಾಡುತ್ತಿದ್ದೇವೆ.

ಆದ್ದರಿಂದ ಪರೋಪಕಾರವೇ ಪುಣ್ಯ ಅಂದರೆ ಆತ್ಮಕ್ಕೆ ಉಪಕಾರವನ್ನು ಮಾಡುವುದು ಪುಣ್ಯ, ಇತರರನ್ನು ಹಿಂಸಿಸುವುದೇ ಪಾಪ ಅಂದರೆ ಆತ್ಮಕ್ಕೆ ಮಾಡುವ ಅಪಕಾರವೇ ಪಾಪವೆಂದು ತಿಳಿಯಬೇಕು.

*** ***

**"ಹೆಚ್ಚಿನದಾಗಿ ಹಣ ಸಂಪಾದಿಸಿದವರು ಶ್ರೇಷ್ಠರಲ್ಲ...**
**ಉನ್ನತವಾದ ಜ್ಞಾನವನ್ನು ಸಂಪಾದಿಸಿದವರೇ ಶ್ರೇಷ್ಠರು"**
**ಬ್ರಹ್ಮರ್ಷಿ ತಟವರ್ತಿ ವೀರರಾಘವ ರಾವ್‌ರವರು**



# ಆದಿಶಂಕರಾಚಾರ್ಯರ ಸಂದೇಶ

**"ಏಕ ವೃಕ್ಷ ಸಮಾರೂಢ ನಾನಾ ಜಾತಿ ವಿಹಂಗಮಾಂ ಪ್ರಭತೇ ಕ್ರಮಸೋಯಾಂತಿ ತತ್ರ ಕಾ ಪರಿವೇದನ"**

**ತಾತ್ಪರ್ಯ:–** ಕತ್ತಲಾದಾಗ ಅನೇಕ ಜಾತಿಯ ಪಕ್ಷಿಗಳು ಒಂದೇ ಮರದಲ್ಲಿ ಆಶ್ರಯ ಪಡೆದು ವಿಶ್ರಾಂತಿ ಪಡೆಯುತ್ತವೆ. ಬೆಳಗಾಗುತ್ತಲೇ ಆ ಪಕ್ಷಿಗಳು ಆ ಮರವನ್ನು ಬಿಟ್ಟು ತಮ್ಮ ಆಹಾರವನ್ನು ಸಂಪಾದಿಸಲು ಹೊರಟು ಹೋಗುತ್ತವೆ.

ಅದೇ ರೀತಿ ಕುಟುಂಬ ಮತ್ತು ಸಂಬಂಧಿಕರನ್ನು ಹೊಂದಿರುವ ವ್ಯಕ್ತಿಯು ಅವನ ಸಮಯ ಬಂದಾಗ ತನ್ನ ದೇಹ, ಕುಟುಂಬ, ಮನೆಯನ್ನೂ ತೊರೆದು ಹೊರಟು ಹೋಗುತ್ತಾನೆ. ಅದಕ್ಕೆ ಚಿಂತಿಸುವ ಅಗತ್ಯವಿಲ್ಲ.

ಇದು ಸೃಷ್ಟಿಯಲ್ಲಿ ಸಹಜವಾಗಿ ನಡೆಯುವ ವಿಷಯ. ಇದನ್ನು ತಿಳಿಯುವುದೇ ಜ್ಞಾನ. ಧ್ಯಾನ ಮಾಡುವವರು ಈ ಎಲ್ಲಾ ವಿಷಯಗಳನ್ನು ತಿಳಿದಿರಬೇಕು. ಈ ವಿಷಯಗಳು ತಿಳಿಯದಿದ್ದರೆ ಯಾರಾದರೂ ಸತ್ತು ಹೋದಾಗ ಅಳುತ್ತಾ ಕುಳಿತುಕೊಳ್ಳುತ್ತಾರೆ. ಏಕೆ ಅಳುತ್ತಾರೆಂದರೆ? ಗೊತ್ತಿಲ್ಲ, ನಮ್ಮವರು ಹೋದರೆ ಅಳು ಬರದೇ ಇರುತ್ತದೆಯೇ? ಎನ್ನುತ್ತಾರೆ.

ಒಂದು ವಿಷಯ ನೀವು ತಿಳಿದಿರಬೇಕು. ಮಹಾನ್ ಯೋಗೀಶ್ವರರು ಏನೇ ಹೇಳಿದರೂ ಸತ್ಯವನ್ನೇ ಹೇಳುತ್ತಾರೆ ಅದನ್ನು ಅಲ್ಲಗಳೆಯವಂತಿಲ್ಲ. ಅದನ್ನು ಅರ್ಥ ಮಾಡಿಕೊಂಡು ಆಚರಣೆ ಮಾಡುವವರು ಅದೃಷ್ಟವಂತರಾಗುತ್ತಾರೆ ಅವರ ಜೀವನ ಧನ್ಯವಾಗುತ್ತದೆ, ಮಾನವರು ಭೂಮಿಗೆ ಬಂದ ಉದ್ದೇಶವನ್ನು ಸಾಧಿಸಿದವರಾಗುತ್ತಾರೆ. ಅವರು ತಮ್ಮ ಗುರಿಗಳನ್ನು ಬೇಗನೆ ಸಾಧಿಸುತ್ತಾರೆ, ಅವರು ತಮ್ಮ ಜನ್ಮವನ್ನು ಪೂರ್ತಿಯಾಗಿ ಸದುಪಯೋಗಪಡಿಸಿಕೊಳ್ಳುತ್ತಾರೆ.

ಅಂತಹ ಯೋಗೀಶ್ವರರು ಲೋಕಕ್ಕಾಗಿ, ಲೋಕದ ಜನರಿಗಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ್ದಾರೆ. ರಮಣ ಮಹರ್ಷಿಗಳು ತಮ್ಮ ಎಲ್ಲಾ ಸುಖವನ್ನು ಬಿಟ್ಟು ಸುಮ್ಮನೆ ಕುಳಿತಿದ್ದಾರೆಂದು ಭಾವಿಸುತ್ತಾರೆ. ಅವರು ಹುಚ್ಚರಾಗಿರಲಿಲ್ಲ . ಅವರು ಧನ್ಯರಾಗಿದ್ದರು ಎಲ್ಲರನ್ನೂ ಧನ್ಯರಾಗಿ ಮಾಡಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದ್ದರು. ಅಂದರೆ ಅವರು ದುಃಖದಿಂದ ಹೊರ ಬರುವುದು ಮಾತ್ರವಲ್ಲದೇ ಎಲ್ಲರನ್ನೂ ದುಃಖದಿಂದ ಹೊರ ತರಲು ಪ್ರಯತ್ನಿಸಿದರು. ಅವರು ತಮ್ಮ ಎಲ್ಲಾ ಸುಖ, ಭೋಗಗಳು ಮತ್ತು ಮನೋರಂಜನೆಗಳನ್ನು ತ್ಯಾಗ ಮಾಡಿದರು. ಅದೇ ರೀತಿ ಶಂಕರಾಚಾರ್ಯರು ಮತ್ತು ಪ್ರತಿಯೊಬ್ಬ ಯೋಗಿಶ್ವರರು ಬದುಕಿದ್ದರು.

ಕತ್ತಲಾದಾಗ ಅನೇಕ ಪಕ್ಷಿಗಳು ದೊಡ್ಡ ಮರದ ಮೇಲೆ ಒಟ್ಟುಗೂಡುತ್ತವೆ, ಅಂದರೆ ಅವು ಸೇರುತ್ತವೆ ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಬೆಳಗಾದ ತಕ್ಷಣವೇ ಅವೆಲ್ಲವೂ ಆಹಾರವನ್ನು ಹುಡುಕಲು ಬೇರೆ ಬೇರೆ ಸ್ಥಳಗಳಿಗೆ ಹೋಗುತ್ತವೆ.

ಅದೇ ರೀತಿ ಅನೇಕ ಲೋಕಗಳಲ್ಲಿರುವ ಎಲ್ಲಾ ಮಾನವ ಆತ್ಮಗಳು ಒಂದು ಕುಟುಂಬವನ್ನು ಸೇರುತ್ತವೆ. ಅವರು ತಂದೆ, ತಾಯಿ, ಮಗ, ಮಗಳು, ಹೆಂಡತಿ ಗಂಡ ಮತ್ತು ಇತರ ಅನೇಕ ಸಂಬಂಧಿಕರಾಗಿ ಸೇರುತ್ತಾರೆ. ನಂತರ ಅವರ ಸಮಯ ಮುಗಿದಾಗ ಅಂದರೆ ಅವರು ಸತ್ತಾಗ ಅವರು ತಮ್ಮ ಪ್ರತ್ಯೇಕ ದಾರಿಯಲ್ಲಿ ಹೊರಟು ಹೋಗುತ್ತಾರೆ. ಇದು ಸಹಜ. ಇದರ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ಹೇಗೆ ಬಂದರೋ ಹಾಗೆಯೇ ಹೊರಟು ಹೋಗುತ್ತಾರೆ. ಇದನ್ನು ತಿಳಿಯದೇ ನನ್ನ ಮಗ, ನನ್ನ ಮಗಳು, ನನ್ನ ಮೊಮ್ಮಗಳು, ನನ್ನ ಮೊಮ್ಮಗ ಎನ್ನುತ್ತಾರೆ. ಅವರೆಲ್ಲರೂ ಸ್ವಲ್ಪ ಸಮಯದವರೆಗೆ ಒಟ್ಟಿಗೆ ಇರುತ್ತಾರೆ, ಅಷ್ಟೇ. ಆದರೆ ಯಾರು ಶಾಶ್ವತವಲ್ಲ. ಅವರವರ ಅನುಭವಗಳಿಗಾಗಿ ಅವರು ಜನಿಸಿದ್ದಾರೆ. ಆದರೆ ಅವರಿಗಾಗಿಯೇ ನಾನು ಎಂದು ಭಾವಿಸುತ್ತಾರೆ. ಆದರೆ ಒಬ್ಬರಿಗೆ ಇನ್ನೊಬ್ಬರೊಂದಿಗೆ ಯಾವುದೇ ಸಂಬಂಧ ಇರುವುದಿಲ್ಲ. ಯಾರ ದಾರಿಯಲ್ಲಿ ಅವರು ಬಂದಿರುತ್ತಾರೆ ಅವರ ದಾರಿಯಲ್ಲಿ ಅವರು ಹೋಗುತ್ತಾರೆ.

ವಿಜಯವಾಡದ ಜಾನಕಿ ಮೇಡಂ ಅವರ ಮಗ ಎಂ.ಬಿ.ಬಿ.ಎಸ್. ಓದುತ್ತಿದ್ದಾನೆ. ಇವರು ಪ್ರತಿದಿನ ಅನ್ನವನ್ನು ಕಲಿಸಿ ಬಾಯಿಯಲ್ಲಿ ಇಡುತ್ತಿರುತ್ತಾರೆ. ಆಕೆ ಮಗನಿಗೆ ಊಟ ಮಾಡಿಸಲು ಗಂಡನನ್ನು ಬಿಟ್ಟು ದೆಹಲಿಯಲ್ಲಿ ಮಗನ ಹತ್ತಿರ ಇರುತ್ತಿದ್ದರು. ಆ ಮಗನಿಗಾಗಿಯೇ ಈಕೆ ಜನ್ಮ ತೆಗೆದುಕೊಂಡಂತೆ ಭಾಸವಾಗುತ್ತಿತ್ತು, ಈಗ ಬದಲಾಗಿದ್ದಾರೆಂದುಕೊಳ್ಳಿ.

ಆಲೋಚಿಸಿ ಏಕೆ ಇಷ್ಟು ಮಮಕಾರ? ಪಕ್ಷಿಗಳು ಸಹ ರೆಕ್ಕೆಗಳು ಬರುವವರೆಗೆ ಬೆಳೆಸುತ್ತವೆ ರೆಕ್ಕೆಗಳು ಬಂದ ನಂತರ ಅವುಗಳ ದಾರಿಯಲ್ಲಿ ಅವುಗಳನ್ನು ಬಿಡುತ್ತವೆ. ಇದು ಸಹ ಅಷ್ಟೇ, ಮೇಜರ್ ಆಗುವವರೆಗೆ ಜವಾಬ್ದಾರಿ ಪೋಷಕರದ್ದೇ ಆಗಿರುತ್ತದೆ. ಮೇಜರ್ ಆದ ನಂತರ ಅವನ ಜವಾಬ್ದಾರಿ ಅವನದೇ. ನೀವು ಇದನ್ನು ಅರ್ಥ ಮಾಡಿಕೊಳ್ಳದಿದ್ದರೆ, ನಿಮಗಿಂತ ಮೂರ್ಖರು ಯಾರೂ ಇರುವುದಿಲ್ಲ.

ಇಂತಹ ಎಲ್ಲ ಜನರಿಗಾಗಿಯೇ ಶಂಕರಾಚಾರ್ಯರು ಈ ಶ್ಲೋಕವನ್ನು ಹೇಳಿದ್ದಾರೆ. ಅವರು ತಾತ್ಕಾಲಿಕವಾಗಿ ಸೇರುತ್ತಾರೆ ಮತ್ತೆ ಯಾರ ದಾರಿಯಲ್ಲಿ ಅವರು ಹೊರಟು ಹೋಗ ಬೇಕಾಗುತ್ತದೆ. ಶಾಶ್ವತವಾಗಿ ಯಾರೂ ಇರುವುದಿಲ್ಲ. ಸೇರುವುದು

ಎಷ್ಟು ಸಹಜವೋ ಪುನಃ ಬೇರೆ ಬೇರೆ ಯಾಗುವುದು ಅಷ್ಟೇ ಸಹಜ. ಅದರ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂದು ಅವರು ಹೇಳುತ್ತಾರೆ.

"**ಮೃತಪಟ್ಟವರಿಗಾಗಿ ಅಥವಾ ಮರಣಹೊಂದಲಿರುವವರಿಗಾಗಿ ದುಃಖಿಸದವನೇ ಪಂಡಿತ.**" ಅಂದರೆ ಜ್ಞಾನ ಹೊಂದಿರುವವನು ಎಂದು ಶ್ರೀ ಕೃಷ್ಣ ಪರಮಾತ್ಮನೂ ಸಹ ಹೇಳಿದ್ದಾನೆ.

ಈ ಜ್ಞಾನವನ್ನು ಸಂಪಾದಿಸುತ್ತಾ ಹೋದಂತೆ ನಿಮಗೆ ದುಃಖ ಇರುವುದಿಲ್ಲ. ಇಲ್ಲದಿದ್ದರೆ ಈ ತೀವ್ರ ದುಃಖದಿಂದಾಗಿ ಈ ಜೀವನ ಏತಕ್ಕಾಗಿ? ನನ್ನ ಮಗ ಇಲ್ಲದಿದ್ದರೆ ನಾನು ಏಕೆ ಬದುಕಬೇಕು? ನನ್ನ ಮಗಳು ಇಲ್ಲದಿದ್ದರೆ ನನ್ನ ಜೀವನ ಏತಕ್ಕಾಗಿ? ನನ್ನ ಮೊಮ್ಮಗಳು ಇಲ್ಲದಿದ್ದರೆ ನಾನು ಏಕೆ ಬದುಕಬೇಕು? ಎಂದು ಯೋಚಿಸಿದರೆ ಮೂರ್ಖತ್ವವೇ ಆಗುತ್ತದೆ.

ಓ ದೇವರೇ ಎಷ್ಟು ಅನ್ಯಾಯ ಮಾಡಿದೆ, ನನ್ನನ್ನು ಸಹ ಕರೆದುಕೊಂಡು ಹೋಗು, ಮಾತುಗಳು ಈ ರೀತಿ ಇರುತ್ತವೆ. ಎಷ್ಟು ಅಜ್ಞಾನ ನೀವೇ ಹೇಳಿ? ಇಷ್ಟು ದುಃಖ ಏಕೆ ಪಡುತ್ತಿದ್ದಾರೆ? ಈ ಜ್ಞಾನದ ಕೊರತೆಯಿಂದಾಗಿ ಅಲ್ಲವೇ? ಅದಕ್ಕಾಗಿಯೇ ಆ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಜ್ಞಾನವೆಂಬುದು ದುಃಖದಿಂದ ಹೊರಬರಲು, ಸದಾ ಆನಂದದಿಂದ ಜೀವಿಸಲು ಅಷ್ಟೇ ಹೊರತು ದುಃಖ ಪಡುವುದಕ್ಕಾಗಿ ಅಲ್ಲ.

ನೀವು ನೋಡಿ ನೀವು ಯಾವುದೋ ಕೆಲಸದ ಮೇಲೆ ದೆಹಲಿಗೋ, ಬೊಂಬಾಯಿಗೋ ಹೋಗುತ್ತೀರಿ. ನೀವು ಅಲ್ಲಿ ಒಂದು ದೊಡ್ಡ ಹೋಟೆಲ್ ನಲ್ಲಿ ಇರುತ್ತೀರಿ. ಹಾಗೆಯೇ ಅಲ್ಲಿ ವಿವಿಧ ರಾಜ್ಯಗಳಿಂದ ಬಂದ ಅನೇಕ ಜನರು ಇರುತ್ತಾರೆ. ಅವರೆಲ್ಲರೂ ತಮ್ಮ ತಮ್ಮ ಕೆಲಸಗಳಿಗಾಗಿ 10 ದಿನಗಳು, 15 ದಿನಗಳು ಅಲ್ಲಿದ್ದು ಕೆಲಸ ನೋಡಿಕೊಳ್ಳಲು ಅಲ್ಲಿಗೆ ಬಂದಿದ್ದಾರೆ. ಆ ಕೆಲಸದ ಸಮಯದಲ್ಲಿ ಅವರು ಭೇಟಿಯಾಗುವುದರಿಂದ ಸ್ನೇಹವೂ ಸಹ ಏರ್ಪಡುತ್ತದೆ, ಬಹಳಷ್ಟು ಆತ್ಮೀಯರಾಗುತ್ತಾರೆ.

ಆದರೆ ಅವರ ಕೆಲಸ ಮುಗಿದ ನಂತರ ಅವರು ತಮ್ಮ ಊರುಗಳಿಗೆ ಹೋಗುತ್ತಾರೆ, ಅಲ್ಲೇ ಇರುವುದಿಲ್ಲ. ಆಗ ಗಮನಿಸಿ ಹೊರಟು ಹೋಗಲು ಅವರಲ್ಲಿ ಯಾರಿಗೂ ಬೇಸರವಿಲ್ಲ ಒಂದು ವೇಳೆ ಆ ಹೋಟೆಲ್ನಲ್ಲಿ ಇನ್ನೂ ಕೆಲವು ದಿನಗಳು ಇರಬೇಕು ಅಂದುಕೊಳ್ಳುವವನು ಈ ಹೊರಟು ಹೋದವನ ಬಗ್ಗೆ ಆಲೋಚಿಸುವುದಿಲ್ಲ. ಅವನ ಕೆಲಸ ಮುಗಿಯಿತು ಅವನು ಹೊರಟು ಹೋದನು ಎಂದುಕೊಳ್ಳುತ್ತಾ ತನ್ನ ಕೆಲಸವನ್ನು ತಾನು ಮಾಡಿಕೊಳ್ಳುತ್ತಾನೆ.

ಇಲ್ಲಿಯೂ ಹಾಗೆಯೇ ಯಾರಾದರೂ ಮರಣಿಸಿದರೆ ಯಾವುದೇ ಸಂದರ್ಭದಲ್ಲೂ ಯಾರಾದರೂ ಸರಿ ಅವನ ಕೆಲಸ ಮುಗೀತು ಅಂದರೆ ಅವನ ಯೋಜನೆಯ ಪ್ರಕಾರವೇ

ಅವನು ಹೊರಟು ಹೋಗುತ್ತಿದ್ದಾನೆ ಎಂದು ತಿಳಿಯಬೇಕು ಅಷ್ಟೇ ಹೊರತು ಹೊರಟು ಹೋದನೆಂದು ದುಃಖಿಸುತ್ತಾ ಇನ್ನೊಂದು ಕೆಲಸ ಮಾಡುವುದನ್ನು ಬಿಟ್ಟು ದುಃಖಿಸುತ್ತಾ ಕುಳಿತುಕೊಂಡರೆ ಎಷ್ಟು ಅಜ್ಞಾನ ಹೇಳಿ?

ಆ ಹೋಟೆಲ್ ನಲ್ಲಿ ಆ 10, 15 ದಿನಗಳಲ್ಲಿ ತುಂಬಾ ಆತ್ಮೀಯತೆ ಉಂಟಾಯಿತು. ಹಾಗಿದ್ದರೂ ಅವರ ಉಳಿದ ಕೆಲಸಗಳನ್ನು ಮಾಡುವುದನ್ನು ನಿಲ್ಲಿಸಿ ಅವನು ಹೊರಟು ಹೋದನೆಂದು ಅಳುತ್ತಾ ಕುಳಿತುಕೊಳ್ಳುತ್ತಾನೆಯೇ? ತನ್ನ ಕೆಲಸಗಳನ್ನು ಮಾಡಿಕೊಳ್ಳುವುದಿಲ್ಲವೇ? ಅವನು ನಿಜವಾಗಿಯೂ ಅವನಿಗಾಗಿ ಬಂದಿದ್ದಾನೆಯೇ. ಅವನ ಕೆಲಸಕ್ಕಾಗಿ ಬಂದಿದ್ದಾನೆಯೇ? ಅವನು ಅವನ ಕೆಲಸಕ್ಕಾಗಿ ಬಂದಿದ್ದನು, ಅವನ ಕೆಲಸ ಮುಗಿದ ನಂತರ ಹೊರಟು ಹೋದನು. ನಿನ್ನ ಕೆಲಸ ಇನ್ನೂ ಇದೆ. ಆದ್ದರಿಂದ ನಿನ್ನ ಕೆಲಸ ನೀನು ನೋಡಿಕೋ.

ಆದ್ದರಿಂದ ಜೀವಂತವಾಗಿದ್ದೇವೆ ಎಂದರೆ ನಮ್ಮ ಯೋಜನೆಯ ಪ್ರಕಾರ ನಾವು ಮಾಡಬೇಕಾದದ್ದು ಇನ್ನೂ ಇದೆ, ಆದ್ದರಿಂದ ಮಾಡಬೇಕಾದ ಕೆಲಸದ ಮೇಲೆ ಗಮನ ಹರಿಸಿ, ಅಷ್ಟೇ ಹೊರತು ನನ್ನ ಜೀವನ ವ್ಯರ್ಥ! ನಾನು ಬದುಕಿರುವುದು ದಂಡ, ದೇವರು ನನ್ನನ್ನು ಕರೆದುಕೊಂಡು ಹೋದರೆ ಚೆನ್ನಾಗಿರುತ್ತದೆ, ಎಂದುಕೊಳ್ಳುತ್ತಾ ಸಾವಿಗಾಗಿ ಎದುರು ನೋಡುವುದು ಮೂರ್ಖತನ ಮತ್ತು ಅಜ್ಞಾನ.

ಅದಕ್ಕಾಗಿಯೇ ಮಹಾತ್ಮರು ಯೋಗಿಗಳ ಸಂದೇಶಗಳನ್ನು ಕೇಳುತ್ತಾ ಇರಬೇಕು ಅವರು ಹೇಳುವುದನ್ನು ನೀವು ಎಷ್ಟು ಹೆಚ್ಚಾಗಿ ತಿಳಿದುಕೊಂಡರೆ ನೀವು ಅಷ್ಟು ದುಃಖದಿಂದ ಮುಕ್ತರಾಗುತ್ತೀರಿ ಇಲ್ಲದಿದ್ದರೇ ನೀವು ಅಂತ್ಯವಿಲ್ಲದ ದುಃಖಕ್ಕೆ ಒಳಗಾಗುತ್ತೀರಿ ಯಾರು ಹೇಳಿದರು ಅದನ್ನೇ ಹೇಳುತ್ತಾರೆ, ಕೃಷ್ಣ ಹೇಳಿದರು ಅದನ್ನೇ, ಶಂಕರಾಚಾರ್ಯರು ಹೇಳಿದರು ಅದನ್ನೇ, ಪತ್ರಿಯವರು ಹೇಳಿದರು ಅದನ್ನೇ.

ಒಂದು ಸಂದರ್ಭದಲ್ಲಿ ಪತ್ರಿಯವರು ಒಂದು ವಿಷಯವನ್ನು ಹೇಳಿದರು ಒಬ್ಬ ಮಹಿಳೆ ಅಳುತ್ತಾ ಪತ್ರೀಜಿಯವರು ಬಳಿ ಬಂದಳು. ನನ್ನ ತಾಯಿ ಸತ್ತು ಹೋಗಿದ್ದಾರೆ ಎನ್ನುತ್ತಾ. ಆಗ ಕತ್ರಿಯವರು ಗದರಿಸಿದರು. ಸತ್ತಿರುವುದು ನಿನ್ನ ತಾಯಿಯಲ್ಲ, ನಿನ್ನ ಬುದ್ಧಿ ಎಂದು ಹೇಳಿದರಂತೆ. ಹಾಗಾದರೆ ಆಕೆಗೆ ಆ ದುಃಖ ಏಕೆ ಬಂತು? ಬುದ್ಧಿ ಇಲ್ಲದೇ ಇರುವುದರಿಂದ, ಏಕೆ ಬುದ್ಧಿ ಇಲ್ಲ? ಸರಿಯಾದ ಧ್ಯಾನ ಮಾಡದೇ ಇರುವುದರಿಂದ.

ಆಕೆಗೆ ಧ್ಯಾನ ಮಾಡುವುದು ತಿಳಿದಿದೆ ಆದರೆ ಸರಿಯಾಗಿ ಧ್ಯಾನ ಮಾಡುವುದಿಲ್ಲ. ಅದಕ್ಕಾಗಿ ಬುದ್ಧಿಶಕ್ತಿ ಬೆಳೆದಿಲ್ಲ, ಇನ್ನು ಜ್ಞಾನ ಎಲ್ಲಿರುತ್ತದೆ? ನಿಜವಾಗಿಯೂ ಧ್ಯಾನವು ಬುದ್ಧಿಶಕ್ತಿ ಮತ್ತು ಜ್ಞಾನ ಎರಡನ್ನು ಗಳಿಸುವುದಕ್ಕಾಗಿಯೇ.

ನೆನಪಿಡಿ ಸೃಷ್ಟಿಯು ಹೀಗೆಯೇ ಮುಂದುವರಿಯುತ್ತಾ ಇರುತ್ತದೆ. ನೀವು ಜ್ಞಾನವನ್ನು ಅರಸಿ ಭೂಮಿಗೆ ಬಂದಂತೆ ನಿಮ್ಮ ಮಕ್ಕಳು ಸಹ ಅದೇ ರೀತಿ ಬಂದಿದ್ದಾರೆ. ನಿಮ್ಮ ಹೆತ್ತವರು ಅದೇ ರೀತಿ ಬಂದಿದ್ದಾರೆ. ಸ್ವಲ್ಪ ಜ್ಞಾನವನ್ನು ಸಂಪಾದಿಸಿಕೊಂಡು ಹೋಗಬೇಕು.

ಅದಕ್ಕಾಗಿಯೇ ನಾವು ಜ್ಞಾನಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇವೆ ಈಗ ನಮ್ಮ ಕೆಲಸ ಎಲ್ಲರಿಗೂ ಜ್ಞಾನವನ್ನು ಕಲಿಸುವುದು. ನನ್ನ ಕೆಲಸ ಜ್ಞಾನದಿಂದ ನಿಮ್ಮನ್ನು ಮಾಸ್ಟರ್ಸ್ ಆಗಿ ಮಾಡುವುದು ಅದೇ ನನ್ನ ಮಹತ್ವಾಕಾಂಕ್ಷೆ. ಜ್ಞಾನವನ್ನು ಪಡೆಯಲು ತುಂಬಾ ಶ್ರದ್ಧೆ ಇರಬೇಕು, ಶಿಸ್ತನ್ನೂ ಪಾಲಿಸಬೇಕು. ಒಂದೇ ಬಾರಿಗೆ ಶಂಕರಾಚಾರ್ಯರು ಅಥವಾ ಒಬ್ಬ ಬುದ್ಧನಂತೆ ಆಗುವುದಿಲ್ಲ. ಕಷ್ಟ ಪಟ್ಟರೆ ಸ್ವಲ್ಪ ಮಟ್ಟಿಗೆ ಜ್ಞಾನವನ್ನು ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತೀರಿ.

ಒಂದೇ ಬಾರಿಗೆ ಹೇಗೆ ಬರುತ್ತದೆ? ಪತ್ರಿಯವರು ನಾಲ್ಕು ವಿಷಯಗಳು ಹೇಳಿದ್ದಾರೆ ಅಲ್ಲವೇ?

1) ಧ್ಯಾನ, 2) ಸ್ವಾಧ್ಯಾಯ, 3) ಸಾಂಗತ್ಯ, 4) ಸೇವೆ.

ಈ ನಾಲ್ಕನ್ನು ಕಡ್ಡಾಯವಾಗಿ ಅನುಸರಿಸಬೇಕು. ನಾವು ಅಭ್ಯಾಸ ಮಾಡುತ್ತಿರುವುದನ್ನು ನಿಮಗೆ ಕಲಿಸುತ್ತಿದ್ದೇವೆ.

ನೀವೆಲ್ಲರೂ ಬಹಳಷ್ಟು ಬದಲಾಗಿದ್ದಿರಿ ಎಂದು ನನಗೆ ತಿಳಿದಿದೆ, ಮತ್ತು ನೀವು ಬಹಳಷ್ಟು ಅಭಿವೃದ್ಧಿ ಹೊಂದಿದ್ದೀರಿ ಎಂದು ಸಹ ತಿಳಿದಿದೆ. ಆದರೆ ನೀವು ಇನ್ನೂ ಕಷ್ಟಪಡಬೇಕಾಗಿದೆ, ಅಷ್ಟಕ್ಕೆ ಸಂತೃಪ್ತಿ ಪಡಬಾರದು. ನಿಮ್ಮ ನಡವಳಿಕೆಯಲ್ಲಿ ಬದಲಾವಣೆ ಬಂದಿದೆ, ನಿಮ್ಮ ಆಲೋಚನಾ ವಿಧಾನದಲ್ಲಿಯೂ ಬದಲಾವಣೆ ಬಂದಿದೆ, ನಿಮ್ಮ ಮಾತುಗಳಲ್ಲಿ ಬದಲಾವಣೆಯಾಗಿದೆ, ನಿಮ್ಮ ಕೆಲಸಗಳಲ್ಲಿ ಬದಲಾವಣೆಯಾಗಿದೆ ಮತ್ತು ನೀವು ಅದನ್ನು ಮತ್ತಷ್ಟು ಅಭಿವೃದ್ಧಿ ಪಡಿಸಬೇಕಾಗಿದೆ.

ಜಗತ್ತಿನಲ್ಲಿ ಒಂದೇ ಒಂದು ವಿಷಯವಿದೆ ಜ್ಞಾನಿಗಿಂತ ಶ್ರೇಷ್ಠರು ಯಾರೂ ಇಲ್ಲ. ಜ್ಞಾನವನ್ನು ಬೋಧಿಸುವುದಕ್ಕಿಂತ ದೊಡ್ಡ ಸೇವೆ ಇನ್ನೊಂದಿಲ್ಲ. ಅದನ್ನೇ ನಾನು ಮಾಡುತ್ತಿದ್ದೇನೆ. ಹಾಗೆ ಮಾಡುತ್ತಿದ್ದರೆ ಸಮಸ್ಯೆಗಳು ಸುಲಭವಾಗಿ ದೂರವಾಗುತ್ತವೆ, ಕರ್ಮಗಳ ತೀವ್ರತೆ ಕಡಿಮೆಯಾಗುತ್ತದೆ, ಕುಟುಂಬದಲ್ಲಿ ಸಹಕಾರ ಸಿಗುತ್ತದೆ, ಅನುಕೂಲಕರ ವಾತಾವರಣ ಏರ್ಪಡುತ್ತದೆ, ಬಹಳ ಪ್ರಶಾಂತವಾಗಿರುತ್ತೀರಿ.

ಒಂದು ರೀತಿಯಲ್ಲಿ ಹೇಳುವುದಾದರೆ ಜೀವನವೇ ಬದಲಾಗುತ್ತದೆ. ಆದ್ದರಿಂದ ಜ್ಞಾನ ಅಷ್ಟೊಂದು ಶ್ರೇಷ್ಠವೆಂದು, ಜ್ಞಾನ ಬೋಧನೆ ಇನ್ನೂ ಶ್ರೇಷ್ಠವೆಂದು ತಿಳಿದುಕೊಳ್ಳಿ.

ನಾವು ಮಾಡುವ ಕೆಲಸಗಳೆಲ್ಲವೂ ಅದಕ್ಕಾಗಿಯೇ. ಇದಲ್ಲದೆ ನಾವು ಮಾಡುವ ಕೆಲಸಗಳು ಯಾವಾಗಲೂ ಒಂದೇ ಆಗಿರಬಾರದು. ಪತ್ರಿಯವರು ಹೇಳುವುದೇನೆಂದರೆ, ಆತ್ಮಜ್ಞಾನಿಯೂ ಯಾವಾಗಲೂ ಒಂದೇ ರೀತಿ ಮಾಡಿದ್ದನ್ನೇ ಮಾಡುವುದಿಲ್ಲ, ಅವನು ಯಾವಾಗಲೂ ಹೊಸದನ್ನೇ ಮಾಡುತ್ತಾನೆ. ನೀವು ಸಹ ನಿಮ್ಮ ದಿನಚರಿಯನ್ನು ಮುರಿಯುತ್ತಲೇ ಇದ್ದರೆ ನಿಮಗೆ ಜ್ಞಾನ ಇದ್ದಂತೆಯೇ. ದಿನಚರಿಯನ್ನು ಮುರಿಯುವುದು ಎಂದರೆ ಹುಚ್ಚುಚ್ಚಾಗಿ ಮಾಡುವುದಲ್ಲ.

ಕೆಲವರಿಗೆ ಮೆದುಳು ಸರಿಯಾಗಿ ಕೆಲಸ ಮಾಡುವುದಿಲ್ಲ ಹೀಗೆ ಹೇಳಿದ್ದಾರೆ ಎಂದು ಯಾವಾಗಲೂ ಈ ಹೆಂಡತಿಯೊಂದಿಗೆ ಇರಬೇಕಾ ಎನ್ನುತ್ತಾ ಹೆಂಡತಿಯನ್ನು ಬದಲಾಯಿಸಬೇಕು  ಎಂದುಕೊಂಡರೆ ಅವನಿಗಿಂತಲೂ ಹುಚ್ಚ ಇನ್ನೊಬ್ಬ ಇರುವುದಿಲ್ಲ.

ಅವರವರ ಕೆಲಸಗಳಿಗಾಗಿ ಅವರು ಭೂಮಿಗೆ ಬರುತ್ತಾರೆ ಎಂದು ಶಂಕರಾಚಾರ್ಯರು ಹೇಳಿದ್ದಾರೆ. ಅವರ ಕೆಲಸಗಳು ಮುಗಿದ ನಂತರ ಅವರು ಅವರ ದಾರಿಯಲ್ಲಿ ಹೊರಟು ಹೋಗುತ್ತಾರೆ. ಆದ್ದರಿಂದ ಯಾರು ಹೊರಟು ಹೋದರೂ ದುಃಖಪಡಬಾರದು.

***  ***

# ಸತ್ಯ ಸಾಯಿ ಬಾಬಾ ಅವರ ಸಂದೇಶ

ಕಳೆದ ಕೆಲವು ದಿನಗಳಿಂದ ನಾವು ಯೋಗೀಶ್ವರರ ಸಂದೇಶಗಳನ್ನು ತಿಳಿದುಕೊಳ್ಳುತ್ತಿದ್ದೇವೆ. ಏಕೆಂದರೆ  ಜೀವನದಲ್ಲಿ ಅಂತಹವರ ಸಂದೇಶಗಳನ್ನು ಕೇಳದಿದ್ದರೆ ನಮ್ಮ ಜೀವನವು ಅರ್ಥವ್ಯಸ್ತವಾಗುತ್ತದೆ. ನಮಗೆ ಏನು ಮಾಡಬೇಕೆಂದು ತಿಳಿದಿಲ್ಲ ಏನು ಮಾಡಬಾರದು ಎಂದು ತಿಳಿದಿಲ್ಲ, ಯಾವುದಕ್ಕೆ ಪ್ರಾಮುಖ್ಯತೆ ನೀಡಬೇಕೆಂದು ನಮಗೆ ತಿಳಿದಿಲ್ಲ, ಯಾವುದಕ್ಕೆ ಪ್ರಾಮುಖ್ಯತೆ ನೀಡಬಾರದು ಎಂದು ನಮಗೆ ತಿಳಿದಿಲ್ಲ, ಯಾವುದರ ಬಗ್ಗೆ ಮಾತನಾಡಬೇಕು ಎಂಬುದು ನಮಗೆ ತಿಳಿದಿಲ್ಲ, ಯಾವುದರ ಬಗ್ಗೆ ಮಾತನಾಡಬಾರದು ಎಂಬುದು ನಿಮಗೆ ತಿಳಿದಿಲ್ಲ.

ಅದರಿಂದಾಗಿ ಜೀವನದಲ್ಲಿ ನಾವು ಬಹಳಷ್ಟು ನಷ್ಟ ಹೊಂದುತ್ತೇವೆ. ನಾವು ಮಾಡುವುದೆಲ್ಲವೂ ಸರಿಯಾಗಿದೆ ಎಂದು ನಾವು ಭಾವಿಸುತ್ತೇವೆ, ನಮಗೆ ತಿಳಿದಿದ್ದೆ ಸರಿಯಾದದ್ದು ಎಂದುಕೊಳ್ಳುತ್ತೇವೆ. ನಾವು ಮಾಡುವುದೆಲ್ಲವೂ ಸರಿಯಾಗಿದೆ ಎಂದುಕೊಳ್ಳುತ್ತೇವೆ. ನಾವು ಏನನ್ನಾದರೂ ಸಣ್ಣದಾಗಿ, ಕೇವಲ ಹೆಸರಿಗಾಗಿ

ಮಾಡುವುದರ ಮೂಲಕ ಬಹಳಷ್ಟು ಸಂತೃಪ್ತಿ ಹೊಂದುತ್ತಿರುತ್ತೇವೆ. ಆದ್ದರಿಂದ ಅಂತಹ ಮಹಾನ್ ವ್ಯಕ್ತಿಗಳ ಸಂದೇಶಗಳನ್ನು ನಾವು ತಿಳಿದುಕೊಳ್ಳಬೇಕು. ಇಲ್ಲದಿದ್ದರೆ ಒಂದು ಜೀವನವನ್ನು ನಷ್ಟ ಮಾಡಿಕೊಂಡಂತೆ, ಒಂದು ಜನ್ಮವನ್ನು ಕಳೆದುಕೊಂಡಂತೆ.

ಆದ್ದರಿಂದ ಇಂದು ಸತ್ಯಸಾಯಿ ಬಾಬಾ ಅವರ ಸಂದೇಶದ ಬಗ್ಗೆ ತಿಳಿದುಕೊಳ್ಳೋಣ.

"**Man will realise his mission on earth when he knows himself**"

ಇದರರ್ಥ "ಮನುಷ್ಯನು ತನ್ನನ್ನು ತಾನು ತಿಳಿದುಕೊಂಡಾಗ ಅವನು ಭೂಮಿಯ ಮೇಲಿನ ತನ್ನ ಉದ್ದೇಶವನ್ನು ತಿಳಿದುಕೊಳ್ಳಬಲ್ಲನು".

ಇದು ಸತ್ಯ ಸಾಯಿಬಾಬಾ ಅವರು ನೀಡಿದಂತಹ ಅದ್ಭುತ ಸಂದೇಶ. ಏಕೆಂದರೆ ಅವರು ಏನು ಹೇಳಿದ್ದಾರೆಂದರೆ? ಯಾವುದೇ ಮನುಷ್ಯ ಭೂಮಿಗೆ ಬಂದಾಗ, ಅಂದರೆ ಆತ್ಮಗಳಾದ ನಾವು ಭೂಮಿಯ ಮೇಲೆ ಜನ್ಮ ತೆಗೆದುಕೊಳ್ಳಲು ನಿರ್ಧರಿಸಿದಾಗ ನಾವು ಮೊದಲು ಒಂದು ಯೋಜನೆಯನ್ನು ರೂಪಿಸಿಕೊಳ್ಳುತ್ತೇವೆ. ಯೋಜನೆ ಎಂದರೆ ಭೂಮಿಗೆ ಬಂದು ಏನು ಮಾಡಬೇಕು? ಏನನ್ನು ಸಾಧಿಸಬೇಕು? ಎಂಬುದನ್ನು ನಿರ್ಧರಿಸಿಕೊಂಡು ಅದಕ್ಕೆ ಅನುಗುಣವಾಗಿ ಯೋಜನೆಗಳನ್ನು ಹಾಕಿಕೊಳ್ಳುತ್ತೇವೆ. ಮೇಲೆ ಪ್ರಣಾಳಿಕೆಗಳನ್ನು ಹಾಕಿಕೊಳ್ಳುವಾಗ ಇರುವಂತಹದ್ದು ಆತ್ಮ.

ಆದ್ದರಿಂದ ಆತ್ಮಕ್ಕೆ ಪ್ರಯೋಜನಕಾರಿಯಾದ ಕೆಲಸಗಳನ್ನು ಮಾಡುವುದು, ಉನ್ನತ ಲೋಕಗಳನ್ನು ತಲುಪುವುದು, ಇನ್ನೂ ಉತ್ತಮವಾಗಿ ಬೆಳೆಯುವುದು, ಆ ಉನ್ನತ ಲೋಕಗಳಲ್ಲಿ ಮಹಾನ್ ವ್ಯಕ್ತಿಗಳ ಸಾಂಗತ್ಯವನ್ನು ಮಾಡುವುದು, ಅನೇಕ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುವುದು, ಇನ್ನು ಈ ಸೃಷ್ಟಿಯಲ್ಲಿ ಇರುವುದಕ್ಕಿಂತ ಹೆಚ್ಚಿನ ಜ್ಞಾನವನ್ನು ಪಡೆಯುವುದು ಆತ್ಮದ ಯೋಜನೆಯಾಗಿದೆ.

ಆದರೆ ಆತ್ಮವು ಮಾಡಿದ ಯೋಜನೆಯನ್ನು ಭೂಮಿಯ ಮೇಲೆ ಜನಿಸಿದ ತಕ್ಷಣ ಮರೆತುಬಿಡುತ್ತದೆ. ಆದ್ದರಿಂದ ಜನನದ ನಂತರ ಅದು ತನ್ನ ಯೋಜನೆಯ ಪ್ರಕಾರ ಬದುಕುವುದಿಲ್ಲ, ಬದಲಿಗೆ ಅದಕ್ಕೆ ವಿರುದ್ಧವಾಗಿ ಬದುಕುತ್ತದೆ, ಅದರಿಂದಾಗಿ ಬಹಳಷ್ಟು ನಷ್ಟ ಹೊಂದುತ್ತದೆ. ಆದರೆ ಸತ್ಯ ಸಾಯಿಬಾಬಾ ಅವರು ಏನು ಹೇಳಿದ್ದಾರೆಂದರೆ? ಮಾನವನು ತಾನು ಯಾರೆಂದು ತಿಳಿದುಕೊಂಡಾಗ ತನ್ನ ಪ್ರಣಾಳಿಕೆಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಎಂದಿದ್ದಾರೆ.

ಆದ್ದರಿಂದ ಯಾವುದೇ ಮನುಷ್ಯನು ಮೊದಲು ತನ್ನನ್ನು ತಾನು ತಿಳಿದುಕೊಳ್ಳಲು ಪ್ರಯತ್ನಿಸಬೇಕು, ಇಲ್ಲದಿದ್ದರೆ ಅವನು ಭೂಮಿಯ ಮೇಲೆ ಮಾಡಬೇಕಾದದ್ದು

ಒಂದಾದರೆ ಅವನು ಮಾಡುವುದು ಇನ್ನೊಂದು ಆಗಿರುತ್ತದೆ. ಆಗ ಅವನು ಆ ಜೀವನವನ್ನೇ ನಷ್ಟ ಹೊಂದುವ ಪರಿಸ್ಥಿತಿ ಏರ್ಪಡುತ್ತದೆ. ಆದ್ದರಿಂದ ಯಾರಾದರೂ ಸರಿ ಮೊದಲು ತಾನು ಯಾರೆಂದು ತಿಳಿದುಕೊಳ್ಳಬೇಕು, ಅದಕ್ಕಾಗಿಯೇ ರಮಣ ಮಹರ್ಷಿಯು ಸಹ ನೀನು ಯಾರೆಂದು ತಿಳಿದುಕೋ ಎನ್ನುತ್ತಾರೆ.

ಹಾಗಾದರೆ ನಾನು ಯಾರು ಎಂದು ತಿಳಿದುಕೊಳ್ಳಬೇಕೆಂದರೆ? ಪ್ರಸ್ತುತ ಅಸ್ತಿತ್ವದಲ್ಲಿರುವುದು ಈ ಶರೀರವಾಗಿರುವುದರಿಂದ, ಆ ಶರೀರವೇ ತಾನು ಎಂದು ಭಾವಿಸುತ್ತಾರೆ. ಆ ಶರೀರಕ್ಕೆ ಒಂದು ಹೆಸರನ್ನು ಸಹ ಇಟ್ಟುಕೊಳ್ಳುತ್ತಾರೆ, ಆದ್ದರಿಂದ ಆ ಹೆಸರು ಸಹ ನಾನೇ ಎಂದು ಭಾವಿಸುತ್ತಾರೆ. ಅದಕ್ಕಾಗಿಯೇ ಯಾರಾದರೂ ಆ ಹೆಸರಿನಿಂದ ಟೀಕಿಸಿದರೆ ಅಥವಾ ನಿಂದಿಸಿದರೆ ತುಂಬಾ ಕೋಪಗೊಳ್ಳುತ್ತಾರೆ ಟೀಕಿಸುವವರನ್ನು ಪ್ರತಿಯಾಗಿ ಟೀಕಿಸುತ್ತಾರೆ, ನಿಂದಿಸಿದವರನ್ನು ಮತ್ತೆ ನಿಂದಿಸುತ್ತಾರೆ.

ಇದಕ್ಕೆ ಮುಖ್ಯ ಕಾರಣ ತಾನು ಆ ದೇಹ ಎಂದು ಭಾವಿಸುವುದೇ ಆಗಿದೆ. ಆದ್ದರಿಂದ ತಾನು ಯಾರೆಂದು ತಿಳಿದುಕೊಳ್ಳಬೇಕೆಂದರೆ ಮೊದಲಿಗೆ ಇನ್ನೂ ಕೆಲವು ವಿಷಯಗಳು ತಿಳಿದುಕೊಳ್ಳಬೇಕು. ಪ್ರಸ್ತುತ ದೇಹ ಒಂದೇ ಕಾಣಿಸುತ್ತದೆ, ಆದರೆ ಮಾನವ ಎಂದರೆ ಕೇವಲ ದೇಹವೇ ಅಲ್ಲ, ದೇಹದೊಂದಿಗೆ ಮನಸ್ಸು ಎಂಬುದು ಸಹ ಇದೆ. ಮನಸ್ಸಿನೊಂದಿಗೆ ಆತ್ಮವೂ ಇದೆ. ವಿಚಾರಣೆ ಮಾಡಿದರೆ ಇವೆಲ್ಲವೂ ತಿಳಿಯುತ್ತವೆ.

ಪ್ರಸ್ತುತ ಈ ಮೂರು ಒಟ್ಟಿಗೆ ಇವೆ. ಆದರೆ ಸಾವಿನ ನಂತರ ಈ ಮೂರು ಎರಡಾಗುತ್ತವೆ, ಒಂದು ಸುಟ್ಟು ಹೋಗುತ್ತದೆ, ಎರಡನೆಯದು ಮೇಲೆ ಹೋಗುತ್ತದೆ. ಸುಟ್ಟು ಹೋಗುವುದು ಶರೀರ, ಮೇಲೆ ಹೋಗುವುದು ಆತ್ಮ. ಆದ್ದರಿಂದ ಆಲೋಚಿಸಿದರೆ ನಾನು ಮೇಲಕ್ಕೆ ಹೋಗುವ ಆತ್ಮವೇ? ನಾನು ಸುಟ್ಟು ಹೋಗುವ ದೇಹವೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಇಲ್ಲಿ ಮೊದಲು ಒಂದು ವಿಷಯವನ್ನು ನಿರ್ಧರಿಸಬೇಕು. ಮಾನವರಿಗೆ ಇನ್ನೂ ಜನ್ಮಗಳು ಇವೆಯೇ? ಇಲ್ಲವೇ? ಎಂದು. ಆದರೆ ಮನುಷ್ಯರಿಗೆ ಇನ್ನು ಹಲವಾರು ಜನ್ಮಗಳಿವೆ ಎಂದು ಎಲ್ಲರೂ ಅಂಗೀಕರಿಸುತ್ತಾರೆ. ಅದಕ್ಕಾಗಿಯೇ ಹಿಂದೂ ಧರ್ಮದಲ್ಲಿ ಶ್ರಾದ್ಧ ಕಾರ್ಯಗಳನ್ನು ಮಾಡುತ್ತಾರೆ, ಕಾರಣ ಸತ್ತುಹೋದ ವ್ಯಕ್ತಿ ಇನ್ನು ಇದ್ದಾನೆ ಎಂಬ ಉದ್ದೇಶದಿಂದಲೇ! ಇದಲ್ಲದೆ ಭಗವದ್ಗೀತೆಯು ಸಹ ಅನೇಕ ಸಂದರ್ಭಗಳಲ್ಲಿ ಮನುಷ್ಯರಿಗೆ ಹೆಚ್ಚಿನ ಜನ್ಮಗಳಿವೆ ಎಂದು ಉಲ್ಲೇಖಿಸುತ್ತದೆ.

ಆದ್ದರಿಂದ ಪ್ರತಿಯೊಬ್ಬರಿಗೂ ಇನ್ನೂ ಹಲವಾರು ಜನ್ಮಗಳಿವೆ ಎಂದು ತಿಳಿಯಬಹುದು. ಹಾಗಾದರೆ ಇನ್ನು ಜನ್ಮಗಳಿದ್ದರೆ ಇರುವಂತಹದ್ದು ಆತ್ಮ, ಆದ್ದರಿಂದ ಇರುವಂತಹ ಆತ್ಮವೇ ತಾನು ಎಂದು ತಿಳಿಯುತ್ತದೆ. ಆದರೆ ತಾನು ದೇಹವಾಗಿದ್ದರೆ

ದೇಹ ಸುಡುತ್ತದೆ, ಆದ್ದರಿಂದ ದೇಹ ಇಲ್ಲದಂತೆಯೇ! ಆದರೆ ಪ್ರತಿಯೊಬ್ಬರು ಇನ್ನೂ ಜನ್ಮಗಳಿವೆ ಎಂದು ಒಪ್ಪಿಕೊಳ್ಳುತ್ತಾರೆ, ಆದ್ದರಿಂದ ಇರುವಂತಹ ಆತ್ಮವೇ ನಾನು ಎಂದು ಅರ್ಥವಾಗುತ್ತದೆ.

ಆದ್ದರಿಂದ ಆತ್ಮವಾದ ತಾನು ಮೇಲಿನ ಲೋಕಗಳಲ್ಲಿ ಒಂದು ಯೋಜನೆಯನ್ನು ರೂಪಿಸಿಕೊಂಡು ಕೆಳಗೆ ಬರುತ್ತಾನೆ. ಕೆಳಗೆ ಬಂದು ಜನ್ಮ ತೆಗೆದುಕೊಂಡ ನಂತರ ಎಲ್ಲವನ್ನು ಮರೆತುಬಿಡುತ್ತಾನೆ ಮರೆತು ಹೋದ ನಂತರ ಸದಾ ಆ ಕುಟುಂಬದಲ್ಲಿ ಅ ಕುಟುಂಬದ  ವಾತಾವರಣಕ್ಕೆ ಹೊಂದಿಕೊಳ್ಳುತ್ತಾನೆ. ಎಲ್ಲರಂತೆ ಬದುಕುತ್ತಾನೆ ಎಲ್ಲರೂ ಯಾವುದಕ್ಕೆ ಪ್ರಾಮುಖ್ಯತೆ ನೀಡುತ್ತಾರೋ ತಾನು ಸಹ ಅದಕ್ಕೆ ಪ್ರಾಮುಖ್ಯತೆ ನೀಡುತ್ತಾನೆ.

ಅಂತಹವರಿಗೆ ಒಬ್ಬ ಸದ್ಗುರು ದೊರೆತಾಗ ಅವರು ಸ್ಪಷ್ಟವಾಗಿ ಹೇಳುವುದೇನೆಂದರೆ ನೀನು ದೇಹವಲ್ಲ, ನೀನು ಆತ್ಮ ನೀನು ಒಂದು ಯೋಜನೆಯನ್ನು ರೂಪಿಸಿಕೊಂಡು ಭೂಮಿಗೆ ಬಂದಿರುವೆ, ಆ ಯೋಜನೆಯ ಪ್ರಕಾರ ಜೀವಿಸಬೇಕು ಎಂದು ಹೇಳುತ್ತಾರೆ. ಇವೆಲ್ಲವನ್ನು ತಿಳಿದುಕೊಳ್ಳಲು ಧ್ಯಾನ ಮಾಡು, ಜ್ಞಾನವನ್ನು ಸಂಪಾದಿಸು ಆಗ ನಿನಗೆ ಎಲ್ಲವೂ ತಿಳಿಯುತ್ತವೆ ಎಂದು ಹೇಳುತ್ತಾರೆ.

ಆ ಸದ್ಗುರುವಿನ ಬೋಧನೆಯನ್ನು ಅರ್ಥಮಾಡಿಕೊಂಡವರು ಅವರು ಹೇಳಿದಂತೆ ಧ್ಯಾನ ಮಾಡುತ್ತಾರೆ, ಕ್ರಮೇಣ ಜ್ಞಾನವನ್ನು ಪಡೆಯುತ್ತಾರೆ. ಆಗ ಅವರಿಗೆ ಅವರ ಯೋಜನೆ ಅರ್ಥವಾಗುತ್ತದೆ. ಅದನ್ನೇ ಸತ್ಯ ಸಾಯಿಬಾಬಾ ಅವರು ಬೋಧಿಸಿದ್ದಾರೆ. ನೀನು ಯಾರು ಎಂದು ತಿಳಿದುಕೊಂಡರೆ ನಿನ್ನ ಯೋಜನೆ ತಿಳಿಯುತ್ತದೆ ಎಂದು. ಸದ್ಗುರುವಿನಿಂದ ತಾನು ದೇಹವಲ್ಲ ಆತ್ಮವೆಂದು ತಿಳಿದುಕೊಳ್ಳುತ್ತಾರೆ, ತನ್ನ ಯೋಜನೆಯನ್ನು ಸಹ ತಿಳಿದುಕೊಂಡು ಅದಕ್ಕೆ ಅನುಗುಣವಾಗಿ ಜೀವಿಸುತ್ತಾರೆ ಜೀವನವನ್ನು ಪೂರ್ತಿಯಾಗಿ ಆತ್ಮಕ್ಕೆ ವಿನಿಯೋಗಿಸುತ್ತಾರೆ.

ಇವನ ಯೋಜನೆ ಜ್ಞಾನ ಸಂಪಾದಿಸುವುದು, ಉನ್ನತ ಲೋಕಗಳಿಗೆ ತಲುಪುವುದು, ಇದೇ ಆತ್ಮಕ್ಕೆ ಲಾಭವನ್ನು ಉಂಟು ಮಾಡುವುದು. ಆತ್ಮಕ್ಕೆ ಪ್ರಯೋಜನಕಾರಿಯಾಗುವ ಜ್ಞಾನವನ್ನು ಎಷ್ಟು ಹೆಚ್ಚಿಸಿಕೊಳ್ಳುತ್ತಾನೋ! ಅಷ್ಟು ಉನ್ನತವಾದ ಲೋಕವನ್ನು ಹೊಂದಬಲ್ಲನು, ಅಷ್ಟು ಲಾಭವನ್ನು ಹೊಂದಿದಂತೆ.

ಆದರೆ ಅನೇಕ ಜನರಿಗೆ ತಾನು ಆತ್ಮ ಎಂದು ತಿಳಿಯದೆ ತಾನು ದೇಹ ಎಂದು ಭಾವಿಸುತ್ತಾ ಎಲ್ಲರಂತೆಯೇ ಬದುಕುತ್ತಾರೆ. ದೈಹಿಕ ಸುಖಕ್ಕೆ ಪ್ರಾಮುಖ್ಯತೆ ನೀಡುತ್ತಾರೆ. ಅದಕ್ಕೆ ಬೇಕಾದ ಹಣ ಸಂಪಾದನೆಗೆ ಇಡೀ ಜೀವನವನ್ನು ಕಳೆಯುತ್ತಾರೆ, ಆದರೆ ಮರಣದ ನಂತರ ತಿಳಿಯುತ್ತದೆ ತಾನು ದೇಹವಲ್ಲ ಆತ್ಮ ಎಂದು, ಆದರೆ ಈಗಾಗಲೇ ಎಲ್ಲವೂ ಮುಗಿದಿರುತ್ತದೆ, ಆಗ ಇನ್ನೇನು ಮಾಡಲು ಸಾಧ್ಯವಾಗುವುದಿಲ್ಲ.

ಅದಕ್ಕಾಗಿ ಸತ್ಯ ಸಾಯಿಬಾಬಾ ಅವರು ನೀನು ಯಾರೆಂದು ತಿಳಿದುಕೊಂಡರೆ? ನಿನ್ನ ಯೋಜನೆ ಸ್ಪಷ್ಟವಾಗಿ ತಿಳಿಯುತ್ತದೆ, ನೀನು ಏನು ಮಾಡಬೇಕೆಂದು ತಿಳಿಯುತ್ತದೆ, ಆಗ ಅದನ್ನೇ ಮಾಡುವೆ ಎಂದು ಹೇಳಿದ್ದಾರೆ.

ಸಾಮಾನ್ಯವಾಗಿ ಜನರು ಜೀವನದಲ್ಲಿ ನಿಜವಾದ ಜ್ಞಾನದ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸುವುದಿಲ್ಲ. ಕೆಲವರು ಧ್ಯಾನದ ಮಾರ್ಗವನ್ನು ಪ್ರವೇಶಿಸಿದ ನಂತರವೂ ಆ ಕೆಲಸಗಳು, ಈ ಕೆಲಸಗಳನ್ನು ಮಾಡುತ್ತಾರೆ ಹೊರತು ಜ್ಞಾನವನ್ನು ಸಂಪಾದಿಸುವ ಕೆಲಸವನ್ನು ಮಾಡುವುದಿಲ್ಲ. ಯಾವಾಗಲೂ ದೈಹಿಕ ಲಾಭಗಳು ಮತ್ತು ಮನಸ್ಸಿನ ಕೋರಿಕೆಗಳು. ಆ ಸೇವೆಗಳು ಈ ಸೇವೆಗಳನ್ನು ಮಾಡುತ್ತಾರೆ.

ಈ ಧ್ಯಾನಮಾರ್ಗಕ್ಕೆ ಬಂದರೂ ಯಾವುದೋ ಧ್ಯಾನ ಮಾಡುತ್ತಾರೆ, ಸಸ್ಯಹಾರ ರ್‍ಯಾಲಿಗಳಲ್ಲಿ ಭಾಗವಹಿಸುತ್ತಾರೆ, ಕೆಲವು ಪುಸ್ತಕಗಳನ್ನು ಓದುತ್ತಾರೆ. ಆದರೆ ಪ್ರತಿಯೊಬ್ಬರು ಮಾಡಬೇಕಾದದ್ದು ತನ್ನ ಯೋಜನೆಯ ಪ್ರಕಾರ ಜ್ಞಾನವನ್ನು ಸಂಪಾದಿಸಿ ಊರ್ಧ್ವ ಲೋಕಗಳನ್ನು ತಲುಪುವುದು. ಅಷ್ಟೇ ಹೊರತು ಜ್ಞಾನವಿಲ್ಲದೇ ಉನ್ನತ ಲೋಕಗಳಿಗೆ ಹೋದರೂ ಉನ್ನತ ಲೋಕಗಳನ್ನು ಹೇಗೆ ಪಡೆಯಬಲ್ಲರು? ಉನ್ನತ ಸ್ಥಿತಿಗೆ ಹೇಗೆ ತಲುಪುತ್ತಾರೆ?

ಅದಕ್ಕಾಗಿಯೇ ಸತ್ಯ ಸಾಯಿಬಾಬಾ ಅವರು ನೀನು ಯಾವ ಉದ್ದೇಶದಿಂದ ಭೂಮಿಗೆ ಬಂದಿರುವೆಯೋ ಆ ಯೋಜನೆ ನಿನಗೆ ಅರ್ಥವಾಗಬೇಕಾದರೆ ಮೊದಲು ನೀನು ಯಾರೆಂದು ತಿಳಿದುಕೊಳ್ಳಬೇಕು. ಆಗಲೇ ನಿನ್ನ ಯೋಜನೆ ನಿನಗೆ ತಿಳಿಯುತ್ತದೆ ಎಂದು ಹೇಳಿದ್ದಾರೆ. ಎಂತಹ ಅದ್ಭುತ ಸಂದೇಶ! ನೀನು ಯಾರೆಂದು ನೀನು ತಿಳಿದುಕೊಳ್ಳದೇ ನಿನ್ನ ಯೋಜನೆ ಹೇಗೆ ತಿಳಿಯುತ್ತದೆ?

ಅನೇಕರು ನಾನು ಆತ್ಮ ಎಂಬ ವಿಷಯ ನನಗೆ ತಿಳಿದಿದೆ ಎನ್ನುತ್ತಾರೆ. ಆದರೆ ನೀನು ಆತ್ಮ ಎಂದು ತಿಳಿದರೆ ಸಾಕಾಗುತ್ತದೆಯೇ? ಆತ್ಮ ಎಂಬಂತೆ ನೀನು ಬದುಕಬೇಕಲ್ಲವೇ? ನಿನ್ನ ಎಲ್ಲಾ ಕೆಲಸಗಳನ್ನು ಆತ್ಮದ ಪ್ರಯೋಜನಕ್ಕಾಗಿ ಮಾಡಬೇಕಲ್ಲವೇ? ನೀನು ಮಾತನಾಡುವ ಮಾತುಗಳೆಲ್ಲವೂ ಆತ್ಮದ ಪ್ರಯೋಜನಕ್ಕೆ ಬಳಸಬೇಕಲ್ಲವೇ? ನಿಜವಾಗಿಯೂ ಒಂದು ದಿನದಲ್ಲಿ ಆತ್ಮಕ್ಕಾಗಿ ಎಷ್ಟು ಸಮಯವನ್ನು ಮೀಸಲಿಡುತ್ತಿರುವೆ? ಯಾವಾಗಲೂ ನನ್ನ ಜವಾಬ್ದಾರಿ ಎನ್ನುತ್ತಾ, ಆ ಕೆಲಸಗಳು, ಈ ಕೆಲಸಗಳನ್ನು ಮಾಡುವೆ ಹೊರತು ಆತ್ಮದ ಬಗ್ಗೆ ಎಲ್ಲಿ ಆಲೋಚಿಸುತ್ತಿರುವೆ?

ಅದಕ್ಕಾಗಿಯೇ ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ನಾನು ಆತ್ಮ ಎಂದು ತಿಳಿದರೆ ಸಾಲದು, ತಿಳಿದುಕೊಂಡದ್ದನ್ನು ಅರ್ಥಮಾಡಿಕೊಳ್ಳಬೇಕು ಎಂಬುದನ್ನೇ ನಾನು ಹೇಳುತ್ತಿರುವುದು. ತಿಳಿದುಕೊಳ್ಳುವುದು ಬೇರೆ, ಅರ್ಥ ಮಾಡಿಕೊಳ್ಳುವುದು ಬೇರೆ.

ತಿಳಿದುಕೊಂಡವನು ಸುಮ್ಮನೆ ಹೇಳುತ್ತಾನೆ, ಆದರೆ ಅರ್ಥ ಮಾಡಿಕೊಂಡವನು ಕಡ್ಡಾಯವಾಗಿ ಆಚರಿಸುತ್ತಾನೆ.

ಆದ್ದರಿಂದ ನೀನು ಆ ಜ್ಞಾನವನ್ನು ಎಷ್ಟು ಗಳಿಸಿದರೆ? ಅಷ್ಟು ಉನ್ನತ ಲೋಕಗಳನ್ನು ಪಡೆಯಲು ಸಾಧ್ಯವಾಗುತ್ತದೆ, ಮಹಾನ್ ವ್ಯಕ್ತಿಯಾಗುತ್ತೀಯಾ, ಭೂಮಿಗೆ ಬಂದು ಮಾಡಬೇಕಾದ ಕೆಲಸವನ್ನು ಮಾಡಿದವನಾಗುತ್ತೀಯ.

ಏನ್ರೀ, 22 ವರ್ಷಗಳ ಹಿಂದೆ ಪತ್ರೀಜಿಯ ಪರಿಚಯವಾಗುವುದಕ್ಕಿಂತ ಮುಂಚೆ 53 ವರ್ಷಗಳು. ಎಲ್ಲರಂತೆಯೇ ಜೀವನವನ್ನು ನಡೆಸುತ್ತಿದ್ದೆ. ಪತ್ರೀಜಿಯ ಪರಿಚಯವಾದ ನಂತರ ನೀನು ದೇಹವಲ್ಲ ನೀನು ಆತ್ಮ ಎಂದು ಹೇಳಿದಾಗ ಆಶ್ಚರ್ಯಚಕಿತನಾದೆ. ಆಗ ಅವರು ಹೇಳಿದ್ದು ಸರಿಯೇ? ಅಥವಾ ಅಲ್ಲವೇ? ಎಂಬುದನ್ನು ಸಾಕಷ್ಟು ಅಧ್ಯಯನ ಮಾಡಿ ಅವರು ಹೇಳಿದ್ದು ಸತ್ಯ ಎಂಬ ವಿಷಯ ತಿಳಿದುಕೊಂಡೆನು.

ಹಾಗಾದರೆ ನಾನು ಆತ್ಮವಾದರೆ  ಏನು ಮಾಡಬೇಕು? ಆತ್ಮಕ್ಕೆ ಪ್ರಯೋಜನಕಾರಿ ಯಾಗುವುದು ಜ್ಞಾನ ಎಂದು ತಿಳಿದುಕೊಂಡೆನು. ಇನ್ನು ಅಂದಿನಿಂದ ವ್ಯಾಪಾರ ಮಾಡುವುದನ್ನು ನಿಲ್ಲಿಸಿ, ಹಣ ಸಂಪಾದಿಸುವುದನ್ನು ನಿಲ್ಲಿಸಿ, ಜ್ಞಾನವನ್ನು ಗಳಿಸಲು ಪ್ರಾರಂಭಿಸಿದೆ.

ಪತ್ರೀಜಿ ಹೇಳುತ್ತಿದ್ದರು ಅಲ್ಲವೇ ನೀನು ಬದುಕಲು ಒಂದು ರೊಟ್ಟಿಯ ತುಣುಕು ಮಾವಿನಕಾಯಿ ಸಿಪ್ಪೆ ಸಾಕಾಗುವುದಿಲ್ಲವೇ? ಎಂಬುದು ನನಗೆ ಸರಿಯಾಗಿ ಅರ್ಥವಾಯಿತು. ನಂತರ ನಾನು ಧ್ಯಾನ ಮಾಡುವುದರ ಮೇಲೆ ಮಾತ್ರವಲ್ಲದೆ ಜ್ಞಾನವನ್ನು ಪಡೆಯುವುದರ ಕಡೆಯೂ ಗಮನಹರಿಸಿದೆ. ಜ್ಞಾನವನ್ನು ಪಡೆಯಬೇಕೆಂದರೆ? ಪತ್ರೀಜಿ ನಾಲ್ಕು ವಿಷಯಗಳನ್ನು ಹೇಳಿದ್ದಾರೆ.

1) ಶ್ವಾಸದ ಮೇಲೆ ಗಮನವಿರಿಸಿ ತೀವ್ರವಾದ ಧ್ಯಾನ ಸಾಧನೆ ಮಾಡಬೇಕು. ಅದರೊಂದಿಗೆ ಸಾತ್ವಿಕವಾದ ಸಸ್ಯಹಾರವನ್ನು ತೆಗೆದುಕೊಳ್ಳಬೇಕು. ಈ ಎರಡನ್ನು ಬಹಳ ಕಟ್ಟುನಿಟ್ಟಾಗಿ ಅನುಸರಿಸಿದೆ.

2) ಆತ್ಮಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳು, ಅದೇರೀತಿ ಉಪನಿಷತ್ತುಗಳು ಭಗವದ್ಗೀತೆ ಯಂತಹ ಪುಸ್ತಕಗಳನ್ನು ಓದಬೇಕು.

3) ಯಾರು ಆತ್ಮಜ್ಞಾನದ ಬಗ್ಗೆ ಬೋಧಿಸುತ್ತಾರೆಯೋ! ಅವರ ಸಂದೇಶಗಳನ್ನು ಕೇಳಬೇಕು. ಮುಖ್ಯವಾಗಿ ಭೀಮವರಂನಲ್ಲಿ ಆತ್ಮಜ್ಞಾನದ ಬಗ್ಗೆ ಸಂದೇಶಗಳು ಇರುತ್ತವೆ. ಅದಕ್ಕಾಗಿಯೇ ನಾನು ಭೀಮವರಂ ಅನ್ನು ಬಿಡಬೇಡಿ ಎನ್ನುತ್ತೇನೆ. ಅಲ್ಲಿ ಎರಡು ರೀತಿಯ ಲಾಭಗಳಿವೆ. ಒಂದು ತೀವ್ರವಾದ ಧ್ಯಾನ ಸಾಧನೆ ಮಾಡಲು ಅವಕಾಶವಿರುತ್ತದೆ, ಎರಡು ಈ ಜ್ಞಾನ ಸಂಬಂಧಿತ ಸಂದೇಶಗಳನ್ನು ಸಹ ಕೇಳಬಹುದು.

4) ಈ ಮಾರ್ಗದಲ್ಲಿ ಮಾಡುವ ಸೇವೆ. ಜ್ಞಾನವನ್ನು ಗಳಿಸಿ ಜ್ಞಾನವನ್ನು ಬೋಧಿಸಬೇಕು. ಮಾನವನು ಮಾಡುವ ಎಲ್ಲಾ ರೀತಿಯ ಸೇವೆಗಳಲ್ಲಿ ಜ್ಞಾನವನ್ನು ಬೋಧಿಸುವುದು ಶ್ರೇಷ್ಠ ಮತ್ತು ಅತ್ಯುತ್ತಮವಾದ ಸೇವೆಯಾಗಿದೆ.

ಪತ್ರಿಯವರು ಹಂಚಿಕೊಂಡದ್ದು ಹೆಚ್ಚಾಗುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ನೀವು ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು, ಆದ್ದರಿಂದ ಮೊದಲು ಜ್ಞಾನವನ್ನು ಸಂಪಾದಿಸಿ ನಂತರ ಅದನ್ನು ಎಲ್ಲರಿಗೂ ಹಂಚಬೇಕು. ಇದೆಲ್ಲಾ ಪತ್ರೀಜಿಯವರ ಮೂಲಕ ನಾನು ಆತ್ಮ ಎಂಬುದನ್ನು ತಿಳಿದ ನಂತರ ಅರ್ಥವಾಯಿತು.

ಆದ್ದರಿಂದ ಸತ್ಯ ಸಾಯಿಬಾಬಾ ಅವರು ಹೇಳಿದ್ದು ಬಹಳ ಬಹಳ ಮುಖ್ಯ ಎಂಬ ವಿಷಯ ತಿಳಿದುಕೊಳ್ಳಿ. ಸಾಯಿಬಾಬಾರವರು ಹೇಳಿದಂತೆ ನೀವು ಯಾರೆಂದು ತಿಳಿದುಕೊಳ್ಳಿ! ನಿಮ್ಮ ಯೋಜನೆ ಏನೆಂದು ತಿಳಿದುಕೊಳ್ಳಿ! ಅದಕ್ಕನುಗುಣವಾಗಿ ಬದುಕಿ.

*** ***

## ಬ್ಲೇವಟ್ಸ್‌ಕಿ ಸಂದೇಶ

ಎಲ್ಲಾ ಯೋಗಿಗಳು ಬಹಳಷ್ಟು ಸಾಧನೆ ಮಾಡಿದ್ದಾರೆ ಬಹಳಷ್ಟು ಜ್ಞಾನವನ್ನು ಗಳಿಸಿದ್ದಾರೆ. ಅವರು ಬಹಳಷ್ಟು ಶಕ್ತಿಗಳನ್ನು ಸಹ ಗಳಿಸಿದ್ದಾರೆ, ಅವರು ಬಹಳಷ್ಟು ಅನುಭವ ಜ್ಞಾನವನ್ನು ಸಹ ಗಳಿಸಿದ್ದಾರೆ. ಅಂತಹವರ ಸಂದೇಶಗಳು ನಮಗೆ ಬಹಳಷ್ಟು ಉಪಯುಕ್ತವಾಗಿವೆ, ನಾವು ಬೆಳೆಯಲು ಸಹ ಬಹಳಷ್ಟು ಉಪಯುಕ್ತವಾಗಿವೆ. ಅಂತಹ ಯೋಗಿಗಳಲ್ಲಿ ಮೇಡಂ ಬ್ಲೇವಟ್ಸ್ಕಿ ಹೇಳಿದ ಸಂದೇಶವನ್ನು ನೋಡೋಣ.

**"ದೇವರು, ಭಗವಂತ ಎಂದರೆ ಭಯ ಹೋದಾಗ ಮಾತ್ರ ಜ್ಞಾನ ವಿಕಾಸ ಹೊಂದುತ್ತದೆ".**

ನಾವೆಲ್ಲರೂ ಜ್ಞಾನವನ್ನು ಪಡೆಯಲು, ಜ್ಞಾನವಂತರಾಗಲು ಪ್ರಯತ್ನಿಸುತ್ತಿದ್ದೇವೆ. ಸಂಪೂರ್ಣ ಜ್ಞಾನವನ್ನು ಹೊಂದಲು ಬಹಳ ಶ್ರಮಿಸುತ್ತಿದ್ದೇವೆ. ಕಾರಣವೆಂದರೆ ಪೂರ್ಣ ಜ್ಞಾನಿ ಮಾತ್ರ ಸತ್ಯ ಲೋಕವನ್ನು ಸೇರಬಲ್ಲನು, ಜನ್ಮಗಳಿಲ್ಲದ ಸ್ಥಿತಿಯನ್ನು ತಲುಪಬಲ್ಲನು. ಅದನ್ನೇ ಮೋಕ್ಷ ಎನ್ನುತ್ತಾರೆ, ನಿರ್ವಾಣ ಎನ್ನುತ್ತಾರೆ, ಅವರು ಮಾತ್ರ ದುಃಖದಿಂದ ಶಾಶ್ವತವಾಗಿ ಹೊರ ಬರುತ್ತಾರೆ.

ಹಾಗಾದರೆ ಆ ಜ್ಞಾನ ವಿಕಾಸ ಎಂಬುದು ಹೇಗೆ ಸಂಭವಿಸುತ್ತದೆ? ಎಂಬುದರ ಬಗ್ಗೆ ಮೇಡಂ ಬ್ಲೇವಾಟ್ಸ್ಕಿ ಅದ್ಭುತವಾದ ಸಂದೇಶವನ್ನು ನೀಡಿದ್ದಾರೆ.

"ದೇವರು, ಭಗವಂತ ಎಂದರೆ ಭಯ ಹೋದಾಗ ಮಾತ್ರ ಜ್ಞಾನ ವಿಕಾಸವಾಗುತ್ತದೆ" ಎಂದು ಬ್ಲೇವಟ್ಸ್ಕಿ ಹೇಳಿದ್ದಾರೆ.

ಅಂದರೆ ದೇವರು ಎಂದರೂ, ಭಗವಂತನೆಂದರೂ ಭಯ ಇದ್ದರೆ ನೀವು ಜ್ಞಾನವನ್ನು ಹೊಂದಲು ಸಾಧ್ಯವಿಲ್ಲ ನೀವು ಎಷ್ಟು ಸಾಧನೆ ಮಾಡಿದರೂ ಎಷ್ಟು ಪುಸ್ತಕಗಳನ್ನು ಓದಿದರೂ ಎಷ್ಟು ಸಂದೇಶಗಳನ್ನು ಕೇಳಿದರೂ ನೀವು ಜ್ಞಾನವನ್ನು ಹೊಂದಲು ಸಾಧ್ಯವಿಲ್ಲ ಎಂದು ಬ್ಲೇವಟ್ಸ್ಕಿ ಹೇಳಿದ್ದಾರೆ.

ವಾಸ್ತವವಾಗಿ ದೇವರೆಂದರೆ ಮನುಷ್ಯರಿಗೆ ಭಯ ಏಕೆ ಇರುತ್ತದೆ? ಅಂದರೆ ಈ ಪ್ರಪಂಚದಲ್ಲಿ ಪ್ರಾಚೀನ ಕಾಲದಿಂದಲೂ, ಯಾವುದೇ ಧರ್ಮದಲ್ಲಾದರೂ ಆಚಾರವಾಗಿ ಬರುತ್ತಿರುವ ಪದ್ಧತಿ ಯಾವುದೆಂದರೆ? ಹಿಂದುಗಳಲ್ಲಿ ಪೂಜೆ ಮಾಡುವುದು, ಅದೇರೀತಿ ಕ್ರಿಶ್ಚಿಯನ್ನರಲ್ಲಿ ಪ್ರಾರ್ಥನೆ ಮಾಡುವುದು, ಮುಸ್ಲಿಮರಲ್ಲಿ ನಮಾಜ್ ಮಾಡುವುದು.

ಇವರೆಲ್ಲರಲ್ಲಿ ಪೂಜೆಗಳನ್ನು ಮಾಡಿದರೂ ಪ್ರಾರ್ಥನೆ ಮಾಡಿದರೂ ನಮಾಜ್ ಮಾಡಿದರೂ ದೇವರು ಕಷ್ಟಗಳಿಂದ ರಕ್ಷಿಸುತ್ತಾನೆ ಎಂದು, ಬೇಡಿದ ಆಸೆಗಳನ್ನು ಈಡೇರಿಸುತ್ತಾನೆಂದು, ಮಾಡಿದ ಪಾಪಗಳನ್ನು ಕ್ಷಮಿಸುತ್ತಾನೆ ಎಂಬ ಬಲವಾದ ನಂಬಿಕೆ ಇದೆ. ಅದಕ್ಕಾಗಿಯೇ ಅವರು ತಲೆಮಾರುಗಳಿಂದ ಈ ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆ. ಆದ್ದರಿಂದ ಅವುಗಳಿಗೆ ಭಿನ್ನವಾಗಿ ವರ್ತಿಸಲು ತುಂಬಾ ಹೆದರುತ್ತಾರೆ.

ಏಕೆಂದರೆ? ದೇವರು ಭಯ ಮತ್ತು ಭಕ್ತಿಯನ್ನು ತೋರಿಸಿದರೆ ಮಾತ್ರ ಅವರನ್ನು ಆಶೀರ್ವದಿಸುತ್ತಾನೆ ಮತ್ತು ರಕ್ಷಿಸುತ್ತಾನೆ ಎಂದು ಭಾವಿಸುತ್ತಾರೆ. ಆದ್ದರಿಂದ ಹಿಂದುಗಳು ದೇವಸ್ಥಾನಕ್ಕೆ ಹೋದರೂ, ಕ್ರಿಶ್ಚಿಯನ್ನರು ಚರ್ಚಿಗೆ ಹೋದರೂ ಮುಸ್ಲಿಮರು ಮಸೀದಿಗೆ ಹೋದರೂ ಬಹಳಷ್ಟು ಪರಿಶುದ್ಧರಾಗಿರುತ್ತಾರೆ. ಅಲ್ಲಿಗೆ ಹೋದ ತಕ್ಷಣವೇ ಅವರ ವರ್ತನೆ ಬದಲಾಗುತ್ತದೆ, ಕೆಲಸಗಳು ಬದಲಾಗುತ್ತವೆ, ಮಾತನಾಡುವ ವಿಧಾನ ಬದಲಾಗುತ್ತದೆ. ನೋಡಿದರೆ ಬಹಳಷ್ಟು ಆಶ್ಚರ್ಯವಾಗುತ್ತದೆ.

ಆದರೆ ಹೊರಗೆ ಬಂದ ಮೇಲೆ ಎಲ್ಲವೂ ಸಂಪೂರ್ಣವಾಗಿ ಬದಲಾಗುತ್ತದೆ. ಕಾರಣವೇನೆಂದರೆ ದೇವರು ಹೊರಗಡೆ ಇಲ್ಲ ಎಂಬ ಉದ್ದೇಶ! ಇದನ್ನಾಧರಿಸಿ ದೇವರ ಬಗ್ಗೆ ಎಷ್ಟು ಭಯವಿದೆ ಎಂದು ನಾವು ಊಹಿಸಬಹುದು.

ದೇವರ ವಿಷಯದಲ್ಲಿ ತಮ್ಮ ನಡವಳಿಕೆಯಲ್ಲಿ ಸ್ವಲ್ಪ ಬದಲಾವಣೆ ಬಂದರೂ ದೇವರು ಕೋಪಗೊಳ್ಳುತ್ತಾನೆ, ಆಗ್ರಹವನ್ನು ವ್ಯಕ್ತಪಡಿಸುತ್ತಾನೆ, ಅವರನ್ನು ಆಶೀರ್ವದಿಸುವುದಿಲ್ಲ, ಮೇಲಾಗಿ ಏನಾದರೂ ಕೆಟ್ಟದ್ದು ಸಂಭವಿಸುತ್ತದೆ ಎಂದು ಭಾವಿಸುತ್ತಾರೆ. ಅದಕ್ಕಾಗಿಯೇ ದೇವರೆಂದರೆ ಅಷ್ಟು ಭಯಪಡುತ್ತಾರೆ.

ಇವರೆಲ್ಲರ ಉದ್ದೇಶ ದೇವರು ಬೇರೆ ಇದ್ದಾನೆ, ಅಂದರೆ ದೇವರು ಬೇರೆ, ನಾವು ಬೇರೆ ಎಂಬುದೇ ಅವರ ಉದ್ದೇಶ. ಅಷ್ಟೇಅಲ್ಲ ದೇವರು ತುಂಬಾ ಶ್ರೇಷ್ಠ, ಅನಂತ ಶಕ್ತಿಶಾಲಿ, ಆತ ಏನು ಬೇಕಾದರೂ ಮಾಡಬಲ್ಲನು, ನಾನು ಕೇವಲ ಸಾಮಾನ್ಯ ಮನುಷ್ಯ ಎಂದು ಭಾವಿಸುತ್ತಾರೆ.

ಇದಲ್ಲದೇ ಮಾನವನಾದ ನನಗೆ ಸಹಜವಾಗಿ ಕಷ್ಟಗಳು, ಸಂಕಟಗಳು, ರೋಗಗಳು ಬರುತ್ತಿರುತ್ತವೆ, ಹಲವಾರು ಆಸೆಗಳಿರುತ್ತವೆ, ಹಾಗೆಯೇ ನಾನು ಬಹಳಷ್ಟು ಪಾಪಗಳನ್ನು ಸಹ ಮಾಡುತ್ತಿರುತ್ತೇನೆ ಎಂದು ಭಾವಿಸುತ್ತಾರೆ. ಆದ್ದರಿಂದ ಇವುಗಳಿಂದ ಬಿಡುಗಡೆ ಹೊಂದಬೇಕಾದರು, ಉತ್ತಮ ಜೀವನ ಬೇಕಾದರೂ ಆ ಭಗವಂತನನ್ನು ಅಂದರೆ ದೇವರನ್ನು ಆಶ್ರಯಿಸಬೇಕು. ಆಗ ಆತ ಇವೆಲ್ಲವುಗಳಿಂದ ನನ್ನನ್ನು ರಕ್ಷಿಸುತ್ತಾನೆ, ಕಾಪಾಡುತ್ತಾನೆ ಎನ್ನುವಂತಹ ನಂಬಿಕೆ ಪ್ರತಿಯೊಬ್ಬರಲ್ಲೂ, ಪ್ರತಿ ಧರ್ಮದಲ್ಲಿಯೂ ಬೇರೂರಿದೆ.

ಆದ್ದರಿಂದ ಅಂತಹ ದೇವರನ್ನು ಪೂಜಿಸದಿದ್ದರೂ, ಪ್ರಾರ್ಥಿಸದಿದ್ದರೂ, ನಮಾಜು ಮಾಡದಿದ್ದರೂ ಆತ ಕೋಪಗೊಳ್ಳುತ್ತಾನೆ. ನಮಗೆ ಏನಾದರೂ ಕೆಟ್ಟದ್ದು ಸಂಭವಿಸುತ್ತದೆ ಎಂಬ ಭಯ ಎಲ್ಲಾ ಧರ್ಮಗಳಲ್ಲಿಯೂ ಬೇರೂರಿದೆ. ಆದ್ದರಿಂದ ಹಿಂದುಗಳು ದೇವಾಲಯಗಳಿಗೆ ಹೋಗಿ ಪೂಜೆಗಳನ್ನು ಮಾಡುತ್ತಾರೆ. ಕ್ರಿಶ್ಚಿಯನ್ನರು ಚರ್ಚಿಗೆ ಹೋಗಿ ಪ್ರಾರ್ಥನೆಗಳನ್ನು ಮಾಡುತ್ತಾರೆ. ಹಾಗೆಯೇ ಮುಸ್ಲಿಮರು ಮಸೀದಿಗಳಿಗೆ ಹೋಗಿ ನಮಾಜು ಮಾಡುತ್ತಾರೆ. ಹಾಗೆ ಮಾಡದಿದ್ದರೆ ಏನಾದರೂ ಕೆಟ್ಟದ್ದು ಸಂಭವಿಸುತ್ತದೆ ಎಂಬ ಭಯ ಎಲ್ಲರಲ್ಲೂ ಬೇರೂರಿದೆ.

ಈ ನಂಬಿಕೆಗಳಿಂದ ಯಾರೂ ಹೊರಬರಲು ಸಾಧ್ಯವಾಗುತ್ತಿಲ್ಲ, ಸತ್ಯವನ್ನು ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾರೆ. ಅವರಿಗೆ ಬೋಧಿಸುತ್ತಿರುವ ಗುರುಗಳು, ಹಿರಿಯರು ಸಹ ಅವರಲ್ಲಿರುವ ಭಯವನ್ನು ಹೋಗಲಾಡಿಸುವಲ್ಲಿ ವಿಫಲರಾಗುತ್ತಿದ್ದಾರೆ, ಆದ್ದರಿಂದ ಆ ಭಯದಲ್ಲಿ ಇರುತ್ತಾ ಜ್ಞಾನವನ್ನು ಪಡೆಯಲಾರದೇ ಹೋಗುತ್ತಿದ್ದಾರೆ.

ಆದರೆ ಪತ್ರೀಜಿ ಬಂದ ನಂತರ ವಿಗ್ರಹ ದೇವರಲ್ಲ, ಆತ್ಮವೇ ದೇವರು ಎಂಬ ಸತ್ಯವನ್ನು ಹೇಳಿದರು. ಆದ್ದರಿಂದ ವಿಗ್ರಹವನ್ನು ಆರಾಧಿಸುವುದಲ್ಲ ಆತ್ಮವನ್ನು ಆರಾಧಿಸಿ ಎಂದು ಹೇಳಿದರು. ಆತ್ಮವನ್ನು ಆರಾಧಿಸುವ ಮಾರ್ಗವೇ "ಶ್ವಾಸದ ಮೇಲೆ ಗಮನ" ಧ್ಯಾನ ಎಂದು ಬಹಳ ಸ್ಪಷ್ಟವಾಗಿ ಹೇಳಿದರು.

ಈ ಧ್ಯಾನ ಮಾರ್ಗದಲ್ಲಿ ಬಂದವರಿಗೆ ಆತ್ಮವೇ ದೇವರೆಂದು ತಿಳಿದಿದೆ, ಆತ್ಮವನ್ನು ಆಶ್ರಯಿಸುವ ಈ ಧ್ಯಾನದಿಂದ ಬಹಳಷ್ಟು ಪ್ರಯೋಜನಗಳಿವೆ ಎಂದು ಸಹ ತಿಳಿದಿದೆ.

ಆದರೆ ಹಳೆಯ ಕಾಲದಿಂದ ಅಭ್ಯಾಸವಾದ ವಿಗ್ರಹಾರಾಧನೆಯನ್ನು ತ್ಯಜಿಸಲು ಕೆಲವರು ಹೆದರುತ್ತಾರೆ.

ಅದಕ್ಕಾಗಿಯೇ ಅನೇಕ ಜನರು ವಿಗ್ರಹಗಳನ್ನು ಪೂಜಿಸುವುದನ್ನು ನಿಲ್ಲಿಸುತ್ತಿಲ್ಲ. ಕೆಲವರು ಧ್ಯಾನವನ್ನು ಬಿಡುತ್ತಿದ್ದಾರೆಯೇ ಹೊರತು ವಿಗ್ರಹಾರಾಧನೆ, ಪೂಜೆಗಳನ್ನು ನಿಲ್ಲಿಸುತ್ತಿಲ್ಲ. ಕೆಲವರು ಧ್ಯಾನ, ಪೂಜೆ ಎರಡನ್ನು ಮಾಡುತ್ತಿದ್ದಾರೆ. ಬಹಳ ಕಡಿಮೆ ಜನರು ವಿಗ್ರಹಾರಾಧನೆಯ ಬದಲು ಆತ್ಮಾರಾಧನೆ ಅಂದರೆ 'ಶ್ವಾಸದ ಮೇಲೆ ಗಮನ, ಧ್ಯಾನವನ್ನು ಮಾಡುತ್ತಿದ್ದಾರೆ. ಆದರೆ ವಿಗ್ರಹ ಆರಾಧನೆ ಬದಲು ಧ್ಯಾನ ಮಾಡುವವರಿಗೆ ಮಾತ್ರ ಜ್ಞಾನ ವಿಕಾಸವಾಗುತ್ತದೆ ಎಂದು ಬ್ಲಾವಟ್ಸ್ಕಿ ಹೇಳಿದ್ದಾರೆ.

ಅಂತಹ ಜನರು ಉತ್ತಮ ಜ್ಞಾನವನ್ನು ಪಡೆಯುತ್ತಾರೆ. ಶ್ರೇಷ್ಠ ವ್ಯಕ್ತಿಗಳಾಗಿ ಬೆಳೆಯುತ್ತಾರೆ ಜ್ಞಾನದಲ್ಲಿ ಹೊಂದುವ ಎಲ್ಲಾ ಲಾಭಗಳನ್ನು ಪಡೆಯಲು ಸಾಧ್ಯವಾಗುತ್ತದೆ ಇನ್ನು ಕೆಲವರು ಪೂಜೆ ಮಾಡುವುದನ್ನು ನಿಲ್ಲಿಸುತ್ತಾರೆ ಆದರೆ ದೇವರೆಂದರೆ ಭಯ, ಭಗವಂತನೆಂದರೆ ಭಯ ಹೋಗುವುದಿಲ್ಲ. ಆದ್ದರಿಂದ ಅಂತಹವರಿಗೆ ಎಷ್ಟೇ ಕಷ್ಟ ಪಟ್ಟರೂ ಜ್ಞಾನ ಹೆಚ್ಚಾಗುವುದಿಲ್ಲ.

ನನ್ನ ವಿಷಯಕ್ಕೆ ಬಂದರೆ ನಾನು ಬಾಲ್ಯದಿಂದಲೂ ವೆಂಕಟೇಶ್ವರ ಸ್ವಾಮಿಯ ಭಕ್ತ, ಪ್ರತಿ ವರ್ಷವೂ ತಿರುಮಲಕ್ಕೆ ಹೋಗುತ್ತಿದ್ದೆ. ಅಂತಹ ನನಗೆ 2002ರಲ್ಲಿ ಪತ್ರೀಜಿಯ ಪರಿಚಯವಾಯಿತು, ಅವರ ಮೂಲಕ ವಿಗ್ರಹ ದೇವರಲ್ಲ, ಆತ್ಮವೇ ದೇವರೆಂದು ತಿಳಿದುಕೊಂಡೆನು. ಮೊದಲಿಗೆ ನಾನು ನಂಬಲಿಲ್ಲ.

ನಿಧಾನವಾಗಿ ನಾನು ಉಪನಿಷತ್ತುಗಳು ಮತ್ತು ಭಗವದ್ಗೀತೆಯನ್ನು ಅಧ್ಯಯನ ಮಾಡುತ್ತಾ ಹೋದಂತೆ ಪತ್ರೀಜಿ ಹೇಳಿದ್ದು ಸತ್ಯ ಎಂದು ನನಗೆ ಅರಿವಾಯಿತು. ನಿಧಾನವಾಗಿ ನನ್ನಲ್ಲಿದ್ದ ಭಯ ಹೋಯಿತು, ಅದು ಒಂದೇ ಬಾರಿಗೆ ಹೋಗಲಿಲ್ಲ, ಒಂದೊಂದು ವಿಷಯವನ್ನು ತಿಳಿದುಕೊಳ್ಳುತ್ತಾ ಹೋದಂತೆ ಸಂಪೂರ್ಣವಾಗಿ ಹೋಯಿತು.

ಅಷ್ಟೇ ಅಲ್ಲ ಪತ್ರೀಜಿ ಇನ್ನೂ ಏನು ಹೇಳಿದ್ದಾರೆಂದರೆ? ನೀನು ದೇಹವಲ್ಲ ಆತ್ಮ ಎಂದು ಹೇಳಿದ್ದಾರೆ. ಆಗ ನಾನು ದೇಹವಲ್ಲದಿದ್ದರೆ ಮತ್ತಿನ್ನೇನು ಎಂದು ಆಶ್ಚರ್ಯವಾಯಿತು, ನಾನು ಹೇಗೆ ಆತ್ಮವಾಗುತ್ತೇನೆ? ಎಂಬುದನ್ನು ಸಹ ಅಧ್ಯಯನ ಮಾಡಿದೆ. ಆಗ ಪತ್ರಿಯವರು ಹೇಳಿದಂತೆಯೇ ನಾನು ಆತ್ಮ ಎಂದು ತಿಳಿದುಕೊಂಡೆನು.

ನಂತರ ಪತ್ರೀಜಿ ವಿಗ್ರಹ ದೇವರಲ್ಲ ಆತ್ಮವೇ ದೇವರು ಎಂದು ಹೇಳಿದರು.

ಆಲೋಚಿಸಿ ನಾನು ಆತ್ಮವಾದಾಗ ಆತ್ಮವೇ ದೇವರಾದಾಗ ಹಾಗಾದರೆ ನಾನು ಯಾರು? ನಾನೇ ದೇವರಲ್ಲವೇ ಅಲ್ಲಿಯವರೆಗೂ ದೇವರೆಂದರೆ ಎಲ್ಲೋ ಇದ್ದಾನೆ ಆತ ಬಹಳ ಶಕ್ತಿಶಾಲಿ ಕರುಣಾಮಯಿ, ದಯಾಮಯಿ, ಆತನನ್ನು ಆಶ್ರಯಿಸಿದರೆ, ಆರಾಧಿಸಿದರೆ ಕಷ್ಟಗಳು ಮಾಯವಾಗುತ್ತವೆ, ಕೋರಿಕೆಗಳು ಈಡೇರುತ್ತವೆ, ಪಾಪಗಳು ಕ್ಷಮಿಸಲ್ಪಡುತ್ತವೆ ಎಂದು ನನಗೆ ತಿಳಿದಿತ್ತು.

ಆದರೆ ಈಗ ನಾನೇ ದೇವರು ಎಂದು ಅರ್ಥವಾಯಿತು. ವೇದಗಳಲ್ಲಿ "ಅಹಂ ಬ್ರಹ್ಮಾಸ್ಮಿ" ಅಂದರೆ ನಾನೇ ಬ್ರಹ್ಮ ಎಂದು ಹೇಳಲ್ಪಟ್ಟಿದೆ. ಆಗ ನಾನೇ ದೇವರೆಂದು ಸ್ಪಷ್ಟವಾಗಿ ಅರ್ಥವಾಯಿತು. ಹಾಗಾದರೆ ನಾನೇ ದೇವರಾಗಿರುವಾಗ ನಾನು ಯಾರಿಗೆ ಭಯಪಡಬೇಕು? ನಾನೇ ಈ ದೇವರು ಎಂಬ ನಿರ್ಧಾರಕ್ಕೆ ಬಂದಾಗ ದೇವರೆಂದರೆ, ಭಗವಂತನೆಂದರೆ ಭಯ ಹೋಯಿತು.

ಅಂದಿನಿಂದ ನಾನು ಮಾಡುವ ಧ್ಯಾನದಿಂದ ಸ್ವಾಧ್ಯಾಯದಿಂದ ಸಂದೇಶಗಳನ್ನು ಕೇಳುವುದರ ಮೂಲಕ ನನ್ನಲ್ಲಿ ಜ್ಞಾನ ಹೆಚ್ಚುತ್ತಾ ಈ ಈ ಸ್ಥಿತಿಯನ್ನು ತಲುಪಿದ್ದೇನೆ.

ಈಗ ಮೇಡಂ ಬ್ಲಾವಟ್ಸ್ ಕೀ, ಈ ಸಂದೇಶವನ್ನು ಏಕೆ ನೀಡಿದ್ದಾರೆ ಎಂಬುದು ಚೆನ್ನಾಗಿ ಅರ್ಥವಾಯಿತು.

ಆದ್ದರಿಂದ ನೀವು ಸಹ ಜ್ಞಾನಪರವಾಗಿ ಬೆಳೆಯಬೇಕೆಂದರೆ? ಮೊದಲಿಗೆ ದೇವರೆಂದರೆ, ಭಗವಂತನೆಂದರೆ ಭಯ ಹೋಗಬೇಕು. ಅದಕ್ಕೂ ಮೊದಲು ನಾನು ಆತ್ಮ ಎಂದು ತಿಳಿದುಕೊಳ್ಳಬೇಕು ನಂತರ ಆತ್ಮವೇ ದೇವರು ಎಂದು ಸಹ ತಿಳಿದುಕೊಳ್ಳಬೇಕು ಆಗ ನಮಗೆ ನಾನೇ ದೇವರು ಎಂದು ಅರ್ಥವಾಗುತ್ತದೆ ಆಗ ಪೂಜೆಗಳು, ಪ್ರಾರ್ಥನೆಗಳು, ನಮಾಜುಗಳನ್ನು ನಿಲ್ಲಿಸಲು ಇರುವ ಭಯ ಹೋಗುತ್ತದೆ.

ದೇವರೆಂದರೆ ಭಯವಿದ್ದರೆ ನಿನಗೆ ಜ್ಞಾನವಿಕಾಸವಾಗುವುದಿಲ್ಲ, ಜ್ಞಾನ ಬರದಿದ್ದರೆ ಕರ್ಮಗಳು ಸುಟ್ಟು ಹೋಗುವುದಿಲ್ಲ, ಕರ್ಮಗಳು ಸುಡದೇ ಇದ್ದರೆ ಮೋಕ್ಷ ಬರುವುದಿಲ್ಲ, ನಿನ್ನ ಗುರಿಯನ್ನು ಸಾಧಿಸುವುದಿಲ್ಲ. ಇನ್ನು ಅನೇಕ ಜನ್ಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನಿನ್ನ ಗುರಿಯನ್ನು ಸಾಧಿಸಲು ಮೋಕ್ಷವನ್ನು ಪಡೆಯಬೇಕು, ಮೋಕ್ಷ ಪಡೆಯಲು ಕರ್ಮಗಳೆಲ್ಲವೂ ಸುಟ್ಟು ಹೋಗಬೇಕು. ಕರ್ಮಗಳೆಲ್ಲವೂ ಸುಡಲು ಜ್ಞಾನದ ಅಭಿವೃದ್ಧಿ ಆಗಬೇಕು. ಅದನ್ನೇ ಮೇಡಮ್ ಬ್ಲಾವಟ್ಸ್ಕಿ ಬೋಧಿಸಿದ್ದಾರೆ.

ನನಗೆ ದೇವರೆಂದರೆ ಭಯ ಹೋದಾಗಿನಿಂದ ನನ್ನ ಜ್ಞಾನ ಹೆಚ್ಚುತ್ತಲೇ ಇದೆ. ನೀವು ನೋಡುತ್ತಲೇ ಇದ್ದೀರಿ, ಈಗ ನಾನು ಅನೇಕ ಪುಸ್ತಕಗಳನ್ನು ಬರೆದಿದ್ದೇನೆ, ಹಲವು

ಸಂದೇಶಗಳನ್ನು ನೀಡುತ್ತಿದ್ದೇನೆ. ನನ್ನಂತೆಯೇ ನಮ್ಮ ಮೇಡಂ ಸಹ ಅದ್ಭುತವಾದ ಕ್ಲಾಸುಗಳನ್ನು ಹೇಳಲು ಸಾಧ್ಯವಾಗುತ್ತಿದೆ.

ಯಾರಿಗಾದರೂ ದೇವರ ಬಗೆಗಿನ ಭಯ ಹೋದಾಗಲೇ ಜ್ಞಾನ ಅಭಿವೃದ್ಧಿಯಾಗುತ್ತದೆ, ಜ್ಞಾನ ಪಡೆದಾಗ ಮಾತ್ರ ಆ ಮಟ್ಟಕ್ಕೆ ಬರುತ್ತಾರೆ, ಶ್ರೇಷ್ಠ ವ್ಯಕ್ತಿಗಳಾಗುತ್ತಾರೆ.

ಆದ್ದರಿಂದ ಮೇಡಂ ಬ್ಲಾವಟ್ಸ್ಕೀ ಹೇಳಿರುವುದು ಸಾಮಾನ್ಯವಾದ ವಿಷಯವಲ್ಲ ಬಹಳ ಅದ್ಭುತವಾದ ವಿಷಯ. ಜ್ಞಾನವನ್ನು ಹೊಂದಲು ಬಹಳಷ್ಟು ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದೇವೆ. ಎಲ್ಲದಕ್ಕಿಂತಲೂ ಮುಖ್ಯವಾದ ಅಂಶ ಇದು. ನೆನಪಿನಲ್ಲಿಡಿ ನೀವು ಎಷ್ಟು ಪುಸ್ತಕಗಳನ್ನು ಓದಿದರೂ, ಎಷ್ಟು ಸಂದೇಶಗಳನ್ನು ಕೇಳಿದರೂ ಮೊದಲಿಗೆ ದೇವರು, ಭಗವಂತ ಎಂದರೆ ಭಯ ದೂರವಾಗಬೇಕು.

ದೇವರು ಅಪಕಾರ ಮಾಡುವವನಲ್ಲ. ಎಲ್ಲಾ ಉಪಕಾರವನ್ನು ಮಾಡುವವನು. ಆತನ ಸಹಕಾರ ನಿನಗೆ ಸಿಗುತ್ತದೆ.

ಅದಕ್ಕಾಗಿಯೇ ವೇಮನ ನೀನೇ ಭಗವಂತ ಎಂದಿದ್ದಾರೆ.

**ಬ್ರಹ್ಮವೆಂದರೆ ಬೇರೆ ಹೊರದೇಶದಲ್ಲಿ ಇಲ್ಲ!**

**ಬ್ರಹ್ಮವೆಂದರೆ ತಾನೇ ಬಟ್ಟಬಯಲು ( ಬಹಿರಂಗ)!**

**ತನ್ನನ್ನು ತಾನು ತಿಳಿದಿರುವವನೇ ಬ್ರಹ್ಮ! ವಿಶ್ವದಾಭಿರಾಮ ಕೇಳು ವೇಮ**

ತಾತ್ಪರ್ಯ:– ಭಗವಂತನಂದರೆ ಬೇರೆ ಯಾವುದೇ ಕ್ಷೇತ್ರಗಳಲ್ಲಿ ಇಲ್ಲ, ಮನುಷ್ಯರು ಭಗವಂತ ಎಲ್ಲೋ ಇದ್ದಾನೆ ಎಂದು ಹುಡುಕುತ್ತಿದ್ದಾರೆ. ಆದರೆ ನಾನೇ ಭಗವಂತ ಎಂದು ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾರೆ. ವಾಸ್ತವವಾಗಿ ತಾನು ಯಾರು? ಎಂದು ತಾನು ತಿಳಿದುಕೊಂಡರೆ? ನಾನೇ ಭಗವಂತ ಎಂದು ತಿಳಿಯುತ್ತದೆ. ಎಂದು ವೇಮನ ಯೋಗೀಂದ್ರರು ಹೇಳುತ್ತಿದ್ದಾರೆ.

ಅಷ್ಟೇಅಲ್ಲ ಅವರು ನಿನ್ನನ್ನು ನೀನೇ ಆರಾಧಿಸಿಕೊಳ್ಳಬೇಕು ಎಂದು ಸಹ ಹೇಳಿದ್ದಾರೆ.

**ಪೂಜೆ ಮಾಡಿ ಮಾಡಿ ಪೂಜಾರಿ ತಾನಾದ:**

**ಪೂಜ್ಯ ವಸ್ತು ಎಂದರೆ ಭೂಮಿಯಲ್ಲಿ ತಾನೇ:**

**ಎಲ್ಲಿ ಪೂಜೆ ಮಾಡಿದರೂ ಎಲ್ಲಾ ದಿಕ್ಕುಗಳಲ್ಲಿಯೂ ಅವನೇ!**

**ಅವನೇ ನಾನು, ನಾನೇ ಅವನು ವೇಮ**

**ತಾತ್ಪರ್ಯ:–** ಪೂಜೆ ಮಾಡಿದರೆ ಪೂಜಾರಿಯಾಗುತ್ತೇವೆ. ಅದಕ್ಕಿಂತ ಹೆಚ್ಚಿನ ಪ್ರಯೋಜನ ಇರುವುದಿಲ್ಲ. ಭೂಮಿ ಮೇಲೆ ಪೂಜೆಗೆ ಅರ್ಹವಾದ ಏಕೈಕ ವಸ್ತು ಅವನೇ! ಎಂದು

ವೇಮನ ಯೋಗೀಂದ್ರರು ಹೇಳಿದ್ದಾರೆ. ಇದಲ್ಲದೇ ಎಲ್ಲಿ ಪೂಜೆ ಮಾಡುತ್ತೇವೆ? ಎಲ್ಲಾ ದಿಕ್ಕುಗಳಲ್ಲಿಯೂ ಭಗವಂತನೇ ಅಲ್ಲವೇ? ಅಂದರೆ ನಾನೇ ಅಲ್ಲವೇ? ಅಂದರೆ ನಾನೇ ಅವನು, ಅವನೇ ನಾನು ಎಂದು ತಿಳಿದುಕೋ! ಎಂದು ವೇಮನ ಹೇಳಿದ್ದಾರೆ.

ಆದ್ದರಿಂದ ಯಾರನ್ನು ಪೂಜಿಸುತ್ತೇವೆ? ನಮ್ಮನ್ನು ನಾವೇ ಪೂಜಿಸಿಕೊಳ್ಳಬೇಕು. ಅದೇ ನಿಜವಾದ ಭಕ್ತಿ.

ಇದೇ ವಿಷಯವನ್ನು ಉಪನಿಷತ್ತಿನಲ್ಲಿಯೂ ಉಲ್ಲೇಖಿಸಲಾಗಿದೆ.

"ಸ್ವ ಸ್ವರೂಪಾನು ಸಂಧಾನಂ ಭಕ್ತಿರೀತ್ಯ ಬಿಧೀಯತೇ" ಎಂದು ಹೇಳಲಾಗುತ್ತದೆ.

ನಿನ್ನನ್ನು ನೀನು ಆರಾಧಿಸಿಕೊಳ್ಳುವುದೇ ಧ್ಯಾನ. ಏಕೆಂದರೆ ನೀನೇ ಆತ್ಮ ಆತ್ಮವನ್ನು ಆರಾಧಿಸುವುದೇ ಧ್ಯಾನ.

ಈಗ ನಾವೆಲ್ಲರೂ ಅದೇ ಕೆಲಸವನ್ನೇ ಮಾಡುತ್ತಿದ್ದೇವೆ. ಈ ರೀತಿ ಆತ್ಮವನ್ನು ಆರಾಧಿಸುವವರು ಈ ಜನ್ಮದಲ್ಲಿಯೇ ಬಹಳಷ್ಟು ಅಭಿವೃದ್ಧಿಯಾಗುತ್ತಾರೆ, ಬಹಳಷ್ಟು ಶ್ರೇಷ್ಠ ವ್ಯಕ್ತಿಗಳಾಗುತ್ತಾರೆ.

ಇಂತಹ ಸಂದೇಶಗಳನ್ನು ಕೇಳುವುದರಿಂದ ಮಾತ್ರ ನಾವು ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು ಏನೂ ತಿಳಿಯದೆ ಕುಳಿತು ಧ್ಯಾನ ಮಾಡಿದರೆ, ಸಸ್ಯಹಾರ ರ್‍ಯಾಲಿಗಳಿಗೆ ಹೋದರೆ, ಕ್ಲಾಸ್‌ಗಳನ್ನು ಇಟ್ಟರೂ, ಏನು ಮಾಡಿದರೂ ನಿಮ್ಮ ಜ್ಞಾನ ಹೆಚ್ಚುವುದಿಲ್ಲ. ಆದ್ದರಿಂದ ಜ್ಞಾನ ಹೆಚ್ಚಾಗಬೇಕೆಂದರೆ ಮೇಡಂ ಬ್ಲೇವಟ್ಸ್ಕೀ ಹೇಳಿದಂತೆ ದೇವರು, ಭಗವಂತ ಎಂದರೆ ಭಯ ಹೋಗಬೇಕು ಅಂದರೆ ನೀನು ಯಾರು ಎಂದು ತಿಳಿದುಕೊಳ್ಳಬೇಕು.

*** ***

# ಮಾಣಿಕ್ಯೇಶ್ವರಿ ಮಾತೆಯ ಸಂದೇಶ

**"ನೀವು ಆಲೋಚಿಸುವ ವಿಷಯಗಳು, ಮಾತನಾಡುವ ಮಾತುಗಳು, ಮಾಡುವ ಕೆಲಸಗಳನ್ನು ಗಮನಿಸುತ್ತಿರಬೇಕು" ಎಂದು ಅವರು ಹೇಳಿದ್ದಾರೆ.**

ಅಂದರೆ ಅವರು ನಮ್ಮನ್ನು, ನಮ್ಮ ಗುಣಗಳನ್ನು ಪರಿಶೀಲಿಸಿಕೊಳ್ಳುವಂತೆ ಹೇಳಿದ್ದಾರೆ. ನಾವು ಮಾತನಾಡುತ್ತಿರುವುದು ಸರಿಯೇ? ಇಲ್ಲವೇ? ಮಾಡುತ್ತಿರುವ ಕೆಲಸಗಳು ಸರಿಯೇ? ಇಲ್ಲವೇ? ನಿಮ್ಮ ಆತ್ಮ ಸಾಕ್ಷಿಯನ್ನು ಒಮ್ಮೆ ಪರೀಕ್ಷಿಸಿಕೊಳ್ಳಿ. ಮಾಡಿದ್ದೇನೆಯೇ? ಇಲ್ಲವೇ? ಅಲ್ಲ. ಮಾಡಿರುವುದರ ಬಗ್ಗೆ ನಿನ್ನ ಆತ್ಮ ಸಾಕ್ಷಿಯನ್ನು

ಪರೀಕ್ಷಿಸಿಕೋ! ಹಾಗೆ ಪರೀಕ್ಷಿಸಿಕೊಳ್ಳದೇ ಹೋದರೆ ಎಂದಿಗೂ ಬೆಳೆಯಲು ಸಾಧ್ಯವಿಲ್ಲ. ವಾಸ್ತವವಾಗಿ ಇಷ್ಟೆಲ್ಲಾ ಜ್ಞಾನವನ್ನು ಏಕೆ ನೀಡುತ್ತಿದ್ದೇವೆ? ಎಲ್ಲರೂ ಜ್ಞಾನವಂತರಾಗಬೇಕೆಂದು. ಎಲ್ಲರೂ ಬೆಳೆಯಬೇಕೆಂದು. ಎಲ್ಲರೂ ದುಃಖದಿಂದ ಹೊರಬರಬೇಕೆಂದು. ನಿಮ್ಮಲ್ಲಿ ಮಾತ್ರವಲ್ಲದೆ ನಿಮ್ಮ ಸುತ್ತಮುತ್ತಲಿನವರಲ್ಲಿಯೂ ಬದಲಾವಣೆ ತರಬೇಕೆಂದು. ಹೀಗೆ ಹಲವಾರು ಕಾರಣಗಳಿವೆ ಈಗ ನೀವು ಮಾಡುತ್ತಿರುವ ಪ್ರಯತ್ನ ಎಂದರೆ ನೀವೆಲ್ಲರೂ ಸಹ ಬೆಳೆಯಲಿರುವ ಮಹಾನ್ ಗುರುಗಳು. ದಾರಿ ತಪ್ಪಿರುವ ಸಮಾಜವನ್ನು ಸರಿಯಾದ ಹಾದಿಯಲ್ಲಿ ಇರಿಸಲು ನಿರ್ಧರಿಸಿಕೊಂಡು ಬಂದಿರುವಂತಹ ಮಾಸ್ಟರ್ ಗಳು.

ನಿಮ್ಮ ಮೇಲೆ ಬಹಳ ಮಹತ್ತರವಾದ ಜವಾಬ್ದಾರಿ ಇದೆ, ನೀವು ಎಷ್ಟು ಜವಾಬ್ದಾರಿಯುತವಾಗಿರಬೇಕು, ಇದನ್ನೇ ಮಾಣಿಕ್ಯೇಶ್ವರಿ ಮಾತೆ ಹೇಳಿದ್ದಾರೆ. ನೀನು ಆಲೋಚಿಸುವ ವಿಷಯಗಳ ಬಗ್ಗೆ ಮಾತನಾಡುವ ವಿಷಯಗಳ ಬಗ್ಗೆ ಮಾಡುವ ಕೆಲಸಗಳ ಬಗ್ಗೆ ಅಂತರಂಗದಲ್ಲಿ ಎಂತಹ ಪ್ರಭಾವ ಬೀರುತ್ತಿವೆ ಎಂದು ಒಮ್ಮೆ ಗಮನಿಸಿಕೊಳ್ಳಿ ಎಂದು ಅವರು ಹೇಳುತ್ತಿದ್ದಾರೆ. ಸ್ವಾಭಾವಿಕವಾಗಿ ಪ್ರತಿಯೊಬ್ಬರೂ ವಿಭಿನ್ನ ಮನಸ್ಥಿತಿಗಳಲ್ಲಿ ಇರುತ್ತಾರೆ. ಅವರ ಬುದ್ಧಿಶಕ್ತಿ ಅವರ ಮನಸ್ಥಿತಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತದೆ.

ಅವರ ಬುದ್ಧಿಶಕ್ತಿಯ ಬೆಳವಣಿಗೆಯ ಆಧಾರದ ಮೇಲೆ ಅವರ ಕಾರ್ಯಗಳು, ಮಾತುಗಳು ಮತ್ತು ಆಲೋಚನೆಗಳು ಸರಿಯಾಗಿರಬಹುದು ಅಥವಾ ಇಲ್ಲದಿರಬಹುದು. ಆದರೆ ಒಳಗೆ ಮನಸ್ಸು ಮಾತ್ರವಲ್ಲ ಆತ್ಮವೂ ಇದೆ. ಆತ್ಮ ಎಂದರೆ ದೇವರು. ನೀವು ಮಾತನಾಡುವುದನ್ನು, ಮಾಡುವುದನ್ನು ನೀವು ಗಮನಿಸುವುದಿಲ್ಲ ಆದರೆ ಆತ್ಮವು ಗಮನಿಸುತ್ತಾ ಇರುತ್ತದೆ. ನೀನು ಮಾಡುವ ಕೆಲಸದಲ್ಲಿ ಏನಾದರೂ ವ್ಯತ್ಯಾಸವಿದ್ದರೆ ತಕ್ಷಣವೇ ಅದು ಪ್ರತಿಕ್ರಿಯಿಸುತ್ತದೆ.

ಮಾಣಿಕ್ಯೇಶ್ವರಿ ಮಾತೆಯ ಸಂದೇಶವೆಂದರೆ ಆ ಪ್ರತಿಕ್ರಿಯೆಯನ್ನು ಗಮನಿಸುವುದು. ಈ ಹಾದಿಯಲ್ಲಿ ನಿಜವಾಗಿಯೂ ಬೆಳೆಯಲು ಬಯಸುವವರು ನೀವು ಮಾಡುವ ಎಲ್ಲವನ್ನು ಗಮನಿಸಬೇಕು. ಆಗ ಅದನ್ನು ಸರಿಪಡಿಸಲು ಅವಕಾಶವಿದೆ. ಈ ಮಾರ್ಗಕ್ಕೆ ಬಂದ ಯಾರಿಗಾದರೂ ನಿಜವಾದ ಗುರು ಎಂದರೆ ಒಳಗಿನ ಆತ್ಮ. ಹೊರಗಿನ ಗುರುಗಳು ನಮಗೆ ಕೆಲವು ಮಾರ್ಗದರ್ಶನ ನೀಡುತ್ತಾರೆ. ಅವರು ಯಾವಾಗಲೂ ನಿಮ್ಮೊಂದಿಗೆ ಇರುವುದಿಲ್ಲ. ನೀವು ಯಾವಾಗಲೂ ಅವರೊಂದಿಗೆ ಇರುವುದಿಲ್ಲ.

ಆದರೆ ನಿರಂತರವಾಗಿ ನಿಮ್ಮೊಂದಿಗೆ ನಿಮ್ಮ ಜೊತೆಯಲ್ಲಿ ಇರುವುದು ನಿಜವಾದ ಸದ್ಗುರು ಆದಂತಹ ಅಂತರಂಗದಲ್ಲಿರುವಂತಹ ಆತ್ಮ. ನೀವು ಮಾಡುವ ಕೆಲಸಗಳಲ್ಲಿ, ಮಾತನಾಡುವ ಮಾತುಗಳಲ್ಲಿ, ಮಾಡುವ ಆಲೋಚನೆಗಳಲ್ಲಿ ಯಾವುದೇ ವ್ಯತ್ಯಾಸ ಬಂದರೂ ಆತ್ಮವು ಸರಿಪಡಿಸುವ ಪ್ರಯತ್ನ ಮಾಡುತ್ತದೆ. ಆತ್ಮ ಎಂದರೆ ಬೇರೆ ಯಾರು ಅಲ್ಲ ಸಾಕ್ಷಾತ್ ಭಗವಂತ. ಆತನಿಗೆ ತಿಳಿಯದೇ ಇರುವುದು ಯಾವುದೂ ಇಲ್ಲ, ಅವರಿಗಿಂತ ಮಿಗಿಲಾದ ಗುರು ಇಲ್ಲ.

ನೀನು ಮಾಡುವ ಕೆಲಸಗಳಲ್ಲಿ ಆತನ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದನ್ನು ಗಮನಿಸಲು ಹೇಳುತ್ತಿದ್ದಾರೆ ಮಾತೆ ಮಾಣಿಕ್ಯೇಶ್ವರಿ. ಆಧ್ಯಾತ್ಮಿಕದಲ್ಲಾಗಲೀ, ಪ್ರಾಪಂಚಿಕ ವ್ಯವಹಾರಗಳಲ್ಲಾಗಲೀ ಆತನನ್ನು ಗಮನಿಸಿ. ನಿಮ್ಮ ತಪ್ಪು ನಿಮಗೆ ಆತ ಹೇಳುತ್ತಾನೆ. ಸರಿಪಡಿಸಿಕೊಂಡರೆ ಶ್ರೇಷ್ಠ ವ್ಯಕ್ತಿಯಾಗಿ  ಬೆಳೆಯುವೆ. ಅಹಂಕಾರದಿಂದ ನಿರ್ಲಕ್ಷಿಸಿದರೆ ನೀನು ನಷ್ಟ ಹೊಂದುವೆ.

ನೀವು ನಿಮ್ಮ ತಪ್ಪನ್ನು ಸುಲಭವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ನಾನು ಮಾಡುತ್ತಿರುವುದು ಸರಿ ಎಂದು ಸಮರ್ಥಿಸಿಕೊಳ್ಳಲು ಬಯಸುತ್ತೀರಿ. ಈಗ ನೋಡಿದೆ ಬಾಲಕೃಷ್ಣನಾಗಲಿ, ರಾಮಲಕ್ಷ್ಮಿಯಾಗಲೀ ತಕ್ಷಣ  ಸರಿಪಡಿಸಿಕೊಳ್ಳುತ್ತೇವೆ ಎಂದರು. ಅದಕ್ಕೆ ಯಾವುದೋ ಕಾರಣ ಹೇಳುವುದಲ್ಲ. ಅದನ್ನು ಸಮರ್ಥಿಸಿಕೊಳ್ಳಬೇಕು ಎಂದು ನೋಡುವವನು ಪರಮ ಮೂರ್ಖ. ಆದ್ದರಿಂದ  ಮಾಣಿಕ್ಯೇಶ್ವರಿ ಮಾತೆಯ ಸಂದೇಶ ಸಾಮಾನ್ಯವಾದದ್ದಲ್ಲ.

ಈ ಸ್ಥಿತಿ ನಿಮಗೆ ಹೇಗೆ ಬರುತ್ತದೆ ಎಂದರೆ, ನಿಮ್ಮ ಸಾಧನೆಯನ್ನು ತೀವ್ರಗೊಳಿಸಿದಾಗ. ಏಕೆಂದರೆ ಪ್ರಸ್ತುತ ನೀವು ಈಗ ಮಾಡುತ್ತಿರುವ ಸಾಧನೆಯು ನಿಮ್ಮ ದೈನಂದಿನ ವ್ಯವಹಾರಗಳನ್ನು ತಟಸ್ಥ ಗೊಳಿಸಲು ಸಾಕಾಗುತ್ತದೆ. ಆದರೆ ನೀವು ನಿಮ್ಮ ಸಾಧನೆಯನ್ನು ಮತ್ತಷ್ಟು ತೀವ್ರಗೊಳಿಸಬೇಕಾಗಿದೆ. ಆಗ ಮಾತ್ರ ನಿಮ್ಮಲ್ಲಿ ಅನೇಕ ಬದಲಾವಣೆಗಳು ಬರುತ್ತವೆ. ಅದಕ್ಕಾಗಿಯೇ ನಾನು ಭೀಮವರಂ ವೇದಿಕೆಯನ್ನು ಚೆನ್ನಾಗಿ ಬಳಸಿಕೊಳ್ಳುವಂತೆ ಹೇಳುತ್ತಿದ್ದೇನೆ. ಕೆಲಸ ಮಾಡುತ್ತಿದ್ದಾರೆ, ಅನೇಕ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದಾರೆ. ರಾತ್ರಿಯು ಸಹ ಸಾಧ್ಯವಾದಷ್ಟು ಗಂಟೆಗಳ ಕಾಲ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದಾರೆ. ಪಕ್ಕದಲ್ಲಿರುವವರೊಂದಿಗೆ ಹೋಲಿಕೆ ಬೇಡ.

ಸಾಧನೆಯನ್ನು ತೀವ್ರಗೊಳಿಸಲು ಬಯಸುವವರು, ಬುದ್ಧಿಶಕ್ತಿಯನ್ನು ಚೆನ್ನಾಗಿ ವಿಕಸನ ಮಾಡಿಕೊಳ್ಳಲು ಬಯಸುವವರು, ಅಂತರಂಗವನ್ನು ಗಮನಿಸುವ ಸ್ಥಿತಿಗೆ ತಲುಪಲು ಬಯಸುವವರು ಸ್ವಲ್ಪ ಕಷ್ಟ ಪಡಬೇಕಾಗುತ್ತದೆ.

ಪೂರ್ವಜನ್ಮದ ಪುಣ್ಯ ಇಲ್ಲದಿದ್ದರೆ ಈ ಮಾರ್ಗಕ್ಕೆ ಬರಲು ಸಾಧ್ಯವಿಲ್ಲ. ನೀವು ಮಾಡುವ ಎಲ್ಲವೂ ಸಹ ಆಲೋಚನೆಗಳಾಗಿರಬಹುದು, ಮಾತುಗಳಾಗಿರಬಹುದು, ಕೆಲಸಗಳಾಗಿರಬಹುದು ನಿಮ್ಮ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇದನ್ನೇ ಮಾಣಿಕ್ಯೇಶ್ವರಿ ಮಾತೆ ಬೋಧಿಸಿದ್ದಾರೆ.

ಅವರು ಮೇಲ್ನೋಟಕ್ಕೆ ಸಾಮಾನ್ಯರಂತೆಯೇ ಕಾಣಿಸುತ್ತಾರೆ. ಅಪಾರವಾದ ಜ್ಞಾನ ಸಂಪತ್ತನ್ನು ಹೊಂದಿದ್ದಾರೆ. ಬುದ್ಧಿಯನ್ನು ಬುದ್ಧನಂತೆ ತಯಾರು ಮಾಡಿಕೊಂಡಿದ್ದಾರೆ. ಅವರು ಮಾತನಾಡುವ ಪ್ರತಿಯೊಂದು ಮಾತು ಅಮೂಲ್ಯ. ಸುಮ್ಮನೆ ಒಮ್ಮೆ ಕೇಳಿ ಬಿಟ್ಟುಬಿಡುವ ವಿಷಯವಲ್ಲ.

*** ***

# ವೇದಗಳು

**" ಪರೋಪಕಾರಾರ್ಥಂ ಇಧಂ ಶರೀರಂ"**

ಸಾಮಾನ್ಯವಾಗಿ ಬಾಹ್ಯ ರೂಪದಲ್ಲಿ ಕಾಣಿಸುವ ಅರ್ಥವೇನೆಂದರೆ ಈ ಶರೀರವು ಪರರಿಗೆ ಅಂದರೆ ಇತರರಿಗೆ ಪ್ರಯೋಜನವಾಗಲು ಮಾತ್ರ ಅಸ್ತಿತ್ವದಲ್ಲಿದೆ ಎಂಬಂತೆ ತೋರುತ್ತದೆ.

ಆದರೆ ಆ ಯೋಗಿಗಳು ಮತ್ತು ಯೋಗೀಶ್ವರರು ಎಂದಿಗೂ ದೇಹದ ಬಗ್ಗೆ ಪ್ರಸ್ತಾಪಿಸುವುದಿಲ್ಲ. ಒಂದು ಸಲ ನೀವು ಯೋಚಿಸಿ ಅವರು ಏನು ಹೇಳಿದರೂ ಸದಾ ಆತ್ಮವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಹೇಳುತ್ತಾರೆ ಆ ಯೋಗೀಶ್ವರರು ಹೇಳಿರುವ ವಿಷಯಗಳು ನಿಮಗೆ ಅರ್ಥವಾಗಬೇಕಾದರೆ ಹೇಳಿರುವುದನ್ನು ಆತ್ಮದೃಷ್ಟಿಯಲ್ಲಿಯೇ ನೋಡಬೇಕು.

ನಾನು ಪತ್ರೀಜಿ ಹತ್ತಿರ ಚೆನ್ನಾಗಿ ಗಮನಿಸಿದ್ದೇನೆ. ಅವರು ಏನು ಹೇಳಿದರೂ ಸಹ ಆತ್ಮದ ದೃಷ್ಟಿಕೋನದಲ್ಲಿಯೇ ಹೇಳುತ್ತಾರೆ. ಆತ್ಮಕ್ಕೆ ಸಂಬಂಧಿಸಿದ ಜ್ಞಾನವನ್ನು ಮಾತ್ರ ಸದಾ ನೀಡುತ್ತಾರೆ. ಆದರೆ ನಾವು ಭೌತಿಕವಾಗಿ, ದೈಹಿಕ ಪರಿಭಾಷೆಯಲ್ಲಿ ಅರ್ಥ ಮಾಡಿಕೊಳ್ಳುತ್ತೇವೆ. ನಾನು ಅಂದರೆ ದೇಹ ಎಂಬ ಭಾವನೆಯಲ್ಲಿಯೇ ಇರುತ್ತೇವೆ. ನಾನು ಎಂದರೆ ಆತ್ಮ ಎಂದು ಅರ್ಥವಾದರೆ ಆತ್ಮದ ಪರಿಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತೇವೆ. ಆಗ ನಿಮಗೆ ನಿಜವಾದ ಸತ್ಯ ತಿಳಿಯುತ್ತದೆ.

ಭಗವದ್ಗೀತೆಗೂ ಸಹ ಬಾಹ್ಯ ಅರ್ಥ ಬೇರೆ ಅಂತರಾರ್ಥ ಬೇರೆ. ಬಾಹ್ಯ ಅರ್ಥ ಎಂದರೆ ಭೌತಿಕವಾದದ್ದು. ನಾನು ದೇಹ ಎಂಬ ಭಾವನೆಯಲ್ಲಿ ಅರ್ಥ ಮಾಡಿಕೊಳ್ಳುವಂತಹದ್ದು. ಅಂತರಾರ್ಥ ಎಂದರೆ ನಾನು ಆತ್ಮ ಎಂಬ ಭಾವನೆಯಲ್ಲಿ ಅರ್ಥ ಮಾಡಿಕೊಳ್ಳುವಂತಹದ್ದು. ಸಾಮಾನ್ಯವಾಗಿ ಅನೇಕ ಜನರು ಭಗವದ್ಗೀತೆಯ ಶ್ಲೋಕಗಳನ್ನು ವಿವರಿಸಿದ್ದಾರೆ, ತಾತ್ಪರ್ಯಗಳನ್ನು ಬರೆದಿದ್ದಾರೆ.

ಆದರೆ ಪತ್ರೀಜಿ ಬರೆದ ಶ್ರೀ ಕೃಷ್ಣನ ಸಂದೇಶದ 80 ಶ್ಲೋಕಗಳನ್ನು ನೀವು ಅರ್ಥ ಮಾಡಿಕೊಂಡರೆ, ನೀವು ಇಡೀ ಭಗವದ್ಗೀತೆಯನ್ನು ಅರ್ಥ ಮಾಡಿಕೊಂಡಂತೆ. ನೀವು ಬಾಹ್ಯ ದೃಷ್ಟಿಕೋನದಿಂದ ಏನನ್ನು ಓದಿದರೂ ಅದು ನಿಮಗೆ ಸರಿಯಾಗಿ ಅರ್ಥವಾಗುವುದಿಲ್ಲ. ನೀವು ಎಲ್ಲವನ್ನೂ ಆತ್ಮದ ದೃಷ್ಟಿಯಿಂದ ಸತ್ಯದ ದೃಷ್ಟಿಯಿಂದ ನೋಡಬೇಕು.

ಪತ್ರೀಜಿ ಎರಡು ವಿಷಯಗಳನ್ನು ಹೇಳಿದ್ದಾರೆ. ಅವರು ಆ ಎರಡನ್ನೇ ಎಲ್ಲರಿಗೂ ಹೇಳಿದ್ದಾರೆ. ನಾನು ಆ ಎರಡನ್ನು ಅರ್ಥ ಮಾಡಿಕೊಂಡೆ ಮತ್ತು ಅವುಗಳನ್ನು ಹಿಡಿದುಕೊಂಡೆ. ಒಂದು ಸರಿಯಾದ ಧ್ಯಾನ, ಎರಡು ಸತ್ಯಜ್ಞಾನ. ನೆನಪಿಡಿ ಯಾವುದೋ ಜ್ಞಾನ ಅಲ್ಲ. ಹಲವು ರೀತಿಯ ಜ್ಞಾನಗಳಿವೆ  ಆದರೆ ಸತ್ಯ ಜ್ಞಾನವನ್ನೇ ಅಂದರೆ ಆತ್ಮಜ್ಞಾನ ವನ್ನೇ ಪತ್ರೀಜಿ ಬೋಧಿಸಿದ್ದು.

ಈ ಧ್ಯಾನಕ್ಕೆ ಬರುವ ಮೊದಲು ನನಗೆ ಭಗವದ್ಗೀತೆ ಸರಿಯಾಗಿ ಅರ್ಥವಾಗಿರಲಿಲ್ಲ. ನಾನು ಯಾವಾಗ ಪತ್ರೀಜಿಯವರ ಪುಸ್ತಕವನ್ನು ಓದಿದೆನೋ ಆಗ ಪತ್ರೀಜಿ ಹೇಳುವುದಕ್ಕೂ, ಇತರರು ಹೇಳುವುದಕ್ಕೂ ಬಹಳ ವ್ಯತ್ಯಾಸವನ್ನು ಕಂಡೆ.

ಸಂಸ್ಕೃತವನ್ನು ತಿಳಿದಿರುವ ವಿದ್ವಾಂಸರು, ಬಾಹ್ಯ ಅರ್ಥದೊಂದಿಗೆ ಬರೆಯುತ್ತಾರೆ, ಆದರೆ ಸತ್ಯವನ್ನು ತಿಳಿದುಕೊಂಡು, ಸತ್ಯವನ್ನು ಅನುಭವಿಸಿದ ಯೋಗಿಗಳು ಗೀತೆಯನ್ನು ಆಂತರಿಕ ದೃಷ್ಟಿಯೊಂದಿಗೆ ವಿವರಿಸುತ್ತಾರೆ. ಅವುಗಳನ್ನೇ ನಾನು  ಗೀತಾ ಸಂದೇಶ ಎಂಬ ಇನ್ನೊಂದು ಪುಸ್ತಕವನ್ನು ಬರೆದಿದ್ದೇನೆ. ಜ್ಞಾನ ಹೆಚ್ಚಾಗಬೇಕೆಂದರೆ ನೀವು ಎಷ್ಟು ಚೆನ್ನಾಗಿ ಅಧ್ಯಯನ ಮಾಡುವಿರೋ! ನಿಮ್ಮ ಜ್ಞಾನವು ಅಷ್ಟು ಹೆಚ್ಚಾಗುತ್ತದೆ.

ಸುಮ್ಮನೆ ಏನೋ ಹೇಳುವುದು, ಸುಮ್ಮನೆ ಏನೋ ಮಾತನಾಡುವುದಲ್ಲ. ಅದಕ್ಕಾಗಿಯೇ ಭಗವಾನ್ ವ್ಯಾಸರು ತುಂಬಾ ಶ್ರೇಷ್ಠರು. ಅವರು ವೇದಗಳಲ್ಲಿ ಹೇಳಿದಂತಹ ಒಂದು ವಾಕ್ಯ ಯಾವುದೆಂದರೆ

**"ಪರೋಪಕಾರಾರ್ಥಂ ಇದಂ ಶರೀರಂ"**

ಅಂದರೆ ಈ ಶರೀರ ಎಂಬುದು ಇತರರಿಗೆ ಉಪಕಾರ ಮಾಡುವುದಕ್ಕಾಗಿಯೇ ಎಂಬುದು ಅದರ ಅರ್ಥದಂತೆ ಕಾಣಿಸುತ್ತದೆ ಆದರೆ ಅಂತರಾರ್ಥ ಏನೆಂದರೆ?

**"ಆತ್ಮಕ್ಕೆ ಪರಲೋಕದಲ್ಲಿ ಆಗುವ ಲಾಭಕ್ಕಾಗಿಯೇ ಅಂದರೆ ಉಪಕಾರಕ್ಕಾಗಿಯೇ ಈ ಶರೀರ"** ಎಂದು ತಿಳಿದುಕೊಳ್ಳಬೇಕು.

ಈ ಶರೀರ ಏತಕ್ಕಾಗಿ? ಅಂದರೆ ಈ ದೇಹವು ಆತ್ಮದ ಪ್ರಯೋಜನಕ್ಕಾಗಿ, ಆತ್ಮದ ಉನ್ನತಿಗಾಗಿ, ಆತ್ಮಜ್ಞಾನದ ಸಂಪಾದನೆಗಾಗಿ, ಆತ್ಮದ ಬೆಳವಣಿಗೆಗೆ, ಆತ್ಮಕ್ಕೆ ಉನ್ನತ ಲೋಕದ ಪ್ರಾಪ್ತಿ ಉಂಟು ಮಾಡಲು, ಆತ್ಮವನ್ನು ಪೂರ್ಣಾತ್ಮವನ್ನಾಗಿ ಮಾಡಲು, ಆತ್ಮವನ್ನು ಕೋ ಕ್ರಿಯೇಟರ್ ಆಗಿ ಮಾಡುವುದಕ್ಕಾಗಿಯೇ ಈ ಶರೀರ.

ನೀನು ದೇಹವೆಂಬ ಭಾವನೆಯಲ್ಲಿದ್ದರೆ ಈ ಶರೀರ ಮಾಂಸ ಪಿಂಡವಿದ್ದಂತೆ. ನಾನು ಶರೀರವಲ್ಲ ಆತ್ಮ ಎಂದು ಅರ್ಥವಾದರೆ ಈ ಮಾಂಸ ಪಿಂಡವೇ ಮಂತ್ರಪಿಂಡವಾದಂತೆ ಎಂದು ಸದಾನಂದ ಯೋಗಿ ಹೇಳಿದ್ದಾರೆ.

ಈ ಮಾಂಸ ಪಿಂಡವನ್ನು ಮಂತ್ರ ಪಿಂಡವನ್ನಾಗಿ ಮಾಡಬೇಕು ಎಂದಿದ್ದಾರೆ. ಆದ್ದರಿಂದ ಈ ಆತ್ಮ ಎಲ್ಲಿಂದ ಬಂದಿದೆ? ಪರಲೋಕದಿಂದ ಬಂದಿದೆ. ಭೂಮಿಗೆ ಬರುವ ಮೊದಲು ಅಂದರೆ ತಾಯಿ ಗರ್ಭವನ್ನು ಪ್ರವೇಶಿಸುವ ಮೊದಲು ಪರಲೋಕದಿಂದ ಬಂದಿದೆ.

ಪರಲೋಕದಿಂದ ಬರುವ ಮೊದಲು ಒಂದು ಯೋಜನೆಯನ್ನು ಹಾಕಿಕೊಳ್ಳುತ್ತದೆ. ಅಲ್ಲಿರುವುದು ಆತ್ಮ. ಈಗ ಇಲ್ಲಿ ಶರೀರ, ಮನಸ್ಸು ಇವೆ ಆದ್ದರಿಂದ, ಶರೀರವೇ ನಾನು ಎಂದು ಭಾವಿಸುತ್ತೇವೆ.

ಆದರೆ ಆತ್ಮವು ಆ ಪರಲೋಕದಲ್ಲಿ ಇರುವುದರಿಂದ ನಾವು ಏನೇ ಮಾಡಿದರೂ ಆತ್ಮದ ಪ್ರಯೋಜನಕ್ಕಾಗಿಯೇ ಮಾಡುತ್ತೇವೆ. ಇಲ್ಲಿ ದೇಹ ಇರುವ ಪರಿಸ್ಥಿತಿ ಮತ್ತು ಅಲ್ಲಿ ಆತ್ಮ ಇರುವ ಪರಿಸ್ಥಿತಿ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಇಲ್ಲಿದ್ದರೆ ತುಂಬಾ ದೊಡ್ಡ ಮನೆಯಲ್ಲಿ ಇರಬೇಕು ಎಂದು ಬಯಸುತ್ತಾರೆ.

ಇಲ್ಲಿ ಅನೇಕ ಮನೆಗಳಿರುವಂತೆ, ಅಲ್ಲಿಯೂ ಅನೇಕ ಲೋಕಗಳಿವೆ. ಇಲ್ಲಿ ಒಂದು ದೊಡ್ಡ ಮನೆಗೆ ಹೋಗಲು ಬಯಸುವಂತೆಯೇ, ಅಲ್ಲಿಯೂ ಒಂದು ಉನ್ನತ ಲೋಕಕ್ಕೆ ಹೋಗಲು ಬಯಸುತ್ತಾರೆ. ಇಲ್ಲಿನ ದೇಹಕ್ಕೆ ಪ್ರಯೋಜನವನ್ನು ಉಂಟು ಮಾಡಿದರೆ, ದೊಡ್ಡ ಮನೆಗೆ ಹೋಗುತ್ತೇವೆ. ಹಣವು ದೇಹಕ್ಕೆ ಪ್ರಯೋಜನವನ್ನು ನೀಡುತ್ತದೆ. ನಾವು

ಹೆಚ್ಚು ಹಣ ಗಳಿಸಿದರೆ ತುಂಬಾ ದೊಡ್ಡ ಮನೆಗೆ ಹೋಗುತ್ತೇವೆ ಮತ್ತು ಸಂತೋಷವಾಗಿರುತ್ತೇವೆ.

ಆದರೆ ಪರದಲ್ಲಿರುವ ಉನ್ನತ ಲೋಕಕ್ಕೆ ಹೋಗಲು ಆತ್ಮಕ್ಕೆ ಪ್ರಯೋಜನಕಾರಿಯಾದ ಜ್ಞಾನದ ಅಗತ್ಯವಿದೆ. ಒಬ್ಬ ವ್ಯಕ್ತಿಯು ಹೆಚ್ಚು ಜ್ಞಾನವನ್ನು ಪಡೆದಷ್ಟು ಅವನು ತಲುಪುವ ಲೋಕವು ಉನ್ನತವಾಗಿರುತ್ತದೆ ಒಂದು ಸಣ್ಣ ಮನೆಯೊಳಗಿನ ವ್ಯಕ್ತಿಯು ಹೇಗೆ ಭಾವಿಸುವನೋ ಬಹಳ ಕೆಳಗಿನ ಲೋಕಗಳಲ್ಲಿರುವವನು ಅದೇ ರೀತಿ ಭಾವಿಸುತ್ತಾನೆ. ನಾನು ಸಹ ಮೇಲಿನ ಲೋಕಗಳಿಗೆ ಹೋಗಬೇಕು, ಉನ್ನತ ಲೋಕಗಳಿಗೆ ಹೋಗಬೇಕು, ನಾನು ಸಹ ಆ ಲೋಕಗಳಲ್ಲಿರುವ ಮಹಾನ್ ವ್ಯಕ್ತಿಗಳಂತೆ ಆಗಬೇಕು, ಇಂತಹ ಆಲೋಚನೆಯೇ ಅಲ್ಲಿರುತ್ತದೆ.

ಆ ಲೋಕಗಳಿಗೆ ಹೋಗಲು ನಾನು ಏನು ಮಾಡಬೇಕು? ಎಂದು ಅಲ್ಲಿ ಕೌನ್ಸಿಲಿಂಗ್ ಮಾಡುವ ಮಾಸ್ಟರ್ಸ್ ಅನ್ನು ಕೇಳುತ್ತಾರೆ. ಆ ಕೌನ್ಸಿಲಿಂಗ್ ಮಾಡುವ ಮಾಸ್ಟರ್ಸ್ ಯಾರು? ಊರ್ದ್ವಲೋಕಗಳಲ್ಲಿರುವ ಅಂದರೆ ಜನಾಲೋಕಕ್ಕಿಂತ ಮೇಲೆ ಇರುವ ಲೋಕಗಳಲ್ಲಿ ಅಂದರೆ ಮಹಾಲೋಕ, ತಪೋಲೋಕ, ಸತ್ಯಲೋಕದಲ್ಲಿರುವ ಮಾಸ್ಟರ್ಸ್. ಅವರು ಈ ಕೆಳಗಿನ ಲೋಕಗಳು ಅಂದರೆ ಭೂವರ್ಲೋಕ, ಸುವರ್ಲೋಕದಿಂದ ಬಂದಂತಹವರಿಗೆ ಜನಾಲೋಕದಲ್ಲಿ ಕೌನ್ಸಿಲಿಂಗ್ಸ್ ನೀಡುತ್ತಾರೆ.

ಆಗ ಅವರು ಹೇಳುತ್ತಾರೆ, ಯಾವಾಗಲೂ ನೀನು ಆ ಕೆಳಗಿನ ಲೋಕಗಳಲ್ಲಿಯೇ ಇರುವೆಯಾ ಮಗು, ಇನ್ನು ಅನೇಕ ಮಹಾನ್ ಲೋಕಗಳಿಗವೆ, ನೀನು ಅಲ್ಲಿಗೆ ತಲುಪಬೇಕು. ಅಲ್ಲಿ ಮಹಾನ್ ವ್ಯಕ್ತಿಗಳ ಪರಿಚಯವಾಗುತ್ತದೆ, ಅವರಿಂದ ಬಹಳಷ್ಟು ತಿಳಿದುಕೊಳ್ಳುವೆ, ಬಹಳಷ್ಟು ಕಲಿಯುವೆ. ಈಗಿನ ಜೀವನ ಶ್ರೇಷ್ಠವೆಂದು ಭಾವಿಸುತ್ತಿರುವೆ ಆದರೆ ಇದಲ್ಲ, ಇನ್ನೂ ಉನ್ನತವಾದ ಜೀವನವಿದೆ ಎಂದು ಹೇಳುತ್ತಾರೆ.

ನೋಡಿ ನೀವು ಯಾವುದೋ ಒಂದು ಮನೆಯಲ್ಲಿ, ಇಲ್ಲದಿದ್ದರೆ ಒಂದು ಅಪಾರ್ಟ್ಮೆಂಟ್ನಲ್ಲಿ ಇದ್ದೀರಾ. ನೀವು ಅದನ್ನೇ ಶ್ರೇಷ್ಠ ಎಂದು ಭಾವಿಸುತ್ತೀರಾ. ಹಾಗಾದರೆ ಚಿರಂಜೀವಿ ಚಿಕ್ಕ ಅಪಾರ್ಟ್ಮೆಂಟ್ನಲ್ಲಿ ಇರಬಹುದಲ್ಲವೇ ಆದರೆ ಅಷ್ಟು ದೊಡ್ಡ ಮನೆ ಏಕೆ ಕಟ್ಟಿಸಿಕೊಂಡಿದ್ದಾರೆ? ಆ ಮನೆಯಲ್ಲಿ ವಾಸಿಸುವುದು ಚಿಕ್ಕ ಅಪಾರ್ಟ್ಮೆಂಟ್ನಲ್ಲಿ ವಾಸಿಸುವುದಕ್ಕಿಂತ ಭಿನ್ನವಾಗಿದೆ.

ಭೂಮಿಯ ಮೇಲಿರುವುದು ದೇಹವೇ ಆಗಿರುವುದರಿಂದ, ದೇಹಕ್ಕೆ ಬೇಕಾದದ್ದು ಸುಖವೇ ಆಗಿರುವುದರಿಂದ, ಎಷ್ಟು ದೊಡ್ಡ ಮನೆಯಲ್ಲಿದ್ದರೆ ಅಷ್ಟು

ಆರಾಮದಾಯಕವಾಗಿರಬಹುದು ಎಂದು ಭಾವಿಸುತ್ತಾನೆ. ಪೋಷಕರೇ ಆಗಲೀ, ಬೇರೆ ಯಾರೇ ಆಗಲೀ, ನೀನು ಇಲ್ಲಿ ಸಂಪಾದಿಸಲು ಆಗದಿದ್ದರೆ ವಿದೇಶಗಳಿಗೆ ಹೋಗು, ಅಮೆರಿಕಕ್ಕೆ ಹೋಗು, ಆಸ್ಟ್ರೇಲಿಯಾಕ್ಕೆ ಹೋಗು, ಅಲ್ಲಿ ಅವಕಾಶಗಳಿರುತ್ತವೆ ಬಹಳಷ್ಟು ಸಂಪಾದಿಸಬಹುದು. ಆ ಹಣದಿಂದ ಇಲ್ಲಿ ಒಳ್ಳೆಯ ಮನೆ ಕಟ್ಟಿಕೊಂಡು, ಆರಾಮವಾಗಿ ಬದುಕಬಹುದು ಎಂದು  ಸಲಹೆ ನೀಡುತ್ತಾರೆ.

ಅದೇ ರೀತಿ ಆ ಲೋಕದಲ್ಲಿರುವಾಗ ಅಲ್ಲಿ ಊರ್ಧ್ವಲೋಕಗಳಲ್ಲಿ ಇರುವಂತಹ ಮಾಸ್ಟರ್ಸ್, ಜನಾ ಲೋಕದ ಕೆಳಗೆ ಇರುವಂತಹ ಈ ಭುವರ್ಲೋಕ, ಸುವರ್ಲೋಕದಲ್ಲಿ ಇರುವವರಿಗೆ ಕೌನ್ಸಿಲಿಂಗ್ ನೀಡುತ್ತಾರೆ. ಸ್ವರ್ಗಲೋಕಕ್ಕೆ ಹೋಗುವುದು ದೊಡ್ಡ ವಿಶೇಷವಾದದ್ದೇನು ಅಲ್ಲ. ನೀನು ಜ್ಞಾನವನ್ನು ಸಂಪಾದಿಸು. ನೀನು ಎಷ್ಟು ಹೆಚ್ಚು ಜ್ಞಾನ ಸಂಪಾದಿಸಿದರೆ ಅಷ್ಟು ಉನ್ನತ ಲೋಕಗಳಿಗೆ ಸೇರಿಕೊಳ್ಳುವೆ ಎಂದು ಹೇಳುತ್ತಾರೆ. ಹಾಗಾದರೆ ನಾನು ಹೇಗೆ ಹೋಗಬಹುದು? ಎಂದು ಕೇಳುತ್ತಾರೆ. ಆಗ ಅವರು ನೀನು ಆ ಊರ್ಧ್ವಲೋಕಗಳಿಗೆ ಹೋಗಬೇಕು ಎಂದರೆ ನೀನು ಭೂಮಿಗೆ ಹೋಗಿ ಒಂದು ದೇಹವನ್ನು ತೆಗೆದುಕೊಳ್ಳಬೇಕು  ಆ ದೇಹದೊಂದಿಗೆ 'ಶ್ವಾಸದ ಮೇಲೆ ಗಮನ' ಧ್ಯಾನ ಮಾಡಿ ಜ್ಞಾನವನ್ನು ಸಂಪಾದಿಸಬೇಕು ಎಂದು ಹೇಳುತ್ತಾರೆ.

ಆ ಜ್ಞಾನವನ್ನು ಸಂಪಾದಿಸಿದಾಗ ನಿನಗೆ ಆ ಉನ್ನತ ಲೋಕಗಳನ್ನು ತಲುಪಲು ಅವಕಾಶ ಸಿಗುತ್ತದೆ ಎಂದು ಹೇಳುತ್ತಾರೆ ನೀವು ಒಂದನ್ನು ನೆನಪಿಡಿ ಯಾರಾದರೂ ಸತ್ತು ಹೋದಾಗ ಅವರನ್ನು ಕರೆದುಕೊಂಡು ಹೋಗಲು ಇಬ್ಬರು ಸಹಾಯಕರು ಬರುತ್ತಾರೆ.

ಯಾರಾದರೆ ಪಾಪಗಳನ್ನು ಪುಣ್ಯಗಳನ್ನು ಮಾಡುತ್ತಿರುತ್ತಾರೋ ಅವರನ್ನು ಕರೆದುಕೊಂಡು ಹೋಗಲು ಭುವರ್ಲೋಕ, ಸುವರ್ಲೋಕದಲ್ಲಿರುವ ಸಹಾಯಕರು ಬರುತ್ತಾರೆ. ಏಕೆಂದರೆ ಅವರು ಅದಕ್ಕಿಂತಲೂ ಮೇಲಿನ ಲೋಕಗಳಿಗೆ ಹೋಗಲು ಸಾಧ್ಯವಿಲ್ಲ. ಅವರು ಅಲ್ಲಿಯವರೆಗೆ ಮಾತ್ರ ಹೋಗಬಲ್ಲರು. ಇವರನ್ನು ಕರೆದುಕೊಂಡು ಹೋಗಬೇಕಾದದ್ದು ಅಲ್ಲಿಗೇ ಆಗಿರುವುದರಿಂದ ಅಲ್ಲಿಂದಲೇ ಕಳುಹಿಸಲ್ಪಡುತ್ತಾರೆ. ಯಾರಾದರೇ ಹೆಚ್ಚಿನ ಜ್ಞಾನವನ್ನು ಪಡೆಯುತ್ತಾರೋ ಅವರು ಉನ್ನತ ಲೋಕಗಳಿಗೆ ಅಂದರೆ ಮಹಾಲೋಕಕ್ಕೆ, ತಪೋಲೋಕಕ್ಕೆ ಹೋಗುವ ಅರ್ಹತೆಯನ್ನು ಹೊಂದುತ್ತಾರೆ. ಹೆಚ್ಚು ಜ್ಞಾನ ಪಡೆದಷ್ಟು ಉನ್ನತ ಸ್ಥಿತಿ ಸಂಪಾದಿಸಿಕೊಳ್ಳುತ್ತಾರೆ.

ಇವರನ್ನು ಈ ಕೆಳಲೋಕದಲ್ಲಿರುವ ಮಾಸ್ಟರ್ಸ್ ಕರೆದುಕೊಂಡು ಹೋಗಲು ಸಾಧ್ಯವಿಲ್ಲ.  ಆದ್ದರಿಂದ ಉನ್ನತ ಲೋಕದ ಮಾಸ್ಟರ್ಸೇ ಬರುತ್ತಾರೆ. ಅವರು ಇವರ ಅರ್ಹತೆಯನ್ನು ಆಧರಿಸಿ ಯಾವ ಲೋಕಕ್ಕೆ ಕರೆದುಕೊಂಡು ಹೋಗಬೇಕೋ ಅಲ್ಲಿಗೆ

ಕರೆದುಕೊಂಡು ಹೋಗುತ್ತಾರೆ. ನಂತರ ಅಲ್ಲಿರುವ ಸಾಂಗತ್ಯದ ಮೂಲಕ ಇನ್ನಷ್ಟು ಬೆಳೆಯಲು ಪ್ರಯತ್ನಿಸುತ್ತಾರೆ.

ಇಲ್ಲಿ ವಿಚಿತ್ರವೆಂದರೆ ಕೆಳಗಿನ ಲೋಕಗಳಲ್ಲಿರುವವರಿಗೆ ಅವರವರ ಕರ್ಮದ ಆಧಾರದ ಮೇಲೆ ಶರೀರವನ್ನು ನೀಡಲಾಗುತ್ತದೆ. ಆದರೆ ಈ ಉನ್ನತ ಲೋಕಗಳನ್ನು ತಲುಪಿದವರು, ಹೆಚ್ಚು ಜ್ಞಾನವನ್ನು ಸಂಪಾದಿಸಿಕೊಂಡವರಿಗೆ ಯಾವ ರೀತಿಯ ಜನ್ಮವನ್ನು ಪಡೆಯಬೇಕು, ಯಾವ ದೇಶದಲ್ಲಿ? ಯಾವ ಧರ್ಮದಲ್ಲಿ? ಯಾವ ಜಾತಿಯಲ್ಲಿ? ಮಹಿಳೆಯಾಗಿ? ಪುರುಷನಾಗಿ? ಶ್ರೀಮಂತನಾಗಿ? ಎಂಬ ಆಯ್ಕೆ ಇರುತ್ತದೆ. ನೋಡಿ ಇಂಜಿನಿಯರಿಂಗ್ ನಲ್ಲಿ, ಮೆಡಿಕಲ್‌ನಲ್ಲಿ ರ್‍ಯಾಂಕ್ ಬಂದರೆ ಆಯ್ಕೆ ಇರುತ್ತದೆ. ಅದೇರೀತಿ ಜ್ಞಾನವನ್ನು ಸಂಪಾದಿಸಿದರೆ ಆಯ್ಕೆ ಇರುತ್ತದೆ. ಆಗ ಇನ್ನು ಸುಲಭವಾಗಿ ಅವರು ಬೆಳೆಯುತ್ತಾರೆ.

ಕೆಲವರು ಏನು ಹೇಳುತ್ತಾರೆಂದರೆ ಪುಣ್ಯಕರ್ಮಗಳನ್ನೇ ತೆಗೆದುಕೊಳ್ಳಬಹುದಲ್ಲವೇ? ಪಾಪಕರ್ಮಗಳನ್ನು ಮಾತ್ರ ಏಕೆ ತೆಗೆದುಕೊಳ್ಳಬೇಕು? ಎಂದು ಪ್ರಶ್ನೆ ಮಾಡುತ್ತಾರೆ. ಆದರೆ ಅವರು ಕೇವಲ ಪಾಪಕರ್ಮಗಳನ್ನು ಮಾಡಿರುತ್ತಾರೆ. ಅವರ ಅಕೌಂಟ್ ನಲ್ಲಿ ಕೇವಲ ಪಾಪಕರ್ಮಗಳೇ ಇವೆ, ಆದ್ದರಿಂದ ಅವುಗಳಿಂದಲೇ ತೆಗೆದುಕೊಳ್ಳಬೇಕೇ ಹೊರತು ಇಲ್ಲದ ಪುಣ್ಯಕರ್ಮಗಳು ಎಲ್ಲಿಂದ ಬರುತ್ತವೆ? ಅನೇಕ ಜನರಿಗೆ ಇದು ಅರ್ಥವಾಗುವುದಿಲ್ಲ.

ಭೂಮಿಯ ಮೇಲೆ ಏನು ಮಾಡುವುದಿಲ್ಲ, ಮಾಡುವುದಕ್ಕೆ ಇಷ್ಟಪಡುವುದಿಲ್ಲ, ತಿಳಿದುಕೊಳ್ಳುವುದಿಲ್ಲ. ಇವರಿಗೆ ಬಹಳಷ್ಟು ಆಸೆಗಳಿರುತ್ತವೆ, ಬಹಳಷ್ಟು ಬಯಕೆಗಳಿರುತ್ತವೆ. ಏನನ್ನೂ ಮಾಡದಿದ್ದರೆ ಎಲ್ಲಿಂದ ಬರುತ್ತವೆ? ಆದ್ದರಿಂದ ಆ ಪರಲೋಕದಲ್ಲಿರುವ ಆತ್ಮವು ಉನ್ನತಿ ಹೊಂದಲು ಆತ್ಮದ ಪ್ರಯೋಜನಕ್ಕಾಗಿ ಜ್ಞಾನವನ್ನು ಸಂಪಾದಿಸಬೇಕು.

ಆಗ ಅವರು ಪಡೆಯಬೇಕಾದ ಅನುಭವಗಳು ಮತ್ತು ಕಲಿಯಬೇಕಾದ ಪಾಠಗಳಿಗೆ ಅನುಗುಣವಾಗಿ ಭೂಮಿಯ ಮೇಲೆ ಜನ್ಮ ತೆಗೆದುಕೊಳ್ಳುತ್ತಾರೆ ಮತ್ತು ಅವೆಲ್ಲವನ್ನೂ ಸಾಧಿಸಲು ಪ್ರಯತ್ನಿಸುತ್ತಾರೆ.

ಅಚಿದರೆ ಈ ದೇಹವನ್ನು ಯಾವ ಉದ್ದೇಶಕ್ಕಾಗಿ ತೆಗೆದುಕೊಂಡಿದ್ದಾರೆ? ಆತ್ಮಕ್ಕಾಗಿ, ಆತ್ಮದ ಪ್ರಯೋಜನಕ್ಕಾಗಿ. ಅದಕ್ಕಾಗಿಯೇ ವೇದಗಳಲ್ಲಿ ಈ ವಾಕ್ಯವನ್ನು ಹೇಳಲಾಗಿದೆ. ಅದೇನೆಂದರೆ? "**ಪರೋಪಕಾರಾರ್ಥಂ ಇಧಂ ಶರೀರಂ**" ಎಂದು. ಅಂದರೆ ಪರಲೋಕದಲ್ಲಿರುವ ಆತ್ಮಕ್ಕೆ ಉಪಕಾರ, ಲಾಭವನ್ನು ಉಂಟುಮಾಡುವುದಕ್ಕಾಗಿಯೇ ಈ ಶರೀರ ಎಂದು ಹೇಳಲಾಗಿದೆ. ವೇದಗಳಲ್ಲಿ ಹೇಳಿರುವುದು ಅಸತ್ಯವಲ್ಲ.

ರಮಣ ಮಹರ್ಷಿಗಳು ಈ ದೇಹವನ್ನು ಸಂಪೂರ್ಣವಾಗಿ ಆತ್ಮಕ್ಕಾಗಿ ಉಪಯೋಗಿಸಿಕೊಂಡರು. ಅದಕ್ಕಿಂತಲೂ ಬೇರೆ ಉದಾಹರಣೆ ಯಾವುದೂ ಇಲ್ಲ. ಕೆಲವು ಯೋಗಿಗಳು ಮತ್ತು ಬಾಲಯೋಗಿಗಳು ಆತ್ಮದ ಲಾಭಕ್ಕಾಗಿಯೇ ಶರೀರವನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡರು. ವಾಸ್ತವವಾಗಿ ಹಲವು ಜನರಿಗೆ ನಾನು ಆತ್ಮ ಎಂಬ ವಿಷಯವೇ ತಿಳಿದಿಲ್ಲ. ಆತ್ಮದ ಬಗ್ಗೆಯೇ ತಿಳಿಯದವರಿಗೆ ಆತ್ಮದ ಲಾಭವೆಂದರೆ ಏನೆಂದು ಹೇಗೆ ತಿಳಿಯುತ್ತದೆ? ಆದ್ದರಿಂದ ಎಷ್ಟೇ ಹೇಳಿದರೂ ಅರ್ಥವಾಗುವುದಿಲ್ಲ.

ಕೆಲವರಿಗೆ ಧ್ಯಾನ ಮಾಡಿ ಒಳ್ಳೆಯ ಮಾರ್ಗಕ್ಕೆ ಬಂದಿರುವಿರಿ, ಪೂರ್ತಿಯಾಗಿ ಸದ್ವಿನಿಯೋಗ ಮಾಡಿಕೊಳ್ಳಿ, ಭೀಮವರಂನ ತರಗತಿಗಳಿಗೆ ತಪ್ಪಿಸಿಕೊಳ್ಳಬೇಡಿ, ಬೆಳಗಿನ ಜೂಮ್ ಕ್ಲಾಸ್ ಗಳನ್ನು ತಪ್ಪಿಸಿಕೊಳ್ಳಬೇಡಿ, ಜ್ಞಾನವನ್ನು ಹೆಚ್ಚಿಸಿಕೊಳ್ಳಿ ಎಂದು ನಾನು ಪದೇಪದೇ ಹೇಳುತ್ತಲೇ ಇರುತ್ತೇನೆ. ಇಷ್ಟು ಹೇಳಿದರೂ ನಿರ್ಲಕ್ಷಿಸಿ ಇದರೊಳಗೆ ಬಂದರೂ ಒಂದೇ, ಬರದಿದ್ದರೂ ಒಂದೇ ಆಗಿರುತ್ತದೆ.

ನಿಜವಾಗಿಯೂ ನಾನು ಆತ್ಮ. ನಾನು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ನಾನು ಇನ್ನೂ ಉನ್ನತವಾದ ಲೋಕಗಳನ್ನು ಸೇರಬೇಕು ಎನ್ನುವ ಪರಿಜ್ಞಾನ ಇದ್ದರೆ ಬಹಳ ಗಂಭೀರವಾಗಿ ಧ್ಯಾನ ಮಾಡುತ್ತಾರೆ, ಆತ್ಮಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಾರೆ.

ನಾವು ಮನೆಯಲ್ಲಿಯೇ ಹಾಯಾಗಿ ಎ.ಸಿ. ಹಾಕಿಕೊಂಡು ಕೆಲಸದವರ ಹತ್ತಿರ ಕೆಲಸ ಮಾಡಿಸಿಕೊಂಡು ಹಾಯಾಗಿರಬಹುದಲ್ಲವೇ? ಏಕೆ ತಿರುಗಾಡಬೇಕು?

ಒಂದು ತಿಂಗಳಲ್ಲಿ ಒಂದು ವಾರ, ಹತ್ತು ದಿನಗಳು ಮಾತ್ರ ಮನೆಯಲ್ಲಿ ಇರುತ್ತೇವೆ. ಉಳಿದ ದಿನಗಳಲ್ಲಿ ತಿರುಗಾಡುತ್ತಿದ್ದೇವೆ. ಏಕೆ? ಅಂದರೆ ಜ್ಞಾನವನ್ನು ಹೆಚ್ಚಿಸಿಕೊಳ್ಳಲು. ಈ ಜ್ಞಾನವು ಅನಂತವಾದದ್ದು. ಎಷ್ಟು ಕಲಿತುಕೊಂಡರೂ, ಎಷ್ಟು ತಿಳಿದುಕೊಂಡರೂ, ಇನ್ನೂ ಕಲಿಯಬೇಕು, ಇನ್ನೂ ಹೆಚ್ಚಿಸಿಕೊಳ್ಳಬೇಕು, ಇನ್ನೂ ಬೆಳೆಯಬೇಕು. ಸತ್ಯಲೋಕದಲ್ಲಿ ಇರುವವರೂ ಸಹ ಇನ್ನೂ ಧ್ಯಾನ ಮಾಡುತ್ತಿದ್ದಾರೆ. ಶಿವ ಧ್ಯಾನ ಮಾಡುತ್ತಿದ್ದಾರೆ ಆಂಜನೇಯ ಸ್ವಾಮಿ ಧ್ಯಾನ ಮಾಡುತ್ತಿದ್ದಾರೆ, ಎಲ್ಲರೂ ಮಾಡುತ್ತಿದ್ದಾರೆ.

ಅಂತಹ ಉನ್ನತ ಸ್ಥಿತಿಯನ್ನು ತಲುಪಿದವರು ಇನ್ನೂ ಧ್ಯಾನ ಮಾಡುತ್ತಿದ್ದರೆ, ನಾವು ಏಕೆ ಮಾಡುತ್ತಿಲ್ಲ... ಭೂಮಿಗೆ ಎಂಜಾಯ್ ಮಾಡಲು ಬಂದಿಲ್ಲರೀ. ಮಕ್ಕಳನ್ನು ಹಡೆದು, ಅವರನ್ನು ಬೆಳಸಿ, ಚೆನ್ನಾಗಿ ಓದಿಸುವುದಕ್ಕಾಗಿ, ಪ್ರಯೋಜಕರನ್ನಾಗಿ ಮಾಡಲು, ನಾವು ಬಂದಿಲ್ಲ. ಅವುಗಳ ಜೊತೆಗೆ ಆತ್ಮವನ್ನು ಕೂಡಾ ಹಿಡಿಸಿಕೊಳ್ಳಬೇಕು.

ಹಾಗೆ ಸಂಸಾರ, ಜವಾಬ್ದಾರಿಗಳು ಎನ್ನುತ್ತಿದ್ದೀರೆಂದರೆ ನಾನು ದೇಹವೆಂಬ ತಿಳುವಳಿಗೆ ಇದ್ದಂತೆಯೇ. ಅವರನ್ನು ಏನೆನ್ನುತ್ತೇವೆ? ಸರಿ ಮಗು, ಆ ಕೆಲಸವನ್ನೇ

ಮಾಡು ಅನ್ನುತ್ತೇವೆ. ಪತ್ರೀಜಿಯವರೂ ಕೂಡಾ ಅವಸರವೇನಿಲ್ಲ, ಈ ಜನ್ಮವಲ್ಲದೆ, ಇನ್ನು 50 ಜನ್ಮಗಳನ್ನಾದರೂ ತೆಗೆದುಕೊಳ್ಳಬಹುದು, 100 ಜನ್ಮಗಳಾದರೂ ತೆಗೆದುಕೊಳ್ಳಬಹುದು ಎನ್ನುತ್ತಾರೆ. ಯಾರನ್ನು ಬಲವಂತಪಡಿಸುವುದಿಲ್ಲ.

ನೋಡಿ, ಒಂದು ಕಡೆ ಗಾಬರಿ ಬೇಡ ಏನು ಪರವಾಗಿಲ್ಲ ಮಕ್ಕಳನ್ನು ನೋಡಿಕೋ, ಸಾಕಷ್ಟು ಹಣ ಸಂಪಾದಿಸು, ಒಳ್ಳೆಯ ಬಿಲ್ಡಿಂಗ್ ನಿರ್ಮಾಣ ಮಾಡು, ದೊಡ್ಡ ಕಾರು ಖರೀದಿಸು ಎಂದು ಹೇಳುತ್ತಾರೆ. ಅಲ್ಲಿಗೂ ನಾನಾಗಲೀ, ಅಮ್ಮನಾಗಲೀ ಯಾವಾಗಲೂ ಆತ್ಮದ ಬಗ್ಗೆ, ಆತ್ಮಜ್ಞಾನದ ಬಗ್ಗೆ ಹೇಳುತ್ತಲೇ ಇರುತ್ತೇವೆ. ಯಾವುದೇ ವಿಷಯವನ್ನು ತೆಗೆದುಕೊಂಡರೂ ಪ್ರತಿದಿನವೂ ಆತ್ಮದ ಪ್ರಸ್ತಾವನೆ ಇದ್ದೇ ಇರುತ್ತದೆ.

ಏಕೆಂದರೆ ನೀವು 350 ಜನ್ಮಗಳನ್ನು ದಾಟಿದ್ದೀರಿ ಎಂದು ಹೇಳುತ್ತಿದ್ದೇನೆ. ಈ 350 ಜನ್ಮಗಳನ್ನು ಶರೀರದಿಂದ, ಮನಸ್ಸಿನಿಂದ ಅನುಭವಿಸಿದ್ದೀರಿ, ಇನ್ನು ಏನು ಅನುಭವಿಸುವಿರಿ? ಜನ್ಮವಿಲ್ಲದ ಸ್ಥಿತಿಗೆ ಹೋಗುವುದಿಲ್ಲವೇ? ಮೇಲೆ ಇನ್ನೂ ಅನೇಕ ಲೋಕಗಳಿವೆ. ನಿಮ್ಮ ಗುರಿಯಾದ ಸತ್ಯಲೋಕವನ್ನು ಯಾವಾಗ ತಲುಪುತ್ತೀರಿ?

ಈ ಸೃಷ್ಟಿ ಅಲ್ಲಿಗೆ ಮುಗಿಯುವುದಿಲ್ಲ. ಅಲ್ಲಿಗೆ ಹೋದರೂ ಅಲ್ಲಿ ಮಾಡಬೇಕಾದ ಕೆಲಸಗಳಿರುತ್ತವೆ ಸತ್ಯಲೋಕಕ್ಕೆ ಹೋದರೆ ಕೋ ಕ್ರಿಯೇಟರ್ ಆದಂತೆ ಎಂದು ಹೇಳಿದ್ದಾರಲ್ಲವೇ. ಕೋ– ಕ್ರಿಯೇಟರ್ ಆಗುವುದು ಎಂದರೆ ಅವನು ಅಲ್ಲಿಂದ ಸೃಷ್ಟಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾನೆ. ಅದಕ್ಕಿಂತ ಮುಂಚೆ ಸೃಷ್ಟಿ ಹೇಗಿತ್ತೋ, ಆ ಸೃಷ್ಟಿಕರ್ತ ಹೇಗೆ ಸೃಷ್ಟಿ ಮಾಡಿದನೋ, ಇವನು ಸಹ ಹಾಗೆಯೇ ಮಾಡುತ್ತಾ ಇರುತ್ತಾನೆ. ಅದಕ್ಕಾಗಿಯೇ ಇವನನ್ನು ಸಹ–ಸೃಷ್ಟಿಕರ್ತ ಎನ್ನುತ್ತಾರೆ.

ಸೃಷ್ಟಿಕರ್ತ ಕ್ರಿಯೇಟರ್. ಆತನಂತೆಯೇ ಇವನು ಸಹ ಕೆಲಸ ಮಾಡುತ್ತಾನೆ ಆದ್ದರಿಂದ ಇವನನ್ನು ಕೋ–ಕ್ರಿಯೆಟರ್ ಎನ್ನುತ್ತಾರೆ. ಆದ್ದರಿಂದ ವೇದಗಳಲ್ಲಿ ಉಲ್ಲೇಖಿಸಲಾದ ಈ ವಾಕ್ಯ "**ಪರೋಪಕಾರಾರ್ಥಮ್ ಇಧಂ ಶರೀರಂ**" ಅಂದರೆ ಆತ್ಮಕ್ಕೆ ಪರಲೋಕದಲ್ಲಿ ಉಂಟಾಗುವ ಪ್ರಯೋಜನಕ್ಕಾಗಿಯೇ ಈ ಶರೀರ ಎಂದು ತಿಳಿದುಕೊಳ್ಳಬೇಕು.

*** ***

# “ಮಲಯಾಳ ಸ್ವಾಮಿಯವರ ಸಂದೇಶ”

**"ಮನುಷ್ಯನು ಈ ಜನ್ಮದಲ್ಲಿಯೇ ತನ್ನ ಸ್ವಂತ ಪ್ರಯತ್ನದಿಂದ ದೈವತ್ವವನ್ನು ಪಡೆಯಬಹುದು."**

ಮಾನವ ಜೀವನದ ಗುರಿ ದೈವತ್ವವನ್ನು ಪಡೆಯುವುದು. ನಾವು ಕಾಣುವ ದೇಹವಲ್ಲ, ಆತ್ಮಗಳು. ಆತ್ಮಗಳಾದ ನಾವು ಒಂದು ಪೂರ್ಣಾತ್ಮದಿಂದ, ಮೂಲಾತ್ಮದಿಂದ ಹೊರ ಬಂದಿದ್ದೇವೆ. ಹೊರ ಬಂದ ನಮಗೆ ಆ ಮೂಲಾತ್ಮ ಅಥವಾ ಆ ಪೂರ್ಣಾತ್ಮ ಒಂದು ಗುರಿಯನ್ನು ನಿಗದಿಪಡಿಸಿದೆ. ನೀನು ನನ್ನ ಸ್ಥಿತಿಗೆ ತಲುಪುವವರೆಗೆ ಜನ್ಮಗಳನ್ನು ತೆಗೆದುಕೊಳ್ಳುತ್ತಲೇ ಇರುತ್ತೀಯಾ, ಯಾವಾಗ ದೈವತ್ವವನ್ನು ಹೊಂದುವೆಯೋ ಇನ್ನು ನಿನಗೆ ಜನ್ಮಗಳು ಇರುವುದಿಲ್ಲ ಎಂಬುದೇ ಆ ಗುರಿ.

ನಂತರ ಆತ್ಮಗಳಾದ ನಮ್ಮನ್ನು ತಾಯಿ ಗರ್ಭದಲ್ಲಿರುವ ಒಂದು ಶರೀರದೊಳಗೆ ಪ್ರವೇಶಿಸುವಂತೆ ಮಾಡಲಾಯಿತು. ಆ ಶರೀರದೊಂದಿಗೆ ಜನ್ಮ ತೆಗೆದುಕೊಂಡ ನಂತರ ನಮ್ಮ ಜನ್ಮ ಪರಂಪರೆ ಪ್ರಾರಂಭವಾಗುತ್ತದೆ. ಇನ್ನು ಅಲ್ಲಿಂದ ಹಾಗೆ ಜೀವಿಸುತ್ತಾ, ವಿಧವಿಧವಾದ ಕರ್ಮಗಳನ್ನು ಮಾಡುತ್ತಾ, ಅವುಗಳ ಫಲಿತಾಂಶಗಳನ್ನು ಕಷ್ಟಗಳ ರೂಪದಲ್ಲಿ ಅನುಭವಿಸುತ್ತಾ, ಜಗಳಗಳು ಹೊಡೆದಾಟಗಳು, ಸಮಸ್ಯೆಗಳು, ಸಂಕಟಗಳು ಇವುಗಳಲ್ಲಿ ಸಿಲುಕಿಕೊಂಡು ಒದ್ದಾಡುತ್ತಾ, ಏನಾಗುತ್ತಿದೆ ಎಂದು ಅರ್ಥವಾಗದೇ, ಹೊರಬರುವುದು ಹೇಗೆ ಎಂದು ತಿಳಿಯದೇ, ಒಂದು ರೀತಿಯಲ್ಲಿ ನಾವು ಗೊಂದಲದಲ್ಲಿದ್ದೇವೆ ಎಂದು ಹೇಳಬಹುದು.

ನಾವು ಒಂದು ಜೀವನವನ್ನು ಯಾವುದಾದರೂ ರೀತಿಯ ಕಠಿಣ ಪರಿಶ್ರಮದಿಂದ ಪೂರ್ಣಗೊಳಿಸಿದರೆ, ಇನ್ನೊಂದು ಜನ್ಮ ಬರುತ್ತದೆ. ಈ ಜೀವನ ಕೊನೆಗೊಂಡಾಗ ಇನ್ನೊಂದು ದೇಹದೊಂದಿಗೆ ಇನ್ನೊಂದು ಜೀವನ ಬರುತ್ತದೆ. ಮತ್ತೇ ಪ್ರಯಾಣ, ಕಷ್ಟಗಳು, ಸಂಕಟಗಳು, ಸಹಜ. ಇದಕ್ಕೆ ಕೊನೆ ಯಾವಾಗ? ಎಂಬ ಆಲೋಚನೆ ಬಂದಾಗ ಸದ್ಗುರುವನ್ನು ಆಶ್ರಯಿಸಿ, ಅವರ ಮೂಲಕ ಜೀವನದ ಗುರಿಯನ್ನು ಸಾಧಿಸಲು ಕಲಿಯುತ್ತೇವೆ. ಇದೇ ದೈವತ್ವವನ್ನು ಹೊಂದುವುದು ಇದನ್ನು ಪಡೆದರೆ ಪುನಹ ಭೂಮಿಗೆ ಬರುವ ಅಗತ್ಯವಿಲ್ಲ ಎಂದು ನಾವು ಸದ್ಗುರುಗಳ ಮೂಲಕ ಕಲಿಯುತ್ತೇವೆ.

ಪತ್ರೀಜಿ ಎಲ್ಲರೂ ದೇವರುಗಳೆಂದೇ ಹೇಳುತ್ತಾರೆ! ಆದರೆ ನಾವು ಮಾನವರಂತೆ ವರ್ತಿಸುತ್ತಿದ್ದೇವೆ. ಆದ್ದರಿಂದ ದೇವರುಗಳಾದ ನಾವು ದೇವರಂತೆ ವರ್ತಿಸುವ ಸ್ಥಿತಿಗೆ

ಸೇರಬೇಕು. ಆದರೆ ದೇವರಾಗುವುದು ಅಷ್ಟು ಸುಲಭವೇ? ಅದಕ್ಕೆ ನಾವು ಅನೇಕ ಜನ್ಮಗಳನ್ನು ತೆಗೆದುಕೊಳ್ಳಬೇಕು ಎಂದು ಯೋಚಿಸುತ್ತಲೇ ಇರುತ್ತೇವೆ. ಆದರೆ ಮಲಯಾಳ ಸ್ವಾಮಿಯವರು ಏನು ಹೇಳಿದ್ದಾರೆಂದರೆ? ಮನುಷ್ಯನು ತನ್ನ ಸ್ವಂತ ಪ್ರಯತ್ನದ ಮೂಲಕ ಈ ಜನ್ಮದಲ್ಲಿಯೇ ದೈವತ್ವವನ್ನು ಪಡೆಯಬಹುದು ಎಂದು ಹೇಳಿದ್ದಾರೆ.

ಪತ್ರೀಜಿ ಸಹ ಈ ಜನ್ಮವನ್ನೇ ಕೊನೆಯ ಜನ್ಮವನ್ನಾಗಿ ಮಾಡಿಕೊಳ್ಳಬೇಕು. ಎಂದು ಹೇಳುತ್ತಿರುತ್ತಾರೆ. ಆ ದೈವತ್ವವನ್ನು ಹೊಂದುವುದನ್ನೇ ಆತ್ಮ ಸಾಕ್ಷಾತ್ಕಾರ ಎಂದು, ಬ್ರಹ್ಮಜ್ಞಾನವನ್ನು ಪಡೆಯುವುದು ಎಂದು ಕರೆಯಲಾಗುತ್ತದೆ. ಅದನ್ನೇ ಮೋಕ್ಷ ಎನ್ನುತ್ತಾರೆ, ನಿರ್ವಾಣ ಎನ್ನುತ್ತಾರೆ.

ಶಿರಡಿ ಬಾಬಾ ಸಹ ಆತ್ಮ ಸಾಕ್ಷಾತ್ಕಾರವನ್ನು ಅಂದರೆ ದೈವತ್ವವನ್ನು ಪಡೆಯುವುದು ಹೇಗೆ? ಎಂದು ಹೇಳಿದ್ದಾರೆ.

**"ಮುಮುಕ್ಷತೆ ಅಥವಾ ಮುಕ್ತಿಯನ್ನು ಪಡೆಯಬೇಕೆಂಬ ತೀವ್ರವಾದ ಬಯಕೆ ಇರಬೇಕು." ಎಂದಿದ್ದಾರೆ.**

ಈ ಆಸೆ ಯಾರಿಗಾದರೂ ತುಂಬಾ ತೀವ್ರವಾಗಿರಬೇಕು. ಈ ಜನ್ಮದಲ್ಲಿಯೇ ಆ ಸ್ಥಿತಿಯನ್ನು ಹೊಂದಲು ಬಯಕೆ ಬಹಳ ತೀವ್ರವಾಗಿರಬೇಕು. ನಿನಗೆ ಯಾವುದರ ಮೇಲೆ ವ್ಯಾಮೋಹವಿದ್ದರೂ ಈ ಜನ್ಮದಲ್ಲಿ ಅದನ್ನು ಸಾಧಿಸಲು ಸಾಧ್ಯವಿಲ್ಲ. ನೀನು ಮಾಡುವ ಸ್ವಲ್ಪ ಪ್ರಯತ್ನದ ಮೂಲಕ ಸ್ವಲ್ಪಮಟ್ಟಿಗೆ ಸಾಧಿಸಬಹುದು, ಆದರೆ ಈ ಜನ್ಮದಲ್ಲಿ ನೀನು ಅದನ್ನು ಸಂಪೂರ್ಣವಾಗಿ ಸಾಧಿಸಲು ಸಾಧ್ಯವಿಲ್ಲ.

ಅದಕ್ಕೆ ಶಿರಡಿ ಬಾಬಾ ಏನು ಹೇಳಿದ್ದಾರೆಂದರೆ? ಮುಮುಕ್ಷತ್ವ ಅಂದರೆ ಮೋಕ್ಷವನ್ನು ಪಡೆಯಬೇಕೆಂಬ ಬಯಕೆ ಅಂದರೆ ಮುಕ್ತಿಯನ್ನು ಹೊಂದಬೇಕೆಂಬ ತೀವ್ರವಾದ ಬಯಕೆ ಇರಬೇಕು ಎಂದಿದ್ದಾರೆ ಇನ್ನು ಅವರು ಏನು ಹೇಳಿದ್ದಾರೆಂದರೆ?

**"ಯಾರು ತಾನು ಬಂಧಿಯೆಂದು ಅಂದರೆ ಬಂಧನದಲ್ಲಿದ್ದೇನೆಂದು ಅರಿತುಕೊಂಡು, ಆ ಬಂಧನದಿಂದ ಹೊರಬರಲು ದೃಢ ನಿಶ್ಚಯನಾಗಿ ಅಂದರೆ ಗಂಭೀರವಾಗಿ ನಿರ್ಧರಿಸಿದವನಾಗಿ, ಇತರ ಸುಖಗಳನ್ನು ನಿರ್ಲಕ್ಷಿಸುತ್ತಾ, ತೀವ್ರವಾಗಿ ಕಷ್ಟಪಟ್ಟು ಅಂದರೆ ಶ್ರಮ ವಹಿಸಿ, ಆ ಗುರಿಯನ್ನು ಸಾಧಿಸಲು ಅಂದರೆ ಆತ್ಮ ಸಾಕ್ಷಾತ್ಕಾರವನ್ನು ಹೊಂದಲು ಅಂದರೆ ದೈವತ್ವವನ್ನು ಹೊಂದಲು ಪ್ರಯತ್ನಿಸುವವನು ಖಂಡಿತವಾಗಿಯೂ ಈ ಜನ್ಮದಲ್ಲಿಯೇ ಅದನ್ನು ಸಾಧಿಸಬಹುದು."**

ಇದನ್ನೇ ಮಲಯಾಳ ಸ್ವಾಮಿಯವರು ಸಹ ಹೇಳಿದ್ದಾರೆ.

ಯಾರಾದರೂ ಸರಿ ಮೊದಲಿಗೆ ನಾನು ಬಂಧನದಲ್ಲಿದ್ದೇನೆ, ಬಂಧಿತನಾಗಿದ್ದೇನೆ ಎಂದು ತಿಳಿದುಕೊಳ್ಳಬೇಕು. ನಾವು ಏನು ಯೋಚಿಸುತ್ತೇವೆಂದರೆ? ಜೈಲಿನಲ್ಲಿರುವವರು ಮಾತ್ರ ಸೆರೆಯಾಳುಗಳು ಎಂದು ಭಾವಿಸುತ್ತೇವೆ. ವಾಸ್ತವವಾಗಿ ಅವರು ಜೈಲಿನಿಂದ ಹೊರಬರಲು ತುಂಬಾ ಪರಿತಪಿಸುತ್ತಿರುತ್ತಾರೆ. ಏಕೆಂದರೆ? ಯಾರಿಗಾದರೂ ಜೈಲು ಜೀವನ ತುಂಬಾ ದುಃಖಕರ, ಕಷ್ಟಕರ, ಬದುಕಲು ಅಸಾಧ್ಯ.

ಆ ಸೆರೆಯಿಂದ ಹೊರಬರಲು ತುಂಬಾ ಪರಿತಪಿಸುತ್ತಾರೆ. ಅದಕ್ಕಾಗಿಯೇ ಯಾರಾದರೂ ಜೈಲು ಶಿಕ್ಷೆಗೆ ಗುರಿಯಾಗುತ್ತಾರೆ ಅಂದರೆ ತುಂಬಾ ಭಯಪಡುತ್ತಾರೆ. ಏಕೆ ಇಷ್ಟೊಂದು ಭಯ? ಜೈಲಿನಲ್ಲಿಯೂ ಸಹ ಎಲ್ಲವನ್ನು ನೀಡುತ್ತಾರೆ, ಸಮಯಕ್ಕೆ ಸರಿಯಾಗಿ ಆಹಾರವನ್ನು ನೀಡುತ್ತಾರೆ, ಮಲಗಲು ಸ್ಥಳವಿರುತ್ತದೆ, ಎಲ್ಲವೂ ಇರುತ್ತವೆ. ಆದರೂ ಜೈಲಿಗೆ ಹೋಗಲು ಬಯಸುವುದಿಲ್ಲ, ಒಂದು ವೇಳೆ ಹೋದರೂ! ಹೊರಬರಲು ಬಹಳ ಪ್ರಯತ್ನ ಮಾಡುತ್ತಾರೆ.

ನಾವು ಏನು ಯೋಚಿಸುತ್ತೇವೆ? ಆ ಜೈಲಿನಲ್ಲಿ ಇರುವವರು ಮಾತ್ರ ಕೈದಿಗಳು ಎಂದು ಭಾವಿಸುತ್ತೇವೆ. ಆದರೆ ನಾವೆಲ್ಲರೂ ಸಹ ಕೈದಿಗಳಾಗಿದ್ದೇವೆ. ಈ ವಿಷಯ ಅನೇಕರಿಗೆ ತಿಳಿದಿಲ್ಲ. ಈಗ ನಾವು ಹೊರಗೆ ನೋಡುತ್ತಿರುವ ಎಲ್ಲಾ ಜೈಲುಗಳು ಮಾನವ ನಿರ್ಮಿತ ಜೈಲುಗಳು, ಆದರೆ ಈ ಭೂಮಿಯು ದೇವರು ನಿರ್ಮಿಸಿದ ಅತಿ ದೊಡ್ಡ ಜೈಲು. ತಪ್ಪುಗಳನ್ನು ಮಾಡಿದವರನ್ನು ಜೈಲಿಗೆ ಹಾಕಲಾಗುತ್ತದೆ, ಆದರೆ ಕರ್ಮಗಳನ್ನು ಮಾಡಿದವರನ್ನು ದೇವರು ನಿರ್ಮಿಸಿದ ಈ ಜೈಲಿಗೆ ಹಾಕಲಾಗುತ್ತದೆ.

ಮನುಷ್ಯ ಸೃಷ್ಟಿಸಿದ ಜೈಲಿನಲ್ಲಿ ಅವರು ತಮ್ಮ ಪೂರ್ಣ ಶಿಕ್ಷೆಯನ್ನು ಅನುಭವಿಸಿದರೆ ಅವರು ಸೆರೆಯಿಂದ ಬಿಡುಗಡೆಯಾಗುತ್ತಾರೆ. ಈ ಭೂಮಿ ಎಂಬ ಸೆರೆಯಿಂದ ಕರ್ಮಗಳಿಲ್ಲದಂತೆ ಮಾಡಿಕೊಂಡರೆ ಇವರು ಸಹ ಈ ಸೆರೆಮನೆಯಿಂದ ಬಿಡುಗಡೆಯಾಗುತ್ತಾರೆ.

ಮಾನವರು ನಿರ್ಮಿಸಿದ ಜೈಲುಗಳಲ್ಲಿ ಕೈದಿಗಳು ಹೇಗೆ ಬಳಲುತ್ತಾರೋ? ಅದೇ ರೀತಿ ಭೂಮಿ ಎಂಬ ಈ ಜೈಲಿನಲ್ಲಿ ಮನುಷ್ಯರು ಸಹ ಅನೇಕ ಕಷ್ಟಗಳನ್ನು ಅನುಭವಿಸುತ್ತಿರುತ್ತಾರೆ. ಸ್ವಲ್ಪ ಯೋಚಿಸಿ! ಭೂಮಿ ಮೇಲೆ ಯಾರು ಸುಖವಾಗಿದ್ದಾರೆ? ಅವರವರ ಜೀವನದಲ್ಲಿ ಯಾರು ತೃಪ್ತರಾಗಿದ್ದಾರೆ? ಯಾರಿಗೆ ಕಷ್ಟಗಳಿಲ್ಲ? ಸ್ವಲ್ಪ ಸಮಯದವರೆಗೆ ಎಲ್ಲವೂ ಚೆನ್ನಾಗಿದೆ ಎಂದು ಭಾವಿಸುತ್ತೇವೆ! ಮತ್ತೆ ಯಾವುದೋ

ಸಮಸ್ಯೆ, ಏಕೆ ಈ ಜೀವನ? ಅನಿಸುತ್ತದೆ. ಅದಕ್ಕಾಗಿಯೇ ಕೆಲವರು ಆತ್ಮಹತ್ಯೆ ಸಹ ಮಾಡಿಕೊಳ್ಳುತ್ತಿದ್ದಾರೆ.

ಸಾವು ಎಂಬುದು ಮಾನವರ ಕೈಯಲ್ಲಿ ಇಲ್ಲ. ಬೇಕಾದರೆ ನೋಡಿ, ನಾನು ಹೊರಟು ಹೋಗುತ್ತೇನೆ ಅಂದರೆ ಹೋಗಲು ಸಾಧ್ಯವಿದೆಯೇ? ಅದು ಯಾರ ಕೈಯಲ್ಲಿಯೂ ಇಲ್ಲ. ಎಷ್ಟು ದಿನಗಳು ಇರಬೇಕೆಂದು ಇದೆಯೋ ಅಷ್ಟು ದಿನಗಳು ಭೂಮಿಯ ಮೇಲೆ ಇರಬೇಕಾದದ್ದೆ! ಕೊನೆಗೆ 80 90 ವರ್ಷಗಳ ಮುದುಕನಾದರೂ ಅನುಭವಿಸಬೇಕಾದ ಕರ್ಮಗಳು ಪೂರ್ತಿ ಆಗದಿದ್ದರೆ ಮಂಚದ ಮೇಲೆ ಮಲಗಿ ಅನುಭವಿಸುತ್ತಾ ಜೀವಿಸುತ್ತಾನೆಯೇ ಹೊರತು ಮೇಲೆ ಹೋಗಲು ಸಾಧ್ಯವಿಲ್ಲ.

ಅವನು ಅನುಭವಿಸಬೇಕಾದ ಎಲ್ಲಾ ಕರ್ಮಗಳು ಈ ಜನ್ಮದಲ್ಲಿ ಪೂರ್ಣಗೊಂಡರೆ ಅವನು ಈ ಜೀವನವನ್ನು ಬಿಟ್ಟು ಹೋಗುತ್ತಾನೆ. ಪತ್ರೀಜಿ ಕೆಲವು ಸಂದರ್ಭಗಳಲ್ಲಿ ಹೇಳಿದ್ದಾರೆ ನೀನು ಭೂಮಿಯ ಮೇಲೆ ಯಾವುದೇ ಕೆಲಸಗಳನ್ನು ಮಾಡಬೇಕಾಗಿದ್ದರೂ, ಅನುಭವಿಸಬೇಕಾದ ಕರ್ಮಗಳಿದ್ದರೂ, ಯಾವುದೇ ಪರಿಸ್ಥಿತಿಯಲ್ಲಿಯೂ ನಿನಗೆ ಸಾವು ಬರುವುದಿಲ್ಲ ಎಂದಿದ್ದಾರೆ.

ಅದಕ್ಕಾಗಿಯೇ ನೀವು ಗಮನಿಸಿ ಕೆಲವು ಅಪಘಾತಗಳ ಸಂಭವಿಸುತ್ತವೆ. ಬಸ್ಸು ಅಪಘಾತ, ಬೆಂಕಿ ಅಪಘಾತ, ಅಥವಾ ರೈಲು ಅಪಘಾತ, ಕೆಲವು ಸ್ಥಳಗಳಲ್ಲಿ ಅಗ್ನಿ ಅವಘಡಗಳು ಸಂಭವಿಸುತ್ತವೆ. ಅಂತಹ ಅಪಘಾತಗಳಲ್ಲಿ ಎಲ್ಲರೂ ಸಾಯುತ್ತಾರೆ ಇವನೊಬ್ಬ ಮಾತ್ರ ಬದುಕುಳಿಯುತ್ತಾನೆ, ಇಂತಹ ಅನೇಕ ಘಟನೆಗಳು ನಡೆದಿವೆ.

ವಾಸ್ತವವಾಗಿ ನೀವು ಜನ್ಮಗಳು ಬೇಡ ಎಂದುಕೊಂಡರೂ ಜೀವನ ಬರುತ್ತದೆ. ಎಲ್ಲಿಯವರೆಗೆ? ಕರ್ಮಗಳು ಇರುವವರೆಗೆ. ಅದೇ ರೀತಿ ಇಲ್ಲಿನ ಜೈಲುಗಳಲ್ಲಿ ಆ ಅಪರಾಧಿಗೆ ಎಷ್ಟು ದಿನಗಳ ಶಿಕ್ಷೆ ವಿಧಿಸುತ್ತಾರೆಯೋ ಅಷ್ಟು ದಿನಗಳು ಇರಬೇಕಾದದ್ದೇ. ಅವನು ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸಿ ತಪ್ಪಿಸಿಕೊಂಡ ಎಂದು ಭಾವಿಸೋಣ! ಮತ್ತೆ ಹಿಡಿಯುತ್ತಾರೆ ಇನ್ನೂ ಶಿಕ್ಷೆ ಹೆಚ್ಚಾಗುತ್ತದೆ. ಅದಕ್ಕಿಂತ ಮುಂಚೆ ಮೂರು ತಿಂಗಳ ಶಿಕ್ಷೆ ವಿಧಿಸಿದ್ದರೆ, ಈಗ ಆರು ತಿಂಗಳ ಶಿಕ್ಷೆ ವಿಧಿಸಲಾಗುತ್ತದೆ, ತಪ್ಪಿಸಿಕೊಂಡಿದ್ದಕ್ಕಾಗಿ ಅವನನ್ನು ಸೆಂಟ್ರಲ್ ಜೈಲ್‌ನಲ್ಲಿ ಹಾಕಲಾಗುತ್ತದೆ, ಕತ್ತಲೆ ಕೋಣೆಯಲ್ಲಿ ಇಡುತ್ತಾರೆ, ಬಿಡುಗಡೆ ಮಾಡುವುದಿಲ್ಲ. ಕಷ್ಟಪಟ್ಟು ಆ ಮೂರು ತಿಂಗಳ ಶಿಕ್ಷೆಯನ್ನು ಅನುಭವಿಸಿದ್ದರೆ ಹೊರಗೆ ಬರುತ್ತಿದ್ದ, ಆತುರಪಟ್ಟಿದ್ದಕ್ಕಾಗಿ ಉಂಟಾದ ವ್ಯತ್ಯಾಸವನ್ನು ನೋಡಿ.

ಈ ಭೂಮಿ ಎಂಬ ಜೈಲಿನಿಂದ ಸಹ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ತಪ್ಪಿಸಿಕೊಳ್ಳಲು ಕೆಲವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಜೈಲಿನಿಂದ ತಪ್ಪಿಸಿಕೊಂಡವನು ಪರಿಸ್ಥಿತಿ ಯಾವ

ರೀತಿ ಇರುತ್ತದೆಯೋ, ಆತ್ಮಹತ್ಯೆ ಮಾಡಿಕೊಂಡವನ ಪರಿಸ್ಥಿತಿ ಸಹ ಅಷ್ಟೇ ಕೆಟ್ಟದಾಗಿರುತ್ತದೆ.

ಅದಕ್ಕಾಗಿ ಪತ್ರೀಜಿ ಯಾವುದೇ ಸಂದರ್ಭದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಬೇಡ ಎಂದು ಹೇಳುತ್ತಾರೆ. ಇದಕ್ಕಿಂತಲೂ ಮೂರ್ಖತನ ಇನ್ನೊಂದಿಲ್ಲ ಎನ್ನುತ್ತಾರೆ. ಅವನ ಪರಿಸ್ಥಿತಿ ಹೇಗಿರುತ್ತದೆ ಅಂದರೆ ಹಂಚಿನ ಮೇಲೆ ಇರುವವನು ಒಲೆಯೊಳಗೆ ಬಿದ್ದಂತೆ ಇರುತ್ತದೆ. ಹಂಚಿನ ಮೇಲೆ ಸಹಿಸಿಕೊಳ್ಳಲು ಸಾಧ್ಯವಿಲ್ಲದವನು! ಒಲೆಯಲ್ಲಿ ಹೇಗೆ ಸಹಿಸಿಕೊಳ್ಳುತ್ತಾನೆ? ಜೀವನಗಳು ಅಷ್ಟೊಂದು ಕ್ರೂರವಾಗಿ ತಯಾರಾಗುತ್ತವೆ.

ಆದ್ದರಿಂದ ಈ ಜನ್ಮವನ್ನು ಕೊನೆಯ ಜನ್ಮವನ್ನಾಗಿ ಮಾಡಿಕೊಳ್ಳಬೇಕಾದರೆ? ಈ ಬಂಧನದಿಂದ ಹೊರ ಬರಬೇಕೆಂಬ ತೀವ್ರವಾದ ಬಯಕೆ ಇರಬೇಕು. ಅದಕ್ಕೂ ಮೊದಲು ನಾನು ಬಂಧನದಲ್ಲಿದ್ದೇನೆ ಎಂಬುದನ್ನು ಅರಿತುಕೊಳ್ಳಬೇಕು. ಶಿರಡಿ ಬಾಬಾ ಅವರು ಇದನ್ನೇ ಹೇಳಿದ್ದಾರೆ. ಮೊದಲು ಇದರಿಂದ ನಾವು ಹೊರ ಬರಬೇಕಾದರೆ ನಾನು ಬಂಧನದಲ್ಲಿದ್ದೇನೆ ಎಂಬ ವಿಷಯವನ್ನು ತಿಳಿಯಬೇಕು ಎನ್ನುತ್ತಾರೆ. ನಾನು ಹೊರಗಿದ್ದೇನೆ ಎಂದು ಭಾವಿಸಿದರೆ ಪ್ರಯತ್ನಿಸುವುದೇ ಇಲ್ಲ.

ನಾನು ಬಂಧನದಲ್ಲಿದ್ದೇನೆ ಇದರಿಂದ ಹೊರಬರಬೇಕು ಎಂಬ ಭಾವನೆ ಬಂದರೆ, ಆಗ ಆ ಪ್ರಯತ್ನ ಇರುತ್ತದೆ. ಆ ಪರಿಸ್ಥಿತಿ, ಆ ರೀತಿಯ ಆಲೋಚನೆ ಯಾರಿಗೆ ಬರುತ್ತದೆ? 300 ರಿಂದ 350 ಜನ್ಮಗಳನ್ನು ದಾಟಿದವರಿಗೆ ಬರುತ್ತದೆ. ಒಂದು ರೀತಿಯಲ್ಲಿ ಹೇಳುವುದಾದರೆ ನೀವೆಲ್ಲರೂ ಅಂತಹವರೇ, ಅದಕ್ಕಾಗಿಯೇ ಈ ಮಾರ್ಗಕ್ಕೆ ಬಂದಿದ್ದೀರಿ.

ಎಲ್ಲರೂ ಬಂದಿದ್ದಾರೆಯೇ? ಬರುತ್ತಿಲ್ಲ ಅಲ್ಲವೇ? ಆದ್ದರಿಂದ ಶಿರಡಿ ಬಾಬಾ ಸುಮ್ಮನೆ ಹೇಳಿಲ್ಲ.

"**ಯಾರು ತಾನು ಬಂಧಿಯೆಂದು ಅಂದರೆ ಬಂಧನದಲ್ಲಿದ್ದೇನೆ ಎಂದು ಗ್ರಹಿಸಿ, ಆ ಬಂಧನದಿಂದ ಹೊರಬರಲು ದೃಢ ನಿಶ್ಚಯನಾಗಿ ಅಂದರೆ ತೀವ್ರವಾಗಿ ನಿರ್ಧರಿಸಿದವನಾಗಿ, ಇತರ ಸುಖಗಳನ್ನು ನಿರ್ಲಕ್ಷಿಸಿ, ಕಠಿಣ ಪರಿಶ್ರಮದಿಂದ ಅಂದರೆ ತೀವ್ರವಾಗಿ ಶ್ರಮಪಟ್ಟು, ಆತ್ಮ ಸಾಕ್ಷಾತ್ಕಾರವನ್ನು ಅಂದರೆ ಮೋಕ್ಷವನ್ನು ಅಂದರೆ ದೈವತ್ವವನ್ನು ಹೊಂದಲು ಪ್ರಯತ್ನಿಸುವನೋ ಅಂತಹ ಪ್ರಯತ್ನ ಮಾಡುವವನಿಗೆ ಮಾತ್ರ ಹೊರಬರುವ ಅರ್ಹತೆ ಇರುತ್ತದೆ**".

ಮಲಯಾಳ ಸ್ವಾಮಿಯವರು ಸಹ ಇದನ್ನೇ ಹೇಳಿದ್ದಾರೆ. ಸಾಧಾರಣವಾಗಿ ನಾವು ಏನು ಯೋಚಿಸುತ್ತೇವೆ? ನಮಗೆ ಅದು ಸಾಧ್ಯವೇ? ಆ ಮೋಕ್ಷವನ್ನು ಸಾಧಿಸಲು ನಮಗೆ

ಇನ್ನು ಎಷ್ಟು ಜನ್ಮಗಳು ಬೇಕಾಗುತ್ತವೆಯೋ? ಎಂದು ಯೋಚಿಸುತ್ತೇವೆ. ಆದರೆ ನಾವು ದೃಢ ನಿಶ್ಚಯದಿಂದ, ಏನೇ ಆದರೂ ಅದನ್ನು ಸಾಧಿಸಬೇಕು ಎಂಬ ಛಲವನ್ನು ಹೊಂದಿದ್ದು, ಶ್ರದ್ಧೆಯಿಂದ ಪ್ರಯತ್ನಿಸಿದರೆ, ಈ ಜನ್ಮದಲ್ಲಿಯೇ ಸಾಧ್ಯವಾಗುತ್ತದೆ ಎಂದಿದ್ದಾರೆ.

ಎಲ್ಲರನ್ನು ಭೀಮವರಂಗೆ ಏಕೆ ಬರಲು ಹೇಳುತ್ತೇನೆ? ಇನ್ನೂ ತಿಳಿದುಕೊಳ್ಳಬೇಕಾದ ವಿಷಯಗಳು ಬಹಳಷ್ಟಿವೆ ಅವುಗಳನ್ನು ತಿಳಿದುಕೊಳ್ಳಲು.  ಅಷ್ಟೇಅಲ್ಲದೆ ತೀವ್ರವಾದ ಧ್ಯಾನ ಸಾಧನೆ ಮಾಡಬೇಕು. ಎಲ್ಲರೂ ಈ ಅಭ್ಯಾಸವನ್ನು ಮಾಡಲು ಸಾಧ್ಯವಿಲ್ಲ, ಒಬ್ಬರು ಒಂದು ಗಂಟೆ ಸಹ ಕುಳಿತುಕೊಳ್ಳಲು ಸಾಧ್ಯವಿಲ್ಲ. ಹಾಗಾದರೆ ಮೋಕ್ಷ ಹೇಗೆ ಬರುತ್ತದೆ? ಅದಕ್ಕಾಗಿಯೇ ಭೀಮವರಂಗೆ ಬರಬೇಕು ಎಂದು ಬಯಸುತ್ತೇನೆ.

ನೋಡಿ ಬದುಕಲು ಬೆಳಗ್ಗೆಯಿಂದ ಸಂಜೆಯವರೆಗೆ ಎಷ್ಟು ಕಷ್ಟ ಪಡುತ್ತಾರೆ? ಹೀಗಿರುವಾಗ ದೈವತ್ವವನ್ನು ಪಡೆಯುವುದು ಸಾಮಾನ್ಯವೇ? ಅದಕ್ಕಾಗಿ ಎಷ್ಟು ಪ್ರಯತ್ನ ಪಡಬೇಕು? ಯಾರು ಮಾಡಬಲ್ಲರು? ಆ ಆಸೆ ಇರುವವರು, ಏನೇ ಆಗಲಿ ಅದನ್ನು ಸಾಧಿಸುವ ದೃಢಸಂಕಲ್ಪ ಹೊಂದಿರುವವರು ಮಾಡಬಲ್ಲರು.

ಪತ್ರೀಜಿ ಏನು ಹೇಳುತ್ತಾರೆ?  ನೀನು ಏನನ್ನಾದರೂ ಸಾಧಿಸಲು ಬಯಸಿದರೆ ಸಣ್ಣ ಗುರಿಯನ್ನು ಇಟ್ಟುಕೊಳ್ಳಬೇಡ ದೊಡ್ಡ ಗುರಿಯನ್ನು ಇಟ್ಟುಕೋ ಎಂದಿದ್ದಾರೆ. ಪರೀಕ್ಷೆಯನ್ನು ಬರೆಯುವವನು ಉತ್ತೀರ್ಣನಾದರೆ ಸಾಕು ಎಂದುಕೊಳ್ಳಬಾರದು. ಫಸ್ಟ್ ಕ್ಲಾಸ್ ಅಲ್ಲಿ ಪಾಸ್ ಆಗಬೇಕು, ಫಸ್ಟ್ ರ್‍ಯಾಂಕ್ ಗಳಿಸಬೇಕು ಎಂದುಕೊಳ್ಳಬೇಕು. ಅವರಿಗೆ ಮೊದಲ ಸ್ಥಾನ ಬರದಿದ್ದರೂ ಎರಡನೆಯ ಸ್ಥಾನವಾದರೂ ಬರುತ್ತದೆ. ಉತ್ತೀರ್ಣನಾಗಲು ಬಯಸಿದರೆ! ಫೇಲ್ ಆಗಬಹುದು.

ಅದೇರೀತಿ ಈ ಆಧ್ಯಾತ್ಮಿಕ ಮಾರ್ಗದಲ್ಲಿ 10 ಜನ್ಮಗಳಲ್ಲಿ, 20 ಜನ್ಮಗಳಲ್ಲಿ ಏನನ್ನಾದರೂ ಸಾಧಿಸಬಹುದು ಎಂದು ನಿರೀಕ್ಷಿಸಬಾರದು, ಈ ಜನ್ಮದಲ್ಲಿಯೇ ಏನನ್ನಾದರೂ ಸಾಧಿಸಬೇಕೆಂಬ ಛಲ ನಿಮ್ಮಲ್ಲಿದ್ದರೆ ಮರುಜನ್ಮದಲ್ಲಿಯಾದರೂ ಸಾಧಿಸಬಹುದು. ಆದ್ದರಿಂದ ಗುರಿ ಚಿಕ್ಕದಾಗಿರಬಾರದು.

ಮಲಯಾಳ ಸ್ವಾಮಿಯವರು ಹೇಳಿದಂತೆ ಈ ಜನ್ಮದಲ್ಲಿಯೇ ಸಾಧಿಸಬೇಕೆಂಬ ಪ್ರಯತ್ನ ಇರಬೇಕು. ಆಗ ಮಾತ್ರ ಅದನ್ನು ನಾವು ಈ ಜನ್ಮದಲ್ಲಿ ಅಲ್ಲದಿದ್ದರೂ ಮುಂದಿನ ಜನ್ಮದಲ್ಲಿ ಖಂಡಿತವಾಗಿಯೂ ಸಾಧಿಸುತ್ತೇವೆ.

*** ***

# ವೇದವ್ಯಾಸರು

ವೇದವ್ಯಾಸರು ಬೋಧಿಸಿದಂತಹ ಯಜುರ್ವೇದದಲ್ಲಿನ ತೈತ್ತಿರೀಯ ಉಪನಿಷತ್ತಿನಲ್ಲಿ ಹೇಳಲಾದ ವಿಷಯವನ್ನು ತಿಳಿದುಕೊಳ್ಳೋಣ.

**"ಯೋ ವೇದ ನಿಹಿತಂ ಗುಹೋಯಂ"**

ಇದರರ್ಥ ಆತ್ಮವು ಪ್ರತಿಯೊಬ್ಬ ವ್ಯಕ್ತಿಯ ಹೃದಯದ ಗುಹೆಯಲ್ಲಿ ನೆಲೆಗೊಂಡಿದೆ. ಇದನ್ನು ತಿಳಿದಿರುವವನೇ ಜ್ಞಾನಿ.

ಇದಕ್ಕೆ ವಿವರಣೆ ಎಂದರೆ ತೈತ್ತಿರೀಯ ಉಪನಿಷತ್ತಿನಲ್ಲಿ ಉಲ್ಲೇಖಿಸಲಾದ ಮಂತ್ರಗಳೇ "ಮಂತ್ರ ಪುಷ್ಪ". ಮಂತ್ರ ಪುಷ್ಪ ಎಂದರೆ ಆ ಉಪನಿಷತ್ತಿನಲ್ಲಿ ಉಲ್ಲೇಖಿಸಲಾದ ಮಂತ್ರಗಳು.

ಈ ಮಂತ್ರ ಪುಷ್ಪ ಮೂರು ಭಾಗಗಳಲ್ಲಿದೆ ಎಂದು ಹೇಳಲಾಗುತ್ತದೆ. ಮಂತ್ರ ಪುಷ್ಪದಲ್ಲಿನ ಮೊದಲನೇ ಭಾಗವು ಮಾನವರು ಪೂಜಿಸುತ್ತಿರುವ "ಭಗವಂತ" ಅಂದರೆ ಆತ್ಮ ಎಷ್ಟು ಶ್ರೇಷ್ಠವಾದದ್ದು ಎಂಬುದನ್ನು ವಿವರಿಸುತ್ತದೆ.

ಮಂತ್ರ ಪುಷ್ಪದ ಎರಡನೇ ಭಾಗದಲ್ಲಿ "ಆತ್ಮ" ಅಂದರೆ ಭಗವಂತನು ಮಾನವರಲ್ಲಿ ಯಾವ ರೀತಿಯಲ್ಲಿ? ಎಲ್ಲಿದ್ದಾನೆ? ಎಂದು ವಿವರಿಸಲಾಗಿದೆ. ಅಂದರೆ ಪರಮಾತ್ಮನ ಒಂದು ಭಾಗವಾಗಿರುವ ಜೀವಾತ್ಮದ ಬಗ್ಗೆ, ಮಾನವರಲ್ಲಿ ಜೀವಾತ್ಮವಿರುವ ಸ್ಥಾನದ ಬಗ್ಗೆ ವಿವರಿಸಲಾಗಿದೆ.

ಮೂರನೆಯ ಭಾಗದಲ್ಲಿ ಅಂತಹ ಶ್ರೇಷ್ಠವಾದ ಪರಮಾತ್ಮನ ವಿಷಯದಲ್ಲಿ ಏನು ಮಾಡಬೇಕು ಎಂದು ವಿವರಿಸಲಾಗಿದೆ.

ಸಹಜವಾಗಿ ಮನುಷ್ಯರಿಗೆ ಒಂದು ಅನುಮಾನ ಇರುತ್ತದೆ. ಮಾನವನ ಶರೀರದಲ್ಲಿಯೇ ಭಗವಂತ ಇರುತ್ತಾನೆ ಎಂದು ಹೇಳುತ್ತಾರೆ. ಆದರೆ ಎಲ್ಲಿದ್ದಾನೆ? ಯಾವ ಭಾಗದಲ್ಲಿ ಇದ್ದಾನೆ? ಎಂಬ ಅನುಮಾನವಿದೆ. ಒಂದು ರೀತಿಯಲ್ಲಿ ಹೇಳುವುದಾದರೆ ಆತ ದೇಹದಾದ್ಯಂತ ವ್ಯಾಪಿಸಿದ್ದಾನೆ. ಅವನು ಶಕ್ತಿ ಸ್ವರೂಪನಲ್ಲವೇ! ಆತನ ಶಕ್ತಿಯು ಶರೀರವೆಲ್ಲಾ ವ್ಯಾಪಿಸಿದೆ ಅಣು ಅಣುವಿನಲ್ಲೂ ಹರಡಿದೆ.

ಆದರೆ ಅದಕ್ಕೆ ಒಂದು ಕೇಂದ್ರ ಸ್ಥಾನವಿದೆ. ಆ ಕೇಂದ್ರ ಸ್ಥಾನವೇ ಹೃದಯ. ಶರೀರದಲ್ಲಿ ಆ ಹೃದಯದಲ್ಲಿ ಆತ್ಮ ಯಾವ ರೀತಿಯಲ್ಲಿ ಇದೆ? ಎಂಬುದನ್ನು ಈ ಮಂತ್ರ ಪುಷ್ಪದಲ್ಲಿನ ಎರಡನೇ ಭಾಗದಲ್ಲಿ ವಿವರಿಸಲಾಗಿದೆ ಮಂತ್ರ ಪುಷ್ಪ ದಲ್ಲಿರುವ ಮಂತ್ರಗಳು,

ಅವುಗಳ ಅರ್ಥವನ್ನು ತಿಳಿದುಕೊಂಡರೆ ನಮಗೆ ಇನ್ನೂ ಚೆನ್ನಾಗಿ ಅರ್ಥವಾಗುತ್ತದೆ. ಆದ್ದರಿಂದ ಅವುಗಳ ಬಗ್ಗೆ ತಿಳಿದುಕೊಳ್ಳೋಣ.

**1) "ಪದ್ಮಕೋಶ ಪ್ರತಿಕಾಶಗ್ ಹೃದಯಂ ಚಾಪ್ಯಧೋ ಮುಖಂ"**

ಇದರ ಅರ್ಥವೇನೆಂದರೆ? ಭಗವಂತ ಇರುವುದು ಹೃದಯ ಕಮಲದಲ್ಲಿಯೇ! ಅದನ್ನೇ ಪದ್ಮಕೋಶ ಎನ್ನುತ್ತಾರೆ. ತಾವರೆ ಹೂವಿನ ಆಕಾರದಲ್ಲಿ ಅಧೋ ಮುಖವಾಗಿ ನೇತಾಡುತ್ತಿರುತ್ತದೆ.

**2) "ಅಧೋ ನಿಷ್ಟ್ಯಾ ವಿತಸ್ತ್ಯಾನ್ತೇ ನಾಭ್ಯಾಮುಪರಿ ತಿಷ್ಠತಿ"**

ಅದು ಹೊಕ್ಕುಳಿನಿಂದ ಒಂಭತ್ತು ಇಂಚು ಮೇಲೆ ಕುತ್ತಿಗೆಯಿಂದ ಕೆಳಗೆ ಹೃದಯದಿಂದ ಒಂದು ಇಂಚು ಬಲಭಾಗದಲ್ಲಿ ಇರುತ್ತದೆ. ಹೃದಯ ಎಂದ ತಕ್ಷಣವೇ ಗುಂಡಿಗೆ ಎಂದುಕೊಳ್ಳುತ್ತಾರೆ! ಗುಂಡಿಗೆ, ಹೃದಯ ಎರಡೂ ಒಂದಲ್ಲ. ಗುಂಡಿಗೆಯ ಒಂದು ಇಂಚು ಬಲ ಭಾಗದಲ್ಲಿರುವ ಹೃದಯದಲ್ಲಿ ಆತ ಇರುತ್ತಾನೆ.

**3) "ಜ್ವಾಲಾ ಮಾಲಾಕುಲಂ ಭಾತಿ ವಿಶ್ವಸ್ಯಾಯ ತನಂ ಮಹತ್"**

ಅಲ್ಲಿ ಇಡೀ ವಿಶ್ವದ ಆಧಾರವಾಗಿರುವ ಪರಮಾತ್ಮನು ಅಗ್ನಿ ಜ್ವಾಲೆಯಂತೆ ಪ್ರಕಾಶಿಸುತ್ತಾನೆ.

**4) "ಸನ್ತತಗ್ಮ್ ಶಿರಾಬಿಸ್ತುಲಂಬ ತ್ಯಾಕೋಶ ಸನ್ನಿಭಂ"**

ಅಲ್ಲಿಂದ ಅನೇಕ ರಕ್ತನಾಳಗಳು ದೇಹದಾದ್ಯಂತ ವ್ಯಾಪಿಸಿರುತ್ತವೆ.

**5) " ತಸ್ಯಾಂತೇ ಸುಶೀರಗ್ಮ್ ಸೂಕ್ಷ್ಮಂ ತಸ್ಮಿನ್ಸರ್ವಂ ಪ್ರತಿಷ್ಠಿತಂ"**

ಆ ಮೊಗ್ಗು ಅಂದರೆ ಪದ್ಮಕೋಶದ ಕೊನೆಯಲ್ಲಿ ಒಂದು ಸಣ್ಣ ರಂಧ್ರ ಅಂದರೆ ಖಾಲಿ ಜಾಗವಿದೆ.

**6) ತಸ್ಯ ಮಧ್ಯೇ ಮಹೋ ನಗ್ನಿ ರ್ವಿಶ್ವಾರ್ಸಿ ರ್ವಿಶ್ವತೋ ಮುಖಃ?**

**ಸೋಗ್ರ ಭುಗ್ವಿ ಭಜನ್ ತಿಷ್ಠನ್ನಾಹಾರ ಮಜರಃ ಕವಿಃ?**

ಅದರೊಳಗೆ ಶ್ರೇಷ್ಠವಾದ ಅಗ್ನಿ ಇದೆ, ಅದರಲ್ಲಿನ ಜ್ವಾಲೆಗಳು ಶರೀರದಲ್ಲಿ ಎಲ್ಲಾ ಕಡೆ ವ್ಯಾಪಿಸಿವೆ. ಆ ಅಗ್ನಿಯನ್ನೇ ವೈಶ್ಯಾ ನರಾಗ್ನಿ ಎನ್ನುತ್ತಾರೆ. ಆ ಅಗ್ನಿಯೇ ಮಾನವನು ಸೇವಿಸುವ ಆಹಾರವನ್ನು ಜೀರ್ಣಗೊಳಿಸಿ ಆ ಶಕ್ತಿಯನ್ನು ಇಡೀ ಶರೀರಕ್ಕೆ ಹಂಚುತ್ತದೆ.

ಇದನ್ನೇ ಭಗವದ್ಗೀತೆಯ 15ನೆಯ ಅಧ್ಯಾಯದಲ್ಲಿ 14ನೇ ಶ್ಲೋಕದಲ್ಲಿ ಹೆಚ್ಚು ವಿವರವಾಗಿ ತಿಳಿಸಲಾಗಿದೆ.

**ಶ್ಲೋ॥ ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।**

**ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥**

**ತಾತ್ಪರ್ಯ:–** ನಾನು ವೈಶ್ವಾನರ! ಜಠರಾಗ್ನಿಯಾಗಿ ಪ್ರಾಣಿಗಳ ಶರೀರವನ್ನು ಆಶ್ರಯಿಸಿ! ಪ್ರಾಣ ಅಪಾನ ವಾಯುಗಳೊಂದಿಗೆ ಕೂಡಿಕೊಂಡು ನಾಲ್ಕು ವಿಧಗಳಲ್ಲಿ ಆಹಾರವನ್ನು ಜೀರ್ಣಿಸುವ ಕಾರ್ಯವನ್ನು ಮಾಡುತ್ತೇನೆ ಎಂಬುದು ಇದರರ್ಥ. ಇಲ್ಲಿ ಭಗವಂತ ಮಾನವರು ತೆಗೆದುಕೊಳ್ಳುವ ನಾಲ್ಕು ವಿಧವಾದ ಆಹಾರವನ್ನು ಜೀರ್ಣಿಸುವವನು ಸಹ ನಾನೇ ಎಂದು ಹೇಳುತ್ತಿದ್ದಾನೆ.

ಹಾಗಾದರೆ ಆ ನಾಲ್ಕು ವಿಧದ ಆಹಾರಗಳು ಯಾವುವು ಎಂದು ನೋಡೋಣ.

1) **ಭಕ್ಷ್ಯ :–** ಅಂದರೆ ಹಲ್ಲುಗಳಿಂದ ಕಚ್ಚಿ ತಿನ್ನುವ ಗಟ್ಟಿಯಾದ ಆಹಾರ ಪದಾರ್ಥಗಳು, ಹಿಟ್ಟಿನಿಂದ ತಯಾರಿಸಿದ ತಿಂಡಿಗಳು, ಕಠಿಣ ಪದಾರ್ಥಗಳು ಅಂದರೆ ಚಕ್ಕುಲಿಗಳು, ನಿಪ್ಪಟ್ಟುಗಳು, ಕೋಡುಬಳೆಗಳು ಇತ್ಯಾದಿ. ಹಾಗೆಯೇ ತರಕಾರಿಗಳು, ಗಟ್ಟಿಯಾದ ಹಣ್ಣುಗಳು ಮುಂತಾದವು.

2) **ಭೋಜ್ಯ:–** ನಾಲಿಗೆಯಿಂದ ಚಪ್ಪರಿಸಿ ನುಂಗುವ ಮೃದುವಾದ ಪದಾರ್ಥಗಳಾದ ಅನ್ನ ಮುಂತಾದವು.

3) **ಲೇಹ್ಯ:–** ನಾಲಿಗೆಯಿಂದ ರುಚಿ ನೋಡಲ್ಪಡುವ ಉಪ್ಪಿನಕಾಯಿಗಳು ಇತ್ಯಾದಿ.

4) **ಚೋಷ್ಯ:–** ಬಾಯಿಯ ಮೂಲಕ ಹೀರಲ್ಪಡುವ ಪಾಯಸ, ಸಾರು, ಮಜ್ಜಿಗೆ ಮುಂತಾದವು.

ಹೀಗೆ ಮನುಷ್ಯ ನಾಲ್ಕು ವಿಧಗಳಲ್ಲಿ ಆಹಾರವನ್ನು ಸೇವಿಸುತ್ತಾನೆ. ಇದರ ಆಧಾರದ ಮೇಲೆ ಭಗವದ್ಗೀತೆಯಲ್ಲಿಯೂ ಸಹ ಮಾಂಸಾಹಾರವನ್ನು ಮನುಷ್ಯರಿಗೆ ನಿಷೇಧಿಸಲಾಗಿದೆ ಎಂದು ನಮಗೆ ಅರ್ಥವಾಗುತ್ತದೆ

ಅದಕ್ಕಾಗಿಯೇ ಮಾನವರಿಗೆ ಮಾಂಸಾಹಾರ ನಿಷಿದ್ಧ ಎಂದು ಪತ್ರಿಯವರು ಹೇಳುತ್ತಿರುತ್ತಾರೆ. ಹೀಗೆ ಇವೆಲ್ಲವನ್ನು ಆ ಜಠರಾಗ್ನಿಯೇ ಜೀರ್ಣ ಮಾಡುತ್ತದೆ.

6) **ತಿರ್ಯಗೂರ್ದ್ವ ಮಧಶ್ಚಾಯಿರಶ ಯಸ್ತಸ್ಯ ಸನ್ತತಾ!**
**ಸನ್ತಾ ಪಯತಿ ಸ್ವಂದೇಹ ಮಾ ಪಾದ ತಲ ಮಸ್ತಕಃ ಮಸ್ತಕಃ**

ಆ ಅಗ್ನಿಗೆ ಮುದಿತನವೇ ಇಲ್ಲ ಅಂದರೆ? ವೃದ್ಧಾಪ್ಯವಿಲ್ಲ. ಇಲ್ಲಿ ಇದನ್ನು ಏಕೆ ಹೇಳಲಾಗಿದೆ? ಮುದಿತನ ಬಂದರೆ ಅವರ ಶಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ. ಆದರೆ ಹೃದಯದಲ್ಲಿರುವ ಭಗವಂತನ ಶಕ್ತಿ ಎಂದಿಗೂ ಕಡಿಮೆಯಾಗುವುದಿಲ್ಲ. ಅದರ ಕಿರಣಗಳು ಅಡ್ಡವಾಗಿ, ಉದ್ದವಾಗಿ, ಕೆಳಗೆ, ಮೇಲೆ, ಶರೀರದಲ್ಲಿ ಪಾದಗಳಿಂದ ತಲೆಯವರೆಗೆ ಎಲ್ಲಾ ದಿಕ್ಕುಗಳಲ್ಲಿಯೂ ಹರಡಿರುತ್ತವೆ.

7) **ತಸ್ಯ ಮಧ್ಯೇ ವಹ್ನಿ ಶಿಖಾ ಯೊರ್ಧ್ವಾ ವ್ಯವಸ್ಥಿತಃ!**

ಆ ಕಿರಣಗಳ ನಡುವೆ ಮೇಲಕ್ಕೆ ಪ್ರಸರಿಸುವ ತೆಳುವಾದ ಒಂದು ಅಗ್ನಿ ಶಿಖೆ ಅಂದರೆ ಬೆಂಕಿಯ ಜ್ವಾಲೆ ಇದೆ.

8) **ನೀಲ ತೋ ಯದಮಧ್ಯಸ್ತಾ ದ್ವಿದ್ಯುಲ್ಲೇಖೇನ ಭಾಸ್ವರಾಃ**

ಅದು ಕಪ್ಪು ಮೋಡದ ಮಧ್ಯದಲ್ಲಿ ಮಿಂಚಿನ ಬಳ್ಳಿ ಹೇಗೆ ಹೊಳೆಯುತ್ತದೆಯೋ! ಹಾಗೆ ಹೊಳೆಯುತ್ತಾ ಇರುತ್ತದೆ. ಮಳೆಗಾಲದಲ್ಲಿ ಮಿಂಚು ಎಷ್ಟು ಪ್ರಕಾಶಮಾನವಾಗಿರುತ್ತದೆಯೋ ಇಲ್ಲಿ ಹಾಗೆಯೇ ಹೊಳೆಯುತ್ತಿರುತ್ತದೆ.

9) **ನೀವಾರ ಶೂಕ ವತ್ತನ್ವೀ ಪೀತಾ ಭಾಸ್ಯತ್ಯ ಸೂಪಮಾ**

ಆ ಅಗ್ನಿಜ್ವಾಲೆಯು ಭತ್ತದ ಮುಳ್ಳು ಎಷ್ಟು ತೆಳುವಾಗಿರುತ್ತದೆಯೋ! ಹಳದಿ ಮಿಶ್ರಿತ ಹಸಿರು ಬಣ್ಣವನ್ನು ಹೊಂದಿ, ಅಣುವಿನಂತೆ ಇರುತ್ತದೆ. ಸುಂದರವಾಗಿ ಹೊಳೆಯುತ್ತಿರುತ್ತದೆ.

10) **ತಸ್ಯಾ ಶ್ಶಿಖಾಯ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ**

ಆ ಅಗ್ನಿ ಜ್ವಾಲೆಯ ಮಧ್ಯದಲ್ಲಿ ಪರಮಾತ್ಮ ಇದ್ದಾನೆ. ಆ ಹೃದಯವೆಂಬ ಪದ್ಮಕೋಶದಲ್ಲಿ ಇರುವಂತಹ ಅಗ್ನಿ ಜ್ವಾಲೆಯಲ್ಲಿ ಪರಮಾತ್ಮ ಇದ್ದಾನೆ. ಅಂದರೆ? ಆತ್ಮ ಇದೆ.

ಇದನ್ನಾಧರಿಸಿ ಮಂತ್ರ ಪುಷ್ಪದಲ್ಲಿ ಪರಮಾತ್ಮನು ಮಾನವನ ಶರೀರದಲ್ಲಿ ಎಲ್ಲಿದ್ದಾನೆ? ಎಂಬ ವಿಷಯವನ್ನು ಬಹಳ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಅಂದರೆ ಮಾನವನ ಹೃದಯದಲ್ಲಿಯೇ ಭಗವಂತನು ಇದ್ದಾನೆ ಎಂದು ಹೇಳಲಾಗಿದೆ.

ಮನುಷ್ಯರು ಸಾಮಾನ್ಯವಾಗಿ ಏನು ಮಾಡುತ್ತಾರೆಂದರೆ? ಪೂಜೆ ಮುಗಿದ ನಂತರ ಆ ಪುರೋಹಿತರು ಅಲ್ಲಿರುವ ಎಲ್ಲರ ಕೈಯಲ್ಲಿ ಹೂಗಳನ್ನು ಇಟ್ಟು, ಈ ಮಂತ್ರ ಪುಷ್ಪದ ಮಂತ್ರಗಳನ್ನೆಲ್ಲಾ ಪಠಿಸುತ್ತಾರೆ.

ಪಠಣದ ನಂತರ ಆ ಹೂಗಳನ್ನು ಸ್ವಲ್ಪ ಹಣದೊಂದಿಗೆ ತಟ್ಟೆಯಲ್ಲಿ ಹಾಕುತ್ತಾರೆ. ಆಗ ಪೂಜಾರಿಗಳು ಆ ಪುಷ್ಪಗಳನ್ನು ಆ ವಿಗ್ರಹದ ಪಾದಗಳ ಹತ್ತಿರ ಇರಿಸಿ ಗೋತ್ರದ ಹೆಸರುಗಳನ್ನು ಓದುತ್ತಾರೆ. ಆಗ ಪೂಜೆ ಪೂರ್ಣಗೊಂಡಿದೆ ಎಂದು ಪರಿಗಣಿಸುತ್ತಾರೆ. ಆದ್ದರಿಂದ ಮಂತ್ರ ಪುಷ್ಪವೆಂದರೆ? ಮಂತ್ರಗಳನ್ನು ಓದಿ ಆ ಪುಷ್ಪಗಳನ್ನು ಪಾದಗಳ ಹತ್ತಿರ ಇಟ್ಟು ಬೇಕಾದ ಕೋರಿಕೆಗಳನ್ನು ಕೋರುವುದಲ್ಲ.

ಮಂತ್ರ ಪುಷ್ಪದ ಅರ್ಥ ಅತ್ಯಂತ ಶ್ರೇಷ್ಠನಾದ ಭಗವಂತನನ್ನು ಧ್ಯಾನಿಸುವುದು. ನಾವೆಲ್ಲರೂ ಅದೇ ಕೆಲಸವನ್ನು ಮಾಡುತ್ತಿದ್ದೇವೆ. ತೈತ್ತಿರೀಯ ಉಪನಿಷತ್ತಿನಲ್ಲಿ ವ್ಯಾಸ ಭಗವಾನರು ಬರೆದಿರುವ ಆ ಮಂತ್ರ ಪುಷ್ಪದಲ್ಲಿ ಏನು ಹೇಳಲಾಗಿದೆಯೋ? ಅದೇರೀತಿ ನಾವೆಲ್ಲರೂ ಆ ಹೃದಯದಲ್ಲಿರುವ ಆತ್ಮವನ್ನು ಅಂದರೆ ಭಗವಂತನನ್ನು ಧ್ಯಾನಿಸುತಿದ್ದೇವೆ. ಅದು ಸಹ "ಶ್ವಾಸದ ಮೇಲೆ ಗಮನ" ಇರಿಸಿದಾಗಲೇ ಆ ಹೃದಯದೊಳಗೆ ನಾವು ತಲುಪಬಹುದು.

ಧ್ಯಾನದಲ್ಲಿ ಮೊದಲಿಗೆ ಕಣ್ಣುಗಳನ್ನು ಮುಚ್ಚಿದಾಗ ಶರೀರದೊಳಗೆ ಇರುತ್ತೇವೆ, 'ಶ್ವಾಸದ ಮೇಲೆ ಗಮನ' ವಿರುಸಿದಾಗ ಆಲೋಚನೆಗಳು ನಿಲ್ಲುತ್ತವೆ, ಅಲ್ಲಿ ಮನಸ್ಸು ಎಂಬುದು ಇರುವುದಿಲ್ಲ, ಆಗ ಏನು ಮಾಡುತ್ತೇವೆ? ಹೃದಯದಲ್ಲಿರುವ ಆತ್ಮದೊಂದಿಗೆ ನಾವು ಇರಲು ಸಾಧ್ಯವಾಗುತ್ತದೆ, ಆ ಸಮಯದಲ್ಲಿ ಆ ರೀತಿ ಇರುತ್ತಾ ಇರುತ್ತಾ ಭಗವಂತನ ಲಕ್ಷಣಗಳು, ಶಕ್ತಿಗಳು ಒಂದೊಂದಾಗಿ ಸ್ವಲ್ಪಮಟ್ಟಿಗೆ ನಮಗೆ ಬರುತ್ತವೆ.

ಎಷ್ಟು ಗಂಟೆಗಳ ಸಮಯ ಆ ಭಗವಂತನೊಂದಿಗೆ, ಆ ಪರಮಾತ್ಮನೊಂದಿಗೆ ಇರಲು ಸಾಧ್ಯವಾಗುತ್ತದೆಯೋ ನೀವು ಅಷ್ಟು ಶ್ರೇಷ್ಠರಾಗುತ್ತೀರಿ. ಅದಕ್ಕಾಗಿಯೇ ಹೆಚ್ಚು ಧ್ಯಾನ ಮಾಡುವವರಲ್ಲಿ ದೇವರ ಗುಣಗಳು ಹೆಚ್ಚಾಗುತ್ತವೆ. ಧ್ಯಾನ ಮಾಡದಿದ್ದರೆ ಸಾಮಾನ್ಯ ಮಾನವರಂತೆ ಉಳಿಯುತ್ತಾರೆ. ಅದಕ್ಕಾಗಿಯೇ ಬಹಳ ಜನ್ಮಗಳು ಬೇಕಾಗಿಲ್ಲ ಶ್ರಮಪಟ್ಟರೆ ಈ ಜನ್ಮದಲ್ಲಿಯೇ ದೇವರಾಗಿ ಬದಲಾಗುವಿರಿ. ಅದಕ್ಕಾಗಿಯೇ ಪತ್ರೀಜಿ ಮಾನವನು ಮಾಧವನಾಗಬೇಕೆಂದು ಹೇಳುತ್ತಾರೆ.

**"ಪರಿಧಿಗೆ ಪರಿಮಿತವಾಗುವವನು ಮೂರ್ಖನು,**
**ಪರಿಧಿಗಳನ್ನು ದಾಟಿ ಕಲಿತುಕೊಳ್ಳುವುದಕ್ಕೆ**
**ಪ್ರಯತ್ನಿಸುವನೇ ವಿವೇಕವಂತನು'**

**–"ಬ್ರಹ್ಮರ್ಷಿ" ಪಟವರ್ತಿ ವೀರರಾಘವ ರಾವ್**

# “ಧ್ಯಾನ ಮಾಡುವ ವಿಧಾನ”

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

## ಧ್ಯಾನವನ್ನು ಯಾರಾದರೂ ಮಾಡಬಹುದು
## ಯಾವ ವಯಸ್ಸಿನವರಾದರೂ ಮಾಡಬಹುದು
## ಯಾವ ಸಮಯದಲ್ಲಿಯಾದರೂ ಮಾಡಬಹುದು
## ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

| | | |
|---|---|---|
| **ಬ್ಯಾಂಕ್ ಹೆಸರು** | **: ಭಾರತೀಯ ಸ್ಟೇಟ್ ಬ್ಯಾಂಕ್** | **– State Bank of India** |
| **ಶಾಖೆಯ ಹೆಸರು** | **: ಚಾಮರಾಜಪೇಟೆ ಶಾಖೆ** | **– Chamarajapete Branch** |
| **ಖಾತೆ ಸಂಖ್ಯೆ** | **: 30828057680 : I.F.S.C. ಕೋಡ್** | **– S.B.I.N 0005794** |
| **ಖಾತೆಯ ಹೆಸರು** | **: ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ** | **– K.P.D.P. Trust A/c. Dhayana Kasturi** |

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



ಯೋಗಿಶ್ವರರು ಎಂದರೆ ಸಾಮಾನ್ಯರಲ್ಲ, ಯೋಗಿಗಳಲ್ಲಿ ಶ್ರೇಷ್ಠರು ಅವರನ್ನೇ ಬುದ್ಧ ಉತ್ತಮ ಪುರುಷ ಎಂದಿದ್ದಾರೆ, ಶ್ರೀ ಕೃಷ್ಣ ಪಂಡಿತ ಎಂದಿದ್ದಾರೆ ಪತ್ರೀಜಿ ಯೋಗೀಶ್ವರ ಎಂದಿದ್ದಾರೆ. ಎಲ್ಲರೂ ಆ ಸ್ಥಿತಿಗೆ ಬರಬೇಕೆಂಬುದೇ ಅವರ ಗುರಿ ಆ ಸ್ಥಿತಿಗೆ ಸೇರಲು ಏನು ಮಾಡಬೇಕೆಂದು ಅವರು ಸಾಮಾನ್ಯ ಮಾನವರಿಗೆ ಬೋಧಿಸಿದ್ದಾರೆ.

ಯೋಗೀಶ್ವರರು ದೇಹಕ್ಕೆ ಪ್ರಾಮುಖ್ಯತೆ ನೀಡಅಿಲ್ಲ ಕಾರಣ ದೇಹವು ಅಶಾಶ್ವತವಾದ್ದು, ಕೆಲವು ದಿನಗಳು ಮಾತ್ರ ಇರುತ್ತದೆ, ನಂತರ ಬೂದಿಯಲ್ಲಿ ಬೆರೆತು ಹೋಗುತ್ತದೆ, ಅಂದರೆ ನಶಿಸಿ ಹೋಗುತ್ತದೆ. ಆದರೆ ಆತ್ಮ ಶಾಶ್ವತವಾದದ್ದು, ಅದಕ್ಕಾಗಿಯೇ ಅವರು ಏನು ಹೇಳಿದರೂ ಆತ್ಮದ ಬಗ್ಗೆಯೇ ಆತ್ಮಕ್ಕಾಗಿಯೇ ಹೇಳುತ್ತಾರೆ.

ಆತ್ಮಕ್ಕೆ ಉಪಕಾರ ಮಾಡಿದರೆ ಮಾತ್ರ ಮೋಕ್ಷ ಲಭಿಸುತ್ತದೆ ಎಂಬುದನ್ನು ಮರೆಯಬಾರದು ಅದಕ್ಕಾಗಿಯೇ ಪತ್ರೀಜಿ ಆತ್ಮಕ್ಕೆ ಲಾಭವನ್ನುಂಟು ಮಾಡುವ ಸೇವೆಗಳನ್ನೇ ಮಾಡಬೇಕು ಎಂದು ಹೇಳುತ್ತಿದ್ದರು.

ಸತ್ಯವನ್ನು ಅಂದರೆ ಆತ್ಮವನ್ನುಜ ಜಬಿಡಬೇಡಿ, ಆತ್ಮಜ್ಞಾನವನ್ನು ಸಂಪಾದಿಸಿ, ಆತ್ಮಜ್ಞಾನವನ್ನು ಎಲ್ಲರಿಗೂ ಬೋದಿಸಿ, ಪ್ರಕೃತಿ ನಿಮಗೂ ಸಹಕಾರ ನೀಡುತ್ತದೆ.

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವು

ರೂ 40/-


ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada • www.meditationeverywhere.org

• www.pssmovement.org






ಶ್ರೀರಾಮ ಪಬ್ಲಿಕೇಶನ್ಸ್

ಶ್ರೀರಾಮಧಾಮ ಧ್ಯಾನಕೇಂದ್ರ,

ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - 560 066

ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ / 9449695503

ವಿಜಯಲಕ್ಷ್ಮಿ ಎಸ್.ಎನ್ / 8050082689